# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಫೆಬ್ರವರಿ 17, 2022

ಸಂಪುಟ : 48 ಸಂಚಿಕೆ : 278 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com



BSC
B.S. CHANNABASAPPA & SONS
ಸ್ಥಾಪನೆ - 1938
Shop Online @ www.bscfashion.com

ಮದುವೆ ಜವಳಿಗೆ ರಾಜ್ಯದಲ್ಲಿಯೇ ಪ್ರಸಿದ್ಧವಾದ ಬಟ್ಟೆ ಅಂಗಡಿ #ಬಟ್ಟೆ ಅಂದರೆ BSC

ಬಿ.ಎಸ್.ಚನ್ನಬಸಪ್ಪ & ಸನ್ಸ್
ದಾವಣಗೆರೆ
88804 33000


## ಜಿಲ್ಲೆಯಲ್ಲಿ ಕಾಲೇಜುಗಳು ಪುನರಾರಂಭ

### ಹಿಜಾಬ್ ತೆಗೆಯಲು ಒಪ್ಪದೆ ವಾಪಸ್ಸಾದ ವಿದ್ಯಾರ್ಥಿನಿಯರು




ದಾವಣಗೆರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಿಜಾಬ್ ತೆಗೆಯಲು ಒಪ್ಪದೇ ವಾಪಸ್ಸಾಗುತ್ತಿರುವ ವಿದ್ಯಾರ್ಥಿನಿಯರು. ಮೊಬೈಲ್ ನಿಷೇಧ ಹಿನ್ನೆಲೆಯಲ್ಲಿ ವಿದ್ಯಾರ್ಥಿನಿಯೊಬ್ಬರ ಬ್ಯಾಗ್ ಪರಿಶೀಲಿಸುತ್ತಿರುವ ಕಾಲೇಜು ಸಿಬ್ಬಂದಿ (ಬಲಚಿತ್ರ)

ದಾವಣಗೆರೆ, ಫೆ.16- ಹಿಜಾಬ್ ಹಾಗೂ ಕೇಸರಿ ಶಾಲು ವಿವಾದದಿಂದಾಗಿ ರಜೆ ಘೋಷಿಸಲಾಗಿದ್ದ ಪಿಯುಸಿ ಹಾಗೂ ಪ್ರಥಮ ದರ್ಜೆ ಕಾಲೇಜುಗಳು ಇಂದು ಪುನರಾರಂಭಗೊಂಡಿವೆ.

ಧಾರ್ಮಿಕ ಸಂಕೇತದ ಬಟ್ಟೆಗಳನ್ನು ವಿದ್ಯಾರ್ಥಿಗಳು ಧರಿಸುವಂತಿಲ್ಲ ಎಂಬ ಹೈ ಕೋರ್ಟ್ ಮಧ್ಯಂತರ ಆದೇಶದ ಹೊರತಾಗಿಯೂ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ಕಾಲೇಜಿಗೆ ಆಗಮಿಸಿದ್ದರು.

ಹಿಜಾಬ್ ಧರಿಸುವಂತಿಲ್ಲ ಎಂಬ ಅಧ್ಯಾಪಕರು, ಅಧಿಕಾರಿಗಳ ಮನವಿಗೆ ಕೆಲ ವಿದ್ಯಾರ್ಥಿನಿಯರು ಹಿಜಾಬ್ ತೆಗೆದು ಕಾಲೇಜು ಪ್ರವೇಶಿಸಿದರೆ, ಮತ್ತೆ ಕೆಲವರು ಹಿಜಾಬ್ ತೆಗೆಯಲು ನಿರಾಕರಿಸಿ, ನಮಗೆ ಹಿಜಾಬ್ ಮುಖ್ಯ ಎಂದು ಕಾಲೇಜಿನಿಂದ ಹೊರ ನಡೆದರು.

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಜನಹಳ್ಳಿ ಸೀತಮ್ಮ ಬಾಲಕಿಯರ ಸರ್ಕಾರಿ ಪಿಯು ಕಾಲೇಜು, ಮೋತಿ ವೀರಪ್ಪ ಕಾಲೇಜು ಸಹಿತ ವಿವಿಧ ಕಾಲೇಜುಗಳಲ್ಲಿ ಸಾವಿರಾರು ವಿದ್ಯಾರ್ಥಿನಿಯರು ತರಗತಿಗೆ ಹಾಜರಾದರೆ, ಹಿಜಾಬ್ ಧರಿಸಿ ಬಂದ ಹಲವರು ಮನವೊಲಿಕೆಗೆ ಬಗ್ಗದೆ ವಾಪಸ್ ತೆರಳಿದರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕೆಲ (2ನೇ ಪುಟಕ್ಕೆ)

### ಹಿಜಾಬ್ ಬಿಡಲೊಪ್ಪದ ಎವಿಕೆ ಕಾಲೇಜಿನ 18 ವಿದ್ಯಾರ್ಥಿನಿಯರು ಮನೆಗೆ

**ಹಿಜಾಬ್ ಧರಿಸಿ ಬಂದ 35 ವಿದ್ಯಾರ್ಥಿನಿಯರು ಹಿಜಾಬ್ ತೆಗೆಯುವುದಿಲ್ಲ ಎಂದು ಹಠ ಮಾಡಿದರು. ಆದರೆ ನಾನು ಸೇರಿದಂತೆ ಕಾಲೇಜು ಅಧ್ಯಾಪಕರು, ಪೊಲೀಸರು ಮನವೊಲಿಕೆಗೆ ಪ್ರಯತ್ನಿಸಿದೆವು. ಈ ವೇಳೆ 17 ವಿದ್ಯಾರ್ಥಿನಿಯರು ಹಿಜಾಬ್ ತೆಗೆದು ತರಗತಿಗೆ ಹಾಜರಾದರೆ, ಉಳಿದ 18 ವಿದ್ಯಾರ್ಥಿನಿಯರು ಹಿಜಾಬ್ ತೆಗೆಯುವುದಿಲ್ಲ ಎಂದು ವಾಪಾಸ್ ತೆರಳಿದರು ಎಂದು ಎವಿಕೆ ಕಾಲೇಜು ಪ್ರಾಂಶುಪಾಲ ಬಿ.ಪಿ. ಕುಮಾರ್ ತಿಳಿಸಿದರು. ಮೊಬೈಲ್ ನಿಷೇಧಿಸಿ ಜಿಲ್ಲಾಡಳಿತದ ಆದೇಶಿಸಿದ್ದ ಹಿನ್ನೆಲೆಯಲ್ಲಿ ಪ್ರತಿಯೊಬ್ಬರನ್ನೂ ಚೆಕ್ ಮಾಡಿ ಒಳ ಬಿಡಲಾಗಿದೆ. ಯಾವುದೇ ವಿವಾದಕ್ಕೆ ಆಸ್ಪದ ನೀಡದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿತ್ತು ಎಂದವರು ಪತ್ರಿಕೆಗೆ ಹೇಳಿದರು.**

## ಹರಿಹರ: ಹಿಜಾಬ್‌ಗಾಗಿ ಕಣ್ಣೀರು ಹಾಕಿದ ವಿದ್ಯಾರ್ಥಿನಿ ಮನವೊಲಿಕೆ

ಹರಿಹರ, ಫೆ. 16 – ಹಿಜಾಬ್ ವಿವಾದದ ನಂತರ ತಾಲ್ಲೂಕಿನ ಪಿ.ಯು. ಹಾಗೂ ಪದವಿ ಕಾಲೇಜುಗಳಲ್ಲಿ ಪಾಠಗಳು ಎಂದಿನಂತೆ ಆರಂಭವಾಗಿದ್ದು, ವಿದ್ಯಾರ್ಥಿನಿಯರು ಹಿಜಾಬ್ ರಹಿತವಾಗಿ ಬಂದು ತರಗತಿಗಳಿಗೆ ಹಾಜರಾಗಿದ್ದಾರೆ.

ಧ.ರಾ.ಮ. ಕಾಲೇಜಿನ ವಿದ್ಯಾರ್ಥಿನಿಯೊಬ್ಬರು ಮಾತ್ರ ಹಿಜಾಬ್ ಧರಿಸಿ ಪಾಠ ಕೇಳಲು ಅವಕಾಶ ಮಾಡಿಕೊಡಬೇಕೆಂದು ಕಣ್ಣೀರು ಹಾಕಿದ ಘಟನೆ ನಡೆಯಿತು.

ಈ ಬಗ್ಗೆ ಸ್ಥಳೀಯ ನಗರಸಭಾ ಸದಸ್ಯ ಆರ್.ಸಿ. ಜಾವೇದ್ ಅವರಿಗೆ ಮಾಹಿತಿ ನೀಡಲಾಯಿತು. ಸ್ಥಳಕ್ಕೆ ಆಗಮಿಸಿದ ಅವರು, ಹಿಜಾಬ್ ತೆಗೆದು ಪಾಠ ಕೇಳುವಂತೆ ಮನವೊಲಿಸಿದರು. ಈ ಘಟನೆ ಹೊರತುಪಡಿಸಿದರೆ ಉಳಿದ ಶಾಲಾ - ಕಾಲೇಜುಗಳಲ್ಲಿ ಎಂದಿನಂತೆ ಪಾಠಗಳು ನಡೆದಿವೆ.

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಭೇಟಿ ನೀಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ಪರಿಸ್ಥಿತಿ ಕುರಿತು ವಿವರ ಪಡೆದರು.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಸರ್ಕಾರದ ಮಾರ್ಗಸೂಚಿ ಅನ್ವಯ ಶಿಕ್ಷಣ ಅಗತ್ಯವಿರುವ ವಿದ್ಯಾರ್ಥಿಗಳು ಹಿಜಾಬ್ ಇಲ್ಲದೇ ಪಾಠ ಕೇಳಬೇಕು. ಧರ್ಮದ ಆಚರಣೆ ಮುಖ್ಯ ಎನ್ನುವವರು ಮನೆಗೆ ತೆರಳಬೇಕು. ಇದರಲ್ಲಿ ತಾರತಮ್ಯಕ್ಕೆ ಅವಕಾಶ ಇಲ್ಲ ಎಂದರು. ಈ ಸಂದರ್ಭದಲ್ಲಿ ದಾವಣಗೆರೆ ಉಪವಿಭಾಗಧಿಕಾರಿ ಮಮತಾ ಹೊಸಗೌಡ್ರು, ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಬಿಇಓ ಬಿ.ಸಿ ಸಿದ್ದಪ್ಪ , ಸಿಪಿಐ ಸತೀಶ್ ಕುಮಾರ್, ಪಿಎಸ್ಐ ಸುನಿಲ್ ಬಸವರಾಜ್ ತೆಲಿ ಸೇರಿದಂತೆ ಇತರರು ಹಾಜರಿದ್ದರು.

**ಪ್ರಥಮ ದರ್ಜೆ ಕಾಲೇಜಿಗೆ ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಗೈರು:** ನಗರದ ಸರ್ಕಾರಿ (2ನೇ ಪುಟಕ್ಕೆ)

# ಭದ್ರಾ ಮೇಲ್ದಂಡೆ ರಾಷ್ಟ್ರೀಯ ಯೋಜನೆಗೆ ಕೇಂದ್ರ ಸಮಿತಿ ಸಮ್ಮತಿ

ಸಿರಿಗೆರೆ, ಫೆ. 16 - ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಯಾಗಿ ಘೋಷಣೆ ಮಾಡಲು ಕೇಂದ್ರ ಸರ್ಕಾರದ ಉನ್ನತ ಹಂತದ ಸಮಿತಿ ನಿನ್ನೆ ಅನುಮೋದನೆ ನೀಡಿದೆ. ರಾಷ್ಟ್ರೀಯ ಯೋಜನೆಯ ನೆರವಿನಿಂದ ರಾಜ್ಯಕ್ಕೆ ಸುಮಾರು 12,500 ಕೋಟಿ ರೂ.ಗಳ ನೆರವು ಸಿಗಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ತರಳಬಾಳು ಬೃಹನ್ಮಠದ ವತಿಯಿಂದ ಆಯೋಜಿಸಲಾಗಿರುವ ತರಳಬಾಳು ಹುಣ್ಣಿಮೆ ಮಹೋತ್ಸವದ ಸಮಾರೋಪ ಸಮಾರಂಭದಲ್ಲಿ

### ತರಳಬಾಳು ಹುಣ್ಣಿಮೆಯಲ್ಲಿ ಸಿಎಂ ಬಸವರಾಜ ಬೊಮ್ಮಾಯಿ

ಭಾಗವಹಿಸಿ ಅವರು ಮಾತನಾಡುತ್ತಿದ್ದರು.

ಈ ಯೋಜನೆ ಮಧ್ಯ ಕರ್ನಾಟಕದಲ್ಲಿ ನೀರಾವರಿಗೆ ತುಂಬಾ ಸಹಕಾರಿಯಾಗಿದೆ. ಇದರಿಂದ ಅಂತರ್ಜಲವೂ ಹೆಚ್ಚಾಗಲಿದೆ ಎಂದು ಬೊಮ್ಮಾಯಿ ತಿಳಿಸಿದ್ದಾರೆ.

ಭದ್ರಾ ಮೇಲ್ದಂಡೆ ಯೋಜನೆಗೆ 2008ರಲ್ಲಿ ಮುಖ್ಯಮಂತ್ರಿಯಾಗಿದ್ದ ಬಿ.ಎಸ್. (2ನೇ ಪುಟಕ್ಕೆ)

### ಯಡಿಯೂರಪ್ಪ – ಬೊಮ್ಮಾಯಿ ಅಪ್ಪ ಮಕ್ಕಳಿದ್ದ ಹಾಗೆ

ರಾಜ್ಯದ ಅಧಿಕಾರದ ಚುಕ್ಕಾಣಿಯನ್ನು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಬಸವರಾಜ ಬೊಮ್ಮಾಯಿ ಅವರಿಗೆ ನೀಡಿದ್ದಾರೆ. ಬೊಮ್ಮಾಯಿ ಕೈಗೆ ಬೀಗ ಕೊಟ್ಟರೆ ಉಪೇಕ್ಷೆ ಮಾಡಿಲ್ಲ ಎಂದು ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ (2ನೇ ಪುಟಕ್ಕೆ)




## ಚೆಂಬೆಳಕಿನ ಕವಿ ಕಣವಿ ಇನ್ನಿಲ್ಲ



ಹುಬ್ಬಳ್ಳಿ, ಫೆ. 16 - 'ಚೆಂಬೆಳಕಿನ ಕವಿ' ಎಂದು ಹೆಸರಾದ ಹಿರಿಯ ಕವಿ ಡಾ. ಚನ್ನವೀರ ಕಣವಿ ಅವರು ಬುಧವಾರ ಅನಾರೋಗ್ಯದಿಂದ ನಿಧನರಾಗಿದ್ದಾರೆ. ಅವರಿಗೆ 93 ವರ್ಷ ವಯಸ್ಸಾಗಿತ್ತು.

ಅನಾರೋಗ್ಯದಿಂದ ಇತ್ತೀಚೆಗೆ ಅವರು ಧಾರವಾಡದ ಎಸ್.ಡಿ.ಎಂ. ಆಸ್ಪತ್ರೆಗೆ ದಾಖಲಾಗಿದ್ದರು. ಚಿಕಿತ್ಸೆಗೆ ಸ್ಪಂದಿಸದೆ ಅವರು ಬುಧವಾರ ಬೆಳಿಗ್ಗೆ 9.12ಕ್ಕೆ ನಿಧನರಾಗಿದ್ದಾರೆ.

ಕಣವಿ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ನಾಡು ಕಂಡಂತಹ ಅತ್ಯಂತ ಸೃಜನಶೀಲ ಸಾಹಿತ್ಯ ರಚನೆಕಾರರು, ಚೆಂಬೆಳಕಿನ ಕವಿ, ನಾಡೋಜ ಚೆನ್ನವೀರ ಕಣವಿ ಅವರು ನಿಧನರಾದ ವಿಷಯ ತಿಳಿದು ತುಂಬಾ ದುಃಖಿತನಾಗಿದ್ದೇನೆ ಎಂದಿದ್ದಾರೆ.

ಸಾಹಿತ್ಯದ ಮುಖಾಂತರ ಅವರು ತಮ್ಮ ಕಲ್ಪನೆ ಹಾಗೂ ವಾಸ್ತವಾಂಶವನ್ನು ಪರಿಣಾಮಕಾರಿಯಾಗಿ ಬಿಂಬಿಸಿದ ಕವಿ ಆಗಿದ್ದರು. ಪ್ರಶಸ್ತಿಗಳಿಗೆ ಗೌರವ ಬರುವ ವ್ಯಕ್ತಿತ್ವ ಅವರದಾಗಿತ್ತು ಎಂದು ಬೊಮ್ಮಾಯಿ ತಿಳಿಸಿದ್ದಾರೆ. ಗದಗ ಜಿಲ್ಲೆಯ ಹೊಂಬಳ ಗ್ರಾಮದಲ್ಲಿ (2ನೇ ಪುಟಕ್ಕೆ)

## ಐದು ಹೆಜ್ಜೆ ಮಾತ್ರ ನಡೆದ ಹರಿಹರೇಶ್ವರ ರಥೋತ್ಸವ

### 144ನೇ ಸೆಕ್ಷನ್‌ಗೆ ಶಾಸಕ ರಾಮಪ್ಪ ಅಸಮಾಧಾನ

ಹರಿಹರ, ಫೆ. 17 - ನಗರದ ಐತಿಹಾಸಿಕ ಶ್ರೀ ಹರಿಹರೇಶ್ವರ ರಥೋತ್ಸವವು ಬೆಳಗ್ಗೆ 5.20ಕ್ಕೆ ಬ್ರಾಹ್ಮೀ ಮುಹೂರ್ತದಲ್ಲಿ ಶ್ರದ್ಧಾ ಭಕ್ತಿಯಿಂದ ನಡೆಯಿತು.

ಶ್ರೀ ಹರಿಹರೇಶ್ವರ ಸ್ವಾಮಿಗೆ ಬೆಳಗಿನ ಜಾವದಲ್ಲಿ ಧಾರ್ಮಿಕ ವಿಧಿ, ವಿಧಾನಗಳು, ರುದ್ರಾಭಿಷೇಕ, ಸಹಸ್ರ ನಾಮ, ಅಲಂಕಾರ, ಮಹಾಮಂಗಳಾರತಿ ಮಾಡಿ ನಂತರದಲ್ಲಿ ಪಲ್ಲಕ್ಕಿ ಮೇಲೆ ಉತ್ಸವ ಮೂರ್ತಿಯನ್ನು ರಥದಲ್ಲಿರಿಸಿ ಉತ್ಸವ ನಡೆಸಲಾಯಿತು. ಅಪಾರ ಭಕ್ತರ ಸಮ್ಮುಖದಲ್ಲಿ ಬೆಳಗಿನ ಜಾವ ಐದು (2ನೇ ಪುಟಕ್ಕೆ)


॥ ಶ್ರೀ ಕಲ್ಲೇಶ್ವರ ಪ್ರಸನ್ನ ॥


25ನೇ ವರ್ಷದ ಪುಣ್ಯಸ್ಮರಣೆ



ಲಿಂ॥ಶಾಮನೂರು ಶಿವಪ್ಪನವರು
ಲಿಂಗೈಕ್ಯ : 17.02.1997
ನೀವು ನಮ್ಮನ್ನಗಲಿ
25 ವರ್ಷಗಳು ಸಂದವು.
ನೀವು ಹಾಕಿಕೊಟ್ಟ
ಮಾರ್ಗದರ್ಶನದಲ್ಲೇ
ಮುನ್ನಡೆಯುತ್ತಾ
ಸದಾ ನಿಮ್ಮ ಸ್ಮರಣೆಯಲ್ಲಿರುವ
ಶ್ರೀ ಶಾಮನೂರು ಜಯಣ್ಣ ಮತ್ತು ಮಕ್ಕಳು, ಸೊಸೆಯಂದಿರು,
ಅಳಿಯಂದಿರು ಹಾಗೂ ಮೊಮ್ಮಕ್ಕಳು.

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

25ನೇ ವರ್ಷದ ಪುಣ್ಯಸ್ಮರಣೆ



ಕಾಯಕದಿಂದ ಕೈಲಾಸ
ಲಿಂ॥ ಶಾಮನೂರು ಶಿವಪ್ಪನವರು
ಲಿಂಗೈಕ್ಯ : 17.02.1997ರ ಸೋಮವಾರ
ನೀವು ನಮ್ಮನ್ನಗಲಿ 25 ವರ್ಷಗಳಾದವು.
ನಮಗೆ ಸದಾ ಮಾರ್ಗದರ್ಶಿಗಳಾಗಿದ್ದು,
ನನ್ನ ಮತ್ತು ನನ್ನ ಕುಟುಂಬ ವರ್ಗದ
ಹಿತೈಷಿಗಳಾಗಿದ್ದ ಹಾಗೂ
ನಗರದ ಗಣ್ಯ ವರ್ತಕರೂ,
ಲಿಂಗವಂತ ಸಮಾಜದ
ಮುಖಂಡರೂ ಆಗಿದ್ದ
ಶರಣ ಶಾಮನೂರು ಶಿವಪ್ಪ ನವರ
25ನೇ ವರ್ಷದ ಪುಣ್ಯಸ್ಮರಣೆಯ ಸಂದರ್ಭದಲ್ಲಿ, ತಮ್ಮನ್ನು ಸದಾ ಸ್ಮರಿಸುವ
ದಿ॥ ಆಲೂರು ಬಸವರಾಜಪ್ಪ ಮತ್ತು ಮಕ್ಕಳು
ಹಾಗೂ ಮೊಮ್ಮಕ್ಕಳು, ದಾವಣಗೆರೆ.

# ಹಿಜಾಬ್ ತೆಗೆಯಲು ಒಪ್ಪದ ವಿದ್ಯಾರ್ಥಿನಿಯರು ಮನೆಗೆ ವಾಪಸ್ : ಅಧಿಕಾರಿಗಳ ಭೇಟಿ



**ಮಲೇಬೆನ್ನೂರು**

ಮಲೇಬೆನ್ನೂರು, ಫೆ.16 - ಹಿಜಾಬ್ ವಿವಾದದಿಂದಾಗಿ ರಜೆ ನೀಡಲಾಗಿದ್ದ ಕಾಲೇಜುಗಳು ಬುಧವಾರದಿಂದ ಮತ್ತೆ ಪ್ರಾರಂಭಗೊಂಡಿವೆ.

ಹೈಕೋರ್ಟ್ ಸೂಚನೆ ಮತ್ತು ಸರ್ಕಾರದ ಆದೇಶದ ನಡುವೆಯೂ ಮಲೇಬೆನ್ನೂರಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನ 15 ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ಆಗಮಿಸಿದ್ದರು.

ಇದೇ ವೇಳೆಗೆ ಆಗಮಿಸಿದ ನೋಡಲ್ ಅಧಿಕಾರಿಗಳೂ ಆದ ಯೋಜನಾ ನಿರ್ದೇಶಕರಾದ ಶ್ರೀಮತಿ ನಜ್ಮಾ ನೇತೃತ್ವದ ಅಧಿಕಾರಿಗಳ ತಂಡ ಹಿಜಾಬ್ ಧರಿಸಿ ಆಗಮಿಸಿದ್ದ ವಿದ್ಯಾರ್ಥಿನಿಯರಿಗೆ ಹೈಕೋರ್ಟ್ ಸೂಚನೆ ತಿಳಿಸಿ, ಹಿಜಾಬ್ ತೆಗೆದು ತರಗತಿಗಳಿಗೆ ತೆರಳುವಂತೆ ಹೇಳಿದರು.

ಇದಕ್ಕೆ ಐವರು ವಿದ್ಯಾರ್ಥಿನಿಯರು ಒಪ್ಪಿಗೆ ನೀಡಿ, ಹಿಜಾಬ್ ತೆಗೆದು ತರಗತಿಗಳಿಗೆ ಹಾಜರಾ ದರೆ ಉಳಿದ 10 ವಿದ್ಯಾರ್ಥಿನಿಯರು ಹಿಜಾಬ್ ತೆಗೆಯದಂತೆ ಮನೆಯಲ್ಲಿ ಹೇಳಿ ಕಳುಹಿಸಿದ್ದಾರೆ, ಹಾಗಾಗಿ ನಾವು ಹಿಜಾಬ್ ತೆಗೆಯುವುದಿಲ್ಲ ಎಂದು ಪಟ್ಟು ಹಿಡಿದರು. ಹಿಜಾಬ್ ಸೇರಿದಂತೆ ಯಾವುದೇ ಶಾಲು ಧರಿಸಿ ತರಗತಿಗೆ ಬರಲು ಅವಕಾಶ ಇಲ್ಲ ಎಂದಾಗ, 10 ವಿದ್ಯಾರ್ಥಿನಿಯರು ಮನೆಗೆ ವಾಪಸ್ಸಾದರು.

ಇದಾದ ಸ್ವಲ್ಪ ಹೊತ್ತಿಗೆ ಉಪವಿಭಾಗಧಿಕಾರಿ ಶ್ರೀಮತಿ ಮಮತಾ ಹೊಸಗೌಡರ್, ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಕೂಡಾ ಕಾಲೇಜಿಗೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡರು.

ಈ ವೇಳೆ ಹಿಜಾಬ್ ಧರಿಸಿದ್ದ ಶಿಕ್ಷಕಿಗೂ ಕೂಡಾ ತಿಳಿ ಹೇಳಿ ಹಿಜಾಬ್ ತೆರವು ಮಾಡಿಸಿದರು.

ಜಿಲ್ಲಾ ಬಿಸಿಎಂ ಅಧಿಕಾರಿ ಅಮಿತ್ ಬಿದರಿ, ಉಪತಹಶೀಲ್ದಾರ್ ಆರ್.ರವಿ, ಪುರಸಭೆ ಮುಖ್ಯಾಧಿಕಾರಿ ಶ್ರೀಮತಿ ರುಕ್ಮಿಣಿ, ಪಿ.ಎಸ್.ಐ. ರವಿಕುಮಾರ್ ಈ ವೇಳೆ ಹಾಜರಿದ್ದರು. ನಂತರ ಬೀರಲಿಂಗೇಶ್ವರ ಪಿಯು ಹಾಗೂ ಡಿಗ್ರಿ ಕಾಲೇಜುಗಳಿಗೆ ಮತ್ತು ಮಾಲ ತೇಶ್ ಕಾಲೇಜಿಗೆ ಶ್ರೀಮತಿ ನಜ್ಮಾ ನೇತೃತ್ವದ ಅಧಿಕಾರಿಗಳು ತೆರಳಿ ಹಿಜಾಬ್ ಧರಿಸಿ ತರಗತಿಗಳಿಗೆ ಬಾರದಂತೆ ವಿದ್ಯಾರ್ಥಿನಿಯರಿಗೆ ತಿಳಿಸಿ, ಕಾಲೇಜು ಮುಖ್ಯಸ್ಥರಿಗೂ ಕೆಲವು ಸೂಚನೆಗಳನ್ನು ನೀಡಿದರು.

ಇದಾದ ಸ್ವಲ್ಪ ಹೊತ್ತಿನ ನಂತರ ಜಿಲ್ಲಾಧಿಕಾರಿಗಳ ಸೂಚನೆ ಮೇರೆಗೆ ಪಿಯು ಡಿಡಿ ಶಿವರಾಜ್ ಅವರು ಇಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಆಗಮಿಸಿ, ಪ್ರಾಚಾರ್ಯ ಹೆಚ್.ಎಸ್. ರಂಗಪ್ಪ ಮತ್ತು ಕಾಲೇಜು ಅಭಿವೃದ್ಧಿ ಸಮಿತಿ, ಉಪನ್ಯಾಸಕರ ಜೊತೆ ಸಭೆ ನಡೆಸಿದರು.

ಗುರುವಾರ ಬೆಳಗ್ಗೆ ಕಾಲೇಜಿನಲ್ಲಿ ಎಲ್ಲಾ ಪೋಷಕರ ಸಭೆ ಕರೆದು ಹಿಜಾಬ್ ಧರಿಸಿ ತರಗತಿಗಳಿಗೆ ಬರುವುದಕ್ಕೆ ಅವಕಾಶ ಇಲ್ಲ ಎಂಬ ಹೈಕೋರ್ಟ್ ಹಾಗೂ ಸರ್ಕಾರದ ಸೂಚನೆಗಳನ್ನು ತಿಳಿಸುವಂತೆ ಹೇಳಿದ ಶಿವರಾಜ್ ಅವರು, ಹಿಜಾಬ್ ತೆರವು ಮಾಡದೆ ತರಗತಿಗಳಿಗೆ ಅವಕಾಶ ಇಲ್ಲ ಸ್ಪಷ್ಟ ಸಂದೇಶವನ್ನು ಎಲ್ಲಾ ಪೋಷಕರಿಗೆ ಮನವರಿಕೆ ಮಾಡಿಕೊಡಿ ಎಂದರು.

ಇದೇ ವೇಳೆಗೆ ಹಿಜಾಬ್ ತೆಗೆಯುವುದಿಲ್ಲ ಎಂದು ಹೇಳಿ ಮನೆಗೆ ವಾಪಸ್ಸಾಗಿದ್ದ ವಿದ್ಯಾರ್ಥಿನಿಯರನ್ನು ಕಾಲೇಜಿಗೆ ಕರೆತಂದ ಪೋಷಕರು, ನಮ್ಮ ಮಕ್ಕಳನ್ನು ಯಾಕೆ ಮನೆಗೆ ಕಳುಹಿಸಿದ್ದೀರಿ ? ಎಂದು ಪ್ರಶ್ನಿಸಿ ಹಿಜಾಬ್ ಇಲ್ಲದಂತೆ ಕಾಲೇಜಿಗೆ ಬರಬೇಕೆಂಬ ಆದೇಶವೆಲ್ಲಿದೆ ತೋರಿಸಿ ಎಂದರು. ಆಗ ಕಾಲೇಜಿನ ಪ್ರಾಚಾರ್ಯರು, ಸರ್ಕಾರದ ಆದೇಶ ತೋರಿಸಿದರು.

ಇದಕ್ಕೆ ಸಮಾಧಾನಗೊಳ್ಳದ ಪೋಷಕ ಮಹಮದ್ ರೋಷನ್ ಅಲಿ ಅವರು, ವೇಲ್ ಹಾಕಿ ಕೊಳ್ಳುವುದಕ್ಕೆ ಅವಕಾಶ ಕೊಡಿ ಎಂದಾಗ ಅದಕ್ಕೂ ಅವಕಾಶ ಇಲ್ಲ ಎಂದು ಸ್ಪಷ್ಟಪಡಿಸಿದರು. ಆಗ ವಿದ್ಯಾರ್ಥಿನಿಯರು ನಾವು ಹಿಜಾಬ್ ತೆಗೆಯುತ್ತೇವೆ ಸಮವಸ್ತ್ರ ನಿಗದಿ ಮಾಡಿ ಎಂದರು. ಈ ಬಗ್ಗೆ ನಾಳೆಯೇ ತಿರ್ಮಾನ ಮಾಡಿ ಎಂದು ಪಿಯು ಡಿಡಿ ಸೂಚಿಸಿದರು.

ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಮೀರ್ ಅಜಾಂ, ಸದಸ್ಯರಾದ ಹಾಲಿವಾಣ ರೇವಣ ಸಿದ್ದಪ್ಪ, ಕೊಕ್ಕನೂರಿನ ಚಂದ್ರಪ್ಪ, ಉಪನ್ಯಾಸಕರಾದ ತಿಪ್ಪೇಸ್ವಾಮಿ, ಗೊಲ್ಲರಹಳ್ಳಿ ಮಂಜುನಾಥ್, ಪಿಎಸ್ಐ ರವಿಕುಮಾರ್ ಹಾಜರಿದ್ದರು.

ಶಾಲೆ - ಕಾಲೇಜುಗಳಿಗೆ ಸೂಕ್ತ ಭದ್ರತೆ ಒದಗಿಸಲಾಗಿತ್ತು.

# ಯೋಜನೆಗೆ ಕೇಂದ್ರ ಸಮಿತಿ ಸಮ್ಮತಿ



**(1ನೇ ಪುಟದಿಂದ)** ಯಡಿಯೂರಪ್ಪ ಶಂಕುಸ್ಥಾಪನೆ ನೆರವೇರಿಸಿದ್ದರು. ಇದರ ಜೊತೆಗೆ ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಗಳನ್ನು ಕೈಗೆತ್ತಿಕೊಂಡಿದ್ದೇವೆ. ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಗಳ ಆಶಯದಂತೆ ನೀರು ಭರ್ತಿ ಮಾಡಲು ಆಗುವ ವಿದ್ಯುತ್ ವೆಚ್ಚವನ್ನು ಸರ್ಕಾರದಿಂದಲೇ ಭರಿಸಲಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ಮಾತನಾಡಿದ ಕೃಷಿ ಸಚಿವ ಬಿ.ಸಿ. ಪಾಟೀಲ್, ರೈತರ ಸೇವೆ ಮಾಡಲಿಕ್ಕಾಗಿ ಯಡಿಯೂರಪ್ಪ ಅವರನ್ನು ಕೇಳಿ ಕೃಷಿ ಖಾತೆ ಪಡೆದಿದ್ದೆ. ರೈತರ ಕಣ್ಣೀರು ಒರೆಸುವ ಕೆಲಸ ಮಾಡುತ್ತಿದ್ದೇನೆ. ರೈತರ ಮಕ್ಕಳು ಕೃಷಿ ಬಿ.ಎಸ್ಸಿ. ಪದವಿಯಲ್ಲಿ ಪಡೆಯುತ್ತಿದ್ದ ಮೀಸಲಾತಿಯನ್ನು ಶೇ.40 ರಿಂದ 50ಕ್ಕೆ ಹೆಚ್ಚಿಸಲಾಗಿದೆ. ರೈತರ ಮಕ್ಕಳ ಉನ್ನತ ವಿದ್ಯಾಭ್ಯಾಸಕ್ಕಾಗಿ ಮುಖ್ಯಮಂತ್ರಿ ರೈತ ವಿದ್ಯಾನಿಧಿ ಯೋಜನೆ ಸ್ಥಾಪಿಸಲಾಗಿದೆ ಎಂದರು.

ವೀರ ಮರಣ ಹೊಂದಿದ ಸೈನಿಕರ ಕುಟುಂಬದವರಿಗೆ ಕಾರ್ಯಕ್ರಮದಲ್ಲಿ ಗೌರವ ಸಲ್ಲಿಸಿ, ಮಠದಿಂದ ತಲಾ 50 ಸಾವಿರ ರೂ.ಗಳನ್ನು ನೀಡಲಾಯಿತು. ಸೈನಿಕರ ಕುಟುಂಬದವರು ಕುಂದು ಕೊರತೆಗಳ ಮನವಿ ಪತ್ರವನ್ನು ಶ್ರೀಗಳಿಗೆ ನೀಡಿದರು. ಈ ಮನವಿಯನ್ನು ಶ್ರೀಗಳು ಬೊಮ್ಮಾಯಿ ಅವರಿಗೆ ನೀಡಿದರು.

ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿ, 2011ರ ಬ್ಯಾಚ್‌ನಲ್ಲಿ ನಡೆದ ಕೆ.ಎ.ಎಸ್. ಪರೀಕ್ಷೆಯಲ್ಲಿ 362 ಜನ ಪಾಸ್ ಆಗಿದ್ದರೂ ಇನ್ನೂ ನೇಮಕಾತಿ ಆಗಿಲ್ಲ. ಉಪವಿಭಾಗಾಧಿಕಾರಿಯಂತಹ ಹುದ್ದೆಗೆ ಹೋಗಬೇಕಿದ್ದ ಬುದ್ಧಿವಂತರು ಈಗ ಸಣ್ಣ ಕೆಲಸಗಳಲ್ಲಿದ್ದಾರೆ. ಸಂಪುಟದಲ್ಲಿ ತೀರ್ಮಾನವಾಗಿದ್ದರೂ, ಅವರಿಗೆ ಆತಂಕವಿದೆ. ಇವರ ನೇಮಕದ ದುಗುಡ ನಿವಾರಣೆಯಾಗಲಿ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ, ಶಿಕ್ಷಣ ಸಚಿವ ಬಿ.ಸಿ.ನಾಗೇಶ್, ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ್, ಸಂಸದ ಜಿ.ಎಂ.ಸಿದ್ದೇಶ್ವರ, ಜಗಳೂರು ಶಾಸಕ ಎಸ್.ವಿ. ರಾಮಚಂದ್ರಪ್ಪ, ರಾಜ್ಯ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷ ಎಂ.ಚಂದ್ರಪ್ಪ, ಹೊನ್ನಾಳಿ ಮಾಜಿ ಶಾಸಕ ಡಿ.ಜಿ. ಶಾಂತನಗೌಡ, ನೀರಾವರಿ ನಿಗಮದ ವ್ಯವಸ್ಥಾಪಕ ಮಲ್ಲಿಕಾರ್ಜುನ ಬಸಪ್ಪ ಗುಂಗೆ, ಮಾಜಿ ಸಚಿವ ಹೆಚ್. ಆಂಜನೇಯ, ಚಿತ್ರದುರ್ಗ ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ, ಚಿತ್ರದುರ್ಗ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಪರಶುರಾಮ್, ಚಿತ್ರದುರ್ಗ ಜಿಲ್ಲಾ ಪಂಚಾಯಿತಿ ಸಿಇಒ ಡಾ.ಕೆ.ನಂದಿನಿದೇವಿ, ದಾವಣಗೆರೆ ವಿವಿ ಕುಲಪತಿ ಪ್ರೊ.ಶರಣಪ್ಪ ಹಲಸೆ ಮತ್ತಿತರರು ಉಪಸ್ಥಿತರಿದ್ದರು.

## ಏತ ನೀರಾವರಿ ಯೋಜನೆಯ ಮುತ್ತೈದೆಯರು

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವರಾದ ಮಾಧುಸ್ವಾಮಿ, ಸಿ.ಸಿ. ಪಾಟೀಲ್, ಗೋವಿಂದ ಕಾರಜೋಳ ಹಾಗೂ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಅವರು ಜಗಳೂರು ಏತ ನೀರಾವರಿ ಯೋಜನೆಯ ಮುತ್ತೈದೆಯರು ಎಂದು ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಬಣ್ಣಿಸಿದ್ದಾರೆ.

ಜೋಡಿ ಏತ ನೀರಾವರಿ ಯೋಜನೆಗಳಾದ ಜಗಳೂರು ಹಾಗೂ ಭರಮಸಾಗರ ಯೋಜನೆಗಳಿಗೆ ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಗಳಾಗಿದ್ದಾಗ ಒಪ್ಪಿಗೆ ನೀಡಲಾಗಿತ್ತು. ಆದರೆ, ಕೇವಲ 250 ಕೋಟಿ ರೂ. ಬಿಡುಗಡೆಯಾಗಿತ್ತು. ಈ ಬಗ್ಗೆ ರವಿಗೆ ಕರೆ ಮಾಡಿ ತರಾಟೆಗೆ ತೆಗೆದುಕೊಂಡಿದ್ದೆ. ಆಗ ಈ ಐವರು ಮುತ್ತೈದೆಯರು ಯಡಿಯೂರಪ್ಪನವರ ಮನವೊಲಿಸಿದ್ದರು ಎಂದು ಕಾಣುತ್ತದೆ. ವಾರದಲ್ಲೇ ಯಡಿಯೂರಪ್ಪನವರು 1,200 ಕೋಟಿ ರೂ. ಮಂಜೂರು ಮಾಡಿದ್ದರು ಎಂದು ಶ್ರೀಗಳು ತಿಳಿಸಿದರು.

1721ರಲ್ಲಿ ಭರಮಣ್ಣ ನಾಯಕರು ಭರಮಸಾಗರ ಕೆರೆ ಕಟ್ಟಿದ್ದರು. ಇದಾಗಿ ಸರಿಯಾಗಿ 300 ವರ್ಷಗಳ ನಂತರ 2021ರಲ್ಲಿ ಕೆರೆ ತುಂಬಿದೆ ಎಂದವರು ಹೇಳಿದರು.

ಕೆರೆ ನೀರು ತುಂಬಿರುವ ಭರಮಸಾಗರ ಈಗ ತೀರ್ಥ ಕ್ಷೇತ್ರದಂತಾಗಿದೆ. ಕೆರೆ ಏರಿ ಬಿರುಕಾಗಿದೆ ಎಂಬ ಆತಂಕ ಇದೆ. ಆದರೆ, ಇದರಿಂದ ಕೆರೆ ಏರಿ ಒಡೆಯದು. ಈ ಬಗ್ಗೆ ಯಾವುದೇ ಹೆದರಿಕೆ ಬೇಡ ಎಂದು ಶ್ರೀಗಳು ತಿಳಿಸಿದರು.

# ಐದು ಹೆಜ್ಜೆ ಮಾತ್ರ ನಡೆದ ಹರಿಹರೇಶ್ವರ ರಥೋತ್ಸವ



**(1ನೇ ಪುಟದಿಂದ)** ಹೆಜ್ಜೆ ಮಾತ್ರ ರಥವನ್ನು ಎಳೆಯುವ ಮೂಲಕ ರಥೋತ್ಸವ ಆಚರಣೆ ಮಾಡಲಾಯಿತು.

ನಗರದಲ್ಲಿನ ವಿವಿಧ ಸಾಂಸ್ಕೃತಿಕ ಸಂಘಟನೆಯ ವತಿಯಿಂದ ಭಕ್ತರಿಗೆ ಅನ್ನ ಸಂತರ್ಪಣೆ, ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿತ್ತು.

**ಸಾರ್ವಜನಿಕರ ಆಕ್ರೋಶ :** ರಥೋತ್ಸವವನ್ನು ಈ ವರ್ಷ ಪದ್ಧತಿಯ ಪ್ರಕಾರ ಬೆಳಗ್ಗೆ 10.45 ಕ್ಕೆ ನಿಗದಿ ಮಾಡಲಾಗಿತ್ತು. ಆದರೆ, ನಗರದಲ್ಲಿ 144ನೇ ಸೆಕ್ಷನ್ ಜಾರಿಯಲ್ಲಿ ಇರುವುದರಿಂದ ರಥೋತ್ಸವ ಆಚರಣೆ ಮಾಡುವುದಕ್ಕೆ ಜಿಲ್ಲಾಡಳಿತ ಮತ್ತು ತಾಲ್ಲೂಕು ಆಡಳಿತ ನಿರಾಕರಿಸಿ, ಕೇವಲ ಪೂಜೆ, ವಿಧಿ, ವಿಧಾನಗಳನ್ನು ಮಾತ್ರ ಮಾಡುವುದಕ್ಕೆ ಅನುಮತಿ ನೀಡಿತು.

ಹಾಗಾಗಿ ದೇವಾಲಯದ ಆವರಣದಲ್ಲಿ ದೇವರಿಗೆ ರಾತ್ರಿ ಪೂಜಾ ಕಾರ್ಯಗಳನ್ನು ನಡೆಸಿ, ನಂತರದಲ್ಲಿ ಬೆಳಿಗ್ಗೆ ರಥವನ್ನು ಐದು ಹೆಜ್ಜೆ ಮಾತ್ರ ಎಳೆಯುವುದಕ್ಕೆ ಅವಕಾಶ ನೀಡಿದ್ದರಿಂದ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು.

ಶಾಸಕ ಎಸ್. ರಾಮಪ್ಪ ಅವರು ಈ ಬಗ್ಗೆ ಮಾತನಾಡಿದ್ದು, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ತುಘಲಕ್ ದರ್ಬಾರ್ ಮಾಡುವುದಕ್ಕೆ ಮುಂದಾಗಿದ್ದು, ಅದನ್ನು ಕೈ ಬಿಡಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇಲ್ಲಿನ ಜನರ ಮಾತಿಗೆ ಮನ್ನಣೆ ಕೊಡದೆ, ತುಘಲಕ್ ಸಾಮ್ರಾಜ್ಯದ ದರ್ಬಾರ್ ಮಾಡುತ್ತಿದ್ದಾರೆ. ಮಾಜಿ ಶಾಸಕ ಬಿ.ಪಿ. ಹರೀಶ್ ಸಹ ಜಿಲ್ಲಾಧಿಕಾರಿ ಕಂಡು ಮನವಿಯನ್ನು ಕೊಟ್ಟು ಬಂದಿದ್ದರು. ಆದರೆ, ಜಿಲ್ಲಾಧಿಕಾರಿಗಳು ಯಾರ ಮಾತಿಗೂ ಮನ್ನಣೆ ಕೊಡಲಿಲ್ಲ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕರಾದ ಹೆಚ್.ಎಸ್. ಶಿವಶಂಕರ್, ಬಿ.ಪಿ. ಹರೀಶ್, ನಾರಾಯಣ ಜೋಯಿಸರು, ಚಿದಂಬರ, ಹರಿಶಂಕರ್, ಕೃಷ್ಣಮೂರ್ತಿ, ಗುರುಪ್ರಸಾದ್, ಶೇಷಾಚಲ, ವಾರಿಜಾ ವೆಂಕಟೇಶ ಮತ್ತಿತರರು ಉಪಸ್ಥಿತರಿದ್ದರು.

# ಕೊಟ್ಟೂರಿನ ಜೆಸಿಐ ಅಧ್ಯಕ್ಷರಾಗಿ ಜೆ.ಟಿ. ಕೇಶವ ಪ್ರಸಾದ್



ಕೊಟ್ಟೂರು.ಫೆ.16 -ಜೆಸಿಐ ಅಧ್ಯಕ್ಷರಾಗಿ ಜೆ.ಟಿ.ಕೇಶವ ಪ್ರಸಾದ್ ಹಾಗು ಕಾರ್ಯದರ್ಶಿಯಾಗಿ ಡಾ।। ಬಸವಾನಂದ ಆಯ್ಕೆಯಾಗಿದ್ದಾರೆ. ಈ ಸಂದರ್ಭದಲ್ಲಿ ಜೆಸಿಐನ ಬಿ.ಆರ್. ವಿಕ್ರಮ್, ಈಶ್ವರಪ್ಪ, ಜಿ.ಸಿದ್ದಯ್ಯ, ರಾಜು ಭೋಪ್ರ, ಅಂಗಡಿ ಪಂಪಾಪತಿ, ರಾಘವೇಂದ್ರ, ಅರವಿಂದ, ರಾಜು ಇವರನ್ನು ಸನ್ಮಾನಿಸಿ, ಶುಭ ಹಾರೈಸಿದರು.

# ಮೈಲಾರದಲ್ಲಿ ಹುಂಡಿ ಪೂಜೆ



ಹಡಗಲಿ, ಫೆ.16- ಭರತ ಹುಣ್ಣಿಮೆಯ ದಿನ ಶ್ರೀ ಮೈಲಾರ ಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಪ್ರಧಾನ ಅರ್ಚಕರು ಮತ್ತು ವಂಶಪಾರಂಪರ್ಯ ಧರ್ಮಕರ್ತರೂ ಆದ ಶ್ರೀ ಗುರು ವೆಂಕಪ್ಪಯ್ಯ ಒಡೆಯರ್ ಮಹಾಸ್ವಾಮಿಗಳು ಮತ್ತು ದೇವಸ್ಥಾನದ ಸಿಬ್ಬಂದಿಗಳು ಮತ್ತು ಭಕ್ತರ ಸಮ್ಮುಖದಲ್ಲಿ ಧ್ವಜಾರೋಹಣ ಹಾಗು ಹುಂಡಿಪೂಜೆ ನೆರವೇರಿತು.

# ಯಡಿಯೂರಪ್ಪ – ಬೊಮ್ಮಾಯಿ ಅಪ್ಪ ಮಕ್ಕಳಿದ್ದ ಹಾಗೆ

**(1ನೇ ಪುಟದಿಂದ)** ವಿಶ್ಲೇಷಿಸಿದ್ದಾರೆ.

ಯಡಿಯೂರಪ್ಪ ಹಾಗೂ ಬೊಮ್ಮಾಯಿ ಅಪ್ಪ – ಮಕ್ಕಳಿದ್ದ ಹಾಗೆ. ಇಂದು ಯಡಿಯೂರಪ್ಪ ಮಾತನಾಡಿದ್ದು ಅವರ ಅಂತರಂಗದಿಂದ ಬಂದ ಮಾತುಗಳು ಎಂದು ಶ್ರೀಗಳು ಹೇಳಿದರು.

ಆದರೆ, ಉಭಯರ ನಡುವೆ ವ್ಯತ್ಯಾಸ ಇದೆ. ಯಡಿಯೂರಪ್ಪ ಅವರದ್ದು 'ಇನ್‌ಸ್ಟಂಟ್' (ತ್ವರಿತ ನಿರ್ಧಾರ). ಜನತೆಗಾಗಿ ಯಾವುದಾದರೂ ಯೋಜನೆ ಬಗ್ಗೆ ಕೇಳಿದರೆ ಅಧಿಕಾರಿಗಳಿಗೆ ತ್ವರಿತ ಗತಿಯಲ್ಲಿ ಸೂಚನೆ ನೀಡುತ್ತಿದ್ದರು.ಆದರೆ, ಬೊಮ್ಮಾಯಿ ಹಾಗೆ ಮಾಡುವುದಿಲ್ಲ. ಕಾರ್ಯ ಕೇಳಿಸಿಕೊಂಡು ಆಲೋಚನೆ ಮಾಡಿ, ನಿಧಾನವಾಗಿಯಾದರೂ ಕೆಲಸ ಮಾಡುತ್ತಾರೆ ಎಂದರು.

# ಜಿಲ್ಲೆಯಲ್ಲಿ ಕಾಲೇಜುಗಳು ಪುನರಾರಂಭ




ಹಿಜಾಬ್ ವಿವಾದದ ಹಿನ್ನೆಲೆಯಲ್ಲಿ ಗುಂಡಿ ಮಹದೇವಪ್ಪ ವೃತ್ತದಲ್ಲಿ ಪೊಲೀಸ್ ಬಂದೋಬಸ್ತ್

**(1ನೇ ಪುಟದಿಂದ)** ವಿದ್ಯಾರ್ಥಿನಿಯರು, ಬುರ್ಕಾ ತೆಗೆಯುತ್ತೇವೆ, ಮೊಬೈಲ್ ಬಿಡುತ್ತೇವೆ. ಆದರೆ ಹಿಜಾಬ್ ಧರಿಸಲು ಅವಕಾಶ ನೀಡಿ ಎಂದು ಮನವಿ ಮಾಡಿದರು. ಆದರೆ ಹೈ ಕೋರ್ಟ್ ಆದೇಶವಿರುವುದರಿಂದ ಹಿಜಾಬ್‌ಗೆ ಅವಕಾಶವಿಲ್ಲ ಎಂದು ಕಾಲೇಜಿನವರು ಹೇಳಿದಾಗ ವಿದ್ಯಾರ್ಥಿನಿಯರು ಮನೆಗೆ ವಾಪಸ್ಸಾದರು.

ಜಿಲ್ಲಾಡಳಿತ ಮೊಬೈಲ್ ನಿಷೇಧಿಸಿದ್ದರಿಂದ ಕಾಲೇಜುಗಳಲ್ಲಿ ಮೊಬೈಲ್ ತಪಾಸಣೆ ಮಾಡುವುದರ ಜೊತೆಗೆ ಪ್ರತಿಯೊಬ್ಬರ ಗುರುತಿನ ಚೀಟಿ ಪರೀಕ್ಷಿಸಿ ಕಾಲೇಜಿನ ಒಳ ಬಿಡಲಾಗುತ್ತಿತ್ತು. ಕಾಲೇಜು ಆವರಣ ಸೇರಿದಂತೆ ಪ್ರಮುಖ ವೃತ್ತಗಳಲ್ಲಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಮೊಬೈಲ್ ಬಿಟ್ಟು ತರಗತಿಗೆ ಹಾಜರಾಗಲು ಬಯಸದ ಕೆಲ ಹುಡುಗರು ಸಮೀಪದ ಟೀ ಸ್ಟಾಲ್ ಸೇರಿದಂತೆ ಅಲ್ಲಲ್ಲಿ ಮೊಬೈಲ್‌ಗಳೊಂದಿಗೆ ಹರಟೆ ಹೊಡೆಯುತ್ತಿದ್ದುದು ಕಂಡು ಬಂತು.

# ಶಿಬಾರ ಶ್ರೀ ಮೈಲಾರಲಿಂಗೇಶ್ವರ ದೇವಸ್ಥಾನದಲ್ಲಿ ಇಂದಿನ ಭರತ ಹುಣ್ಣಿಮೆ ವಿಶೇಷ ಕಾರ್ಯಕ್ರಮ

ದಾವಣಗೆರೆಯ ಕೊಂಡಜ್ಜಿ ರಸ್ತೆಯಲ್ಲಿರುವ ಶಿಬಾರ ಶ್ರೀ ಮೈಲಾರಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಇಂದಿನಿಂದ ಇದೇ ದಿನಾಂಕ 21 ರವರೆಗೆ ಭರತ ಹುಣ್ಣಿಮೆ ಅಂಗವಾಗಿ ಧಾರ್ಮಿಕ ಪೂಜಾ ಕಾರ್ಯಕ್ರಮಗಳು ನಡೆಯಲಿವೆ.

ಇಂದು ಬೆಳಿಗ್ಗೆ 6 ಗಂಟೆಗೆ ಪಂಚಾಮೃತ ಅಭಿಷೇಕ, ಕುದುರೆ ಪೂಜೆ, ನಂತರ ಹೂವಿನ ಅಲಂಕಾರದೊಂದಿಗೆ ಪೂಜಾ ಕಾರ್ಯಕ್ರಮ ರಾತ್ರಿ 8 ಗಂಟೆಗೆ ಭಕ್ತರಿಂದ 'ಶ್ರೀ ಮಾಲತೇಶ ಸ್ವಾಮಿ ದೇವರಗುಡ್ಡದ ಪರವು' ಕಾರ್ಯಕ್ರಮ.

ನಾಳೆ ಬೆಳಿಗ್ಗೆ ಪಂಚಾಮೃತ ಅಭಿಷೇಕ, ತ್ರಿಶೂಲ ಪೂಜೆ, ಹೂವಿನ ಅಲಂಕಾರ, ಸಂಜೆ 5-30 ಕ್ಕೆ ಮೈಲಾರದಲ್ಲಿ ಕಾರಣಿಕೋತ್ಸವ ರಾತ್ರಿ ಅಖಂಡ ಭಜನೆ ಇರಲಿದೆ. ದಿನಾಂಕ 21ರಂದು ರಾತ್ರಿ 8 ಗಂಟೆಗೆ ನಗರದ ರಾಜಬೀದಿಗಳಲ್ಲಿ ಶ್ರೀ ಸ್ವಾಮಿಯ ಪಲ್ಲಕ್ಕಿ ಉತ್ಸವ ನಡೆಯುವುದು.

# ಪದವಿ ಪರೀಕ್ಷೆ: ಒಂದು ತಿಂಗಳು ಮುಂದೂಡಲು ವಿವಿಗಳಿಗೆ ಸೂಚನೆ

ಬೆಂಗಳೂರು, ಫೆ.16 - ಕೊರೊನಾ ಮತ್ತು ಓಮಿಕ್ರಾನ್ ಸೋಂಕು ಹೆಚ್ಚಳ ಹಾಗೂ ಅತಿಥಿ ಉಪನ್ಯಾಸಕರ ಮುಷ್ಕರದಿಂದಾಗಿ ಪಾಠ-ಪ್ರವಚನಗಳು ಮುಗಿಯದಿರುವ ಹಿನ್ನೆಲೆಯಲ್ಲಿ ಉನ್ನತ ಶಿಕ್ಷಣ ಇಲಾಖೆಗೆ ಒಳಪಡುವ ಎಲ್ಲಾ ವಿಶ್ವವಿದ್ಯಾಲಯಗಳ ಸೆಮಿಸ್ಟರ್ ಪರೀಕ್ಷೆಯನ್ನು ಒಂದು ತಿಂಗಳ ಕಾಲ ಮುಂದೂಡುವಂತೆ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಿ.ಕುಮಾರ್ ನಾಯಕ್ ಅವರು ವಿ.ವಿ.ಗಳ ಕುಲಸಚಿವರುಗಳಿಗೆ ಸೂಚಿಸಿದ್ದಾರೆ.

ಈ ಬಗ್ಗೆ ಬುಧವಾರ ಪತ್ರಿಕಾ ಪ್ರಕಟಣೆ ನೀಡಿರುವ ಅವರು, 'ಕೆಲವು ವಿ.ವಿ.ಗಳು ಈಗಾಗಲೇ ಸೆಮಿಸ್ಟರ್ ಪರೀಕ್ಷೆಯ ವೇಳಾಪಟ್ಟಿಯನ್ನು ಪ್ರಕಟಿಸಿದ್ದವು. ಆದರೆ ಮೇಲೆ ಉಲ್ಲೇಖಿಸಿದ ಕಾರಣಗಳನ್ನು ನೀಡಿ ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರು ಪರೀಕ್ಷೆಯನ್ನು ಮುಂದೂಡುವಂತೆ ಕೋರಿದ್ದರು. ಹೀಗಾಗಿ, ವಿದ್ಯಾರ್ಥಿಗಳ ಹಿತಾಸಕ್ತಿಯನ್ನು ಗಮನಿಸಿ, ಪರೀಕ್ಷೆಯನ್ನು ಮುಂದೂಡುವ ಬಗ್ಗೆ ತೀರ್ಮಾನ ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ' ಎಂದು ತಿಳಿಸಿದ್ದಾರೆ.

# ಜಾತ್ರೆಗೆ ಬಂದಿದ್ದ ವ್ಯಕ್ತಿ ಸಾವು

ಹೂವಿನಹಡಗಲಿ, ಫೆ.16- ಪ್ರಸಿದ್ಧ ಮೈಲಾರ ಲಿಂಗೇಶ್ವರ ಜಾತ್ರೆಗೆ ತಮ್ಮ ಸಂಬಂಧಿಕರೊಂದಿಗೆ ಬಂದಿದ್ದ ಕೊಟ್ಟೂರು ತಾಲ್ಲೂಕು ಕುರುಬರಹಳ್ಳಿ ವಾಸಿ ಶಾಮನೂರು ಗಂಗಾಧರ ಎಂಬ 24 ವರ್ಷ ವಯಸ್ಸಿನ ವ್ಯಕ್ತಿ ಇಲ್ಲಿನ ಮೈಸೂರು ಕ್ರಾಸ್ ಬಳಿ ಅನಾರೋಗ್ಯದಿಂದ ಮೃತಪಟ್ಟಿದ್ದಾನೆ. ಬಡವರಾದ ಕಾರಣ ಆತನ ಮೃತ ದೇಹ ಒಯ್ಯಲು ಸಹ ಹಣವಿರಲಿಲ್ಲ. ಪೊಲೀಸರ ಸಹಕಾರದಿಂದ ಅಲ್ಲಿಯೇ ಇದ್ದ ಜನರಿಂದ 3 ಸಾವಿರ ಹಣ ಸಂಗ್ರಹಿಸಿ ಆಂಬ್ಯುಲೆನ್ಸ್ ವ್ಯವಸ್ಥೆ ಮಾಡಿ ಸ್ವಗ್ರಾಮಕ್ಕೆ ಕಳುಹಿಸಲಾಯಿತು.

# ಅಡಿಕೆ ಕೊಯ್ಯುವ ದೋಟಿ ಖರೀದಿಸಲು ಸಹಾಯ ಧನ

ಬೆಂಗಳೂರು, ಫೆ. 16 - ಅಡಿಕೆ ಕೊಯ್ಯುವ ದೋಟಿ ಖರೀದಿಸಲು ಸಹಾಯಧನ ನೀಡಲು ವ್ಯವಸ್ಥೆ ಮಾಡಲಾಗುವುದು ಎಂದು ತೋಟಗಾರಿಕಾ ಸಚಿವ ಮುನಿರತ್ನ ವಿಧಾನಸಭೆಗೆ ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಸದಸ್ಯ ಟಿ.ಡಿ.ರಾಜೇಗೌಡ ಪ್ರಶ್ನೆಗೆ ಉತ್ತರಿಸುತ್ತಿದ್ದ ಸಂದರ್ಭದಲ್ಲಿ ಮಧ್ಯಪ್ರವೇಶಿಸಿದ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಮರದ ಕೆಳಗೆ ನಿಂತು ಅಡಿಕೆ ಕೊಯ್ಯಲು ದೋಟಿ ಬಂದಿದೆ. ಕೆಳಗೆ ನಿಂತು ಅಡಿಕೆ ಕೊಯ್ಯಬಹುದು. ಬೆಳೆಗಾರರಿಗೆ ಪ್ರೋತ್ಸಾಹ ಕೊಟ್ಟರೆ ಅನುಕೂಲವಾಗುತ್ತದೆ. ಕೊಯ್ಯುವವರು ಸಿಗುತ್ತಿಲ್ಲ. ಇದರಿಂದ ಅಪಾಯವನ್ನೂ ತಪ್ಪಿಸಬಹುದು ಎಂದರು.

ಇದಕ್ಕೆ ದನಿಗೂಡಿಸಿದ ಗೃಹ ಸಚಿವ ಆರಗ ಜ್ಞಾನೇಂದ್ರ, 80 ಅಡಿ ಉದ್ದದ ಮರದಲ್ಲಿ ಅಡಿಕೆ ಕೊಯ್ಯುವ ಈ ದೋಟಿ 5 ಕೆಜಿಯಷ್ಟು ಮಾತ್ರ ಭಾರವಿದೆ. ಇದಕ್ಕೆ ಸಬ್ಸಿಡಿಯಲ್ಲಿ ಸೇರಿಸಬೇಕು ಎಂದರು. ಆದ್ಯತೆ ಮೇಲೆ ಸಂಸ್ಕರಣಾ ಘಟಕಗಳನ್ನು ನೀಡುವುದಾಗಿ ಸಚಿವರು ಭರವಸೆ ನೀಡಿದರು.

## ಕುಣೆಬೆಳಕೆರೆ ಗ್ರಾಮದ ಬಾವಿಕಟ್ಟೆ ಹನುಮಂತಪ್ಪ ನಿಧನ



ಹರಿಹರ ತಾ. ಕುಣೆಬೆಳಕೆರೆ ಗ್ರಾಮದ ಮುಖಂಡ ಬಾವಿಕಟ್ಟೆ ಹನುಮಂತಪ್ಪ (68) ಅವರು ದಿನಾಂಕ 16.2.2022ನೇ ಬುಧವಾರ ಸಂಜೆ 4 ಗಂಟೆಗೆ ನಿಧನರಾದರು. ಪತ್ನಿ, ಓರ್ವ ಪುತ್ರ, ಮೂವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 17.02.2022 ಗುರುವಾರ 12 ಗಂಟೆಗೆ ಕುಣೆಬೆಳಕೆರೆ ಗ್ರಾಮದಲ್ಲಿ ನೆರವೇರಲಿದೆ.


## ಚಿರಸ್ಮರಣೆ



**ದಿ।। ಕೆ.ರಾಮಚಂದ್ರರಾವ್**

ನೀವು ನಮ್ಮನ್ನಗಲಿ ಇಂದಿಗೆ ಒಂಭತ್ತು ವರ್ಷಗಳಾದವು. ಸದಾ ನಿಮ್ಮ ನೆನಪು ನಮ್ಮ ಮನದಲ್ಲಿ ಹಚ್ಚ ಹಸಿರಾಗಿದೆ.
ನಿಮ್ಮ ಮಾರ್ಗದರ್ಶನದಲ್ಲೇ ನಡೆಯುತ್ತಿರುವ...
**ಪುತ್ರ, 6 ಜನ ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು, ಗಂಡಗಾಳಿ ಬಂಧುಗಳು, ಹುಲಗಿ ಸ್ಟುಡಿಯೋ ಮತ್ತು ಹುಲಗಿ ಎಂಟರ್ ಪ್ರೈಸಸ್, ನಿಜಲಿಂಗಪ್ಪ ಬಡಾವಣೆ, ದಾವಣಗೆರೆ.**


# ನಾಲೆಗೆ ಬಿದ್ದ ರಿಕ್ಷಾ: ಚಾಲಕನ ಸಾವು

ದಾವಣಗೆರೆ, ಫೆ.16- ಚಾಲಕನ ನಿಯಂತ್ರಣ ತಪ್ಪಿದ ಆಟೋ ರಿಕ್ಷಾ ನಾಲೆಗೆ ಬಿದ್ದ ಪರಿಣಾಮ ರಿಕ್ಷಾ ಚಾಲಕ ಸಾವನ್ನಪ್ಪಿರುವ ಘಟನೆ ತಾಲ್ಲೂಕಿನ ರಾಂಪುರ ಹಾಗೂ ಬೇತೂರು ಮಧ್ಯದ ತುಂಗಭದ್ರಾ ನಾಲೆಯಲ್ಲಿ ನಡೆದಿದೆ.

ಆಜಾದ್ ನಗರ ವ್ಯಾಪ್ತಿಯ ಸಿದ್ದರಾಮೇಶ್ವರ ಬಡಾವಣೆಯ ಶಫೀ ಉಲ್ಲಾ (22) ಮೃತ ಆಟೋ ಚಾಲಕ.

ಮಂಗಳವಾರ ರಾತ್ರಿ ಈ ಅಪಘಾತ ಸಂಭವಿಸಿರಬಹುದು ಎಂದು ಅಂದಾಜಿಸಲಾಗಿದೆ. ಬೆಳಗ್ಗೆ ಸ್ಥಳೀಯರು ಆಟೋವನ್ನು ಗಮನಿಸಿದ್ದಾರೆ. ಸ್ಥಳಕ್ಕಾಗಮಿಸಿದ ಗ್ರಾಮಾಂತರ ಠಾಣೆಯ ಪೊಲೀಸರು ಆಟೋ ರಿಕ್ಷಾ ಪರಿಶೀಲನೆ ನಡೆಸಿ ಕ್ರೇನ್ ತರಿಸಿ ಆಟೋರಿಕ್ಷಾ ಮೇಲಕ್ಕೆತ್ತಿದರು. ಈ ವೇಳೆ ಅದರಲ್ಲಿ ವ್ಯಕ್ತಿಯ ಮೃತದೇಹ ದೊರೆತಿದೆ. ಮೇಲ್ಭಾಗದಿಂದ ಆಟೋ ನಾಲೆಗೆ ಬಿದ್ದ ಪರಿಣಾಮ ಚಕ್ರಗಳು ಬೇರ್ಪಟ್ಟಿವೆ. ಆಟೋ ಹೇಗೆ ನಾಲೆಗೆ ಬಿದ್ದಿದೆ, ಅದರಲ್ಲಿ ಎಷ್ಟು ಜನರಿದ್ದರು, ಆಟೋ ಎಲ್ಲಿಂದ ಎಲ್ಲಿಗೆ ಹೋಗುತ್ತಿತ್ತು ಎಂಬುದರ ಬಗ್ಗೆ ಯಾವುದೇ ಮಾಹಿತಿ ಲಭ್ಯವಾಗಿಲ್ಲ. ಆಟೋದಲ್ಲಿ ಮೃತ ವ್ಯಕ್ತಿ ಮಾತ್ರ ಪ್ರಯಾಣಿಸುತ್ತಿದ್ದ. ಆದರೆ ಅಪಘಾತವೆಂದು ಪ್ರಕರಣ ದಾಖಲಾಗಿದ್ದು, ಘಟನೆಯ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಗ್ರಾಮಾಂತರ ಪೊಲೀಸ್ ಠಾಣೆಯ ಪಿಎಸ್ಐ ಮಾಹಿತಿ ನೀಡಿದ್ದಾರೆ.

# ಚೆಂಬೆಳಕಿನ ಕವಿ ಕಣವಿ ಇನ್ನಿಲ್ಲ

**(1ನೇ ಪುಟದಿಂದ) (1ನೇ ಪುಟದಿಂದ)** 1928ರ ಜೂನ್ 28ರಂದು ಅವರು ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದ ಸಕ್ಕರಪ್ಪ ಹಾಗೂ ಗೃಹಿಣಿಯಾಗಿದ್ದ ಪಾರ್ವತವ್ವ ದಂಪತಿಗೆ ಜನಿಸಿದ್ದರು. ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಎಂ.ಎ. ಪದವಿ ಪಡೆದಿದ್ದ ಅವರು, ಅದೇ ವಿ.ವಿ.ಯ ಪ್ರಸಾರಾಂಗ ವಿಭಾಗದ ಕಾರ್ಯದರ್ಶಿ ಹಾಗೂ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದರು.

15ಕ್ಕೂ ಹೆಚ್ಚು ಕವನ ಸಂಕಲನ, ವಿಮರ್ಶೆ ಹಾಗೂ ಪ್ರಬಂಧ ಸಂಕಲನಗಳನ್ನು ಅವರು ರಚಿಸಿದ್ದಾರೆ. ಅವರ 'ಜೀವಧ್ವನಿ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. ಅನಕೃ ಪ್ರತಿಷ್ಠಾನ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಹಲವು ಗೌರವಗಳಿಗೆ ಅವರು ಪಾತ್ರರಾಗಿದ್ದಾರೆ. ಹಾಸನದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅವರು ಅಧ್ಯಕ್ಷರಾಗಿದ್ದರು. ಧಾರವಾಡದ ಕರ್ನಾಟಕ ಕಾಲೇಜಿನ ಆವರಣದಲ್ಲಿ ಕಣವಿ ಅವರ ಪಾರ್ಥಿವ ಶರೀರದ ಸಾರ್ವಜನಿಕ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಕಲ್ಯಾಣ ನಗರದಲ್ಲಿರುವ ಅವರ ಮನೆ ಬಳಿಯೂ ಅಂತಿಮ ದರ್ಶನ ಪಡೆಯಲಾಯಿತು.

ಸರ್ಕಾರಿ ಗೌರವಗಳೊಂದಿಗೆ ಕೆಲಗೇರಿಯಲ್ಲಿರುವ ತೋಟದ ಮನೆಯಲ್ಲಿ ಸಂಜೆ ಅವರ ಅಂತ್ಯಕ್ರಿಯೆ ನೆರವೇರಿಸಲಾಯಿತು.

# ಹರಿಹರ : ವಿದ್ಯಾರ್ಥಿನಿ ಮನವೊಲಿಕೆ



**(1ನೇ ಪುಟದಿಂದ)** ಪ್ರಥಮ ದರ್ಜೆ ಕಾಲೇಜು ಇಂದು ಎಂದಿನಂತೆ ಪ್ರಾರಂಭವಾಯಿತು. ಇಲ್ಲಿ ಅಲ್ಪಸಂಖ್ಯಾತ ಸಮುದಾಯದ 228 ವಿದ್ಯಾರ್ಥಿಗಳು ಮತ್ತು 174 ವಿದ್ಯಾರ್ಥಿನಿಯರು ಇದ್ದಾರೆ. ಆದರೆ, ಅಲ್ಪಸಂಖ್ಯಾತ ಸಮುದಾಯದ ಒಬ್ಬ ವಿದ್ಯಾರ್ಥಿ - ವಿದ್ಯಾರ್ಥಿನಿ ಕೂಡ ಕಾಲೇಜಿಗೆ ಬಂದಿಲ್ಲ ಎಂದು ಪ್ರಾಂಶುಪಾಲ ವಿರುಪಾಕ್ಷಪ್ಪ ತಿಳಿಸಿದ್ದಾರೆ.

# ರಾಜನಹಳ್ಳಿ ಶ್ರೀಗಳ ಹೋರಾಟಕ್ಕೆ ಯತೀಂದ್ರ, ರಾಮಪ್ಪ ಬೆಂಬಲ



ಬೆಂಗಳೂರು, ಫೆ.16- ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗದ (ಎಸ್ಸಿ-ಎಸ್ಟಿ ಮೀಸಲಾತಿ ಹೆಚ್ಚಳ) ವರದಿಯನ್ನು ಜಾರಿಗೊಳಿಸುವಂತೆ ಮತ್ತು ಸಮುದಾಯದ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ, ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಅವರು ಫ್ರೀಡಂ ಪಾರ್ಕ್‌ನಲ್ಲಿ ನಡೆಸುತ್ತಿರುವ ಅಹೋರಾತ್ರಿ ಧರಣಿ ಸತ್ಯಾಗ್ರಹ ಬುಧವಾರ 7ನೇ ದಿನಕ್ಕೆ ಕಾಲಿಟ್ಟಿದೆ. ಸುರಪುರ ಶಾಸಕ ರಾಜೂಗೌಡ, ಹರಿಹರ ಶಾಸಕ ಎಸ್. ರಾಮಪ್ಪ, ವರುಣ ಕ್ಷೇತ್ರದ ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ, ಹೆಚ್.ಡಿ. ಕೋಟೆ ಶಾಸಕ ಅನಿಲ್ ಚಿಕ್ಕಮಾದು ಅವರುಗಳು ಧರಣಿ ಸತ್ಯಾಗ್ರಹದಲ್ಲಿ ಭಾಗವಹಿಸಿ, ಶ್ರೀಗಳ ಹೋರಾಟಕ್ಕೆ ಬೆಂಬಲ ಘೋಷಿಸಿ, ಎಸ್ಸಿ-ಎಸ್ಟಿ ಮೀಸಲಾತಿ ಹೆಚ್ಚಳಕ್ಕೆ ಆಗ್ರಹಿಸಿದರು.

ಮಠದ ಧರ್ಮದರ್ಶಿ ಹೊಸಪೇಟೆ ಜಂಬಣ್ಣ ನಾಯಕ, ಹರ್ತಿಕೋಟೆ ವೀರೇಂದ್ರ ಸಿಂಹ, ಸಿರಿಗೆರೆ ತಿಪ್ಪೇಶ್ ಸೇರಿದಂತೆ ವಿವಿಧ ಜಿಲ್ಲೆಗಳ ಮುಖಂಡರು, ಸಮಾಜದ ಅಧ್ಯಕ್ಷರು ಭಾಗವಹಿಸಿದ್ದರು.

### ಶ್ರೀ ಪ್ರಸನ್ನಾನಂದ ಸ್ವಾಮೀಜಿ ಸ್ಪಷ್ಟನೆ

ಅಖಂಡ ಕರ್ನಾಟಕ ಬೇಡ ವಾಲ್ಮೀಕಿ ನಾಯಕ ಸಮುದಾಯದ ಬಂಧುಗಳೇ, ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗದ ವರದಿಯನ್ನು ಅನುಷ್ಠಾನಗೊಳಿಸುವಂತೆ ಹಾಗೂ ಸಮುದಾಯದ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಆಗ್ರಹಿಸಿ, ನಾವು ನಡೆಸುತ್ತಿರುವ ಧರಣಿ ಸತ್ಯಾಗ್ರಹ ಬುಧವಾರಕ್ಕೆ ಏಳು ದಿನಗಳು ಕಳೆದಿವೆ. ಈಗಾಗಲೇ ಸಚಿವ ಬಿ. ಶ್ರೀರಾಮುಲು ಹಾಗೂ ಸತೀಶ್ ಜಾರಕಿಹೊಳಿ ಸೇರಿದಂತೆ ಇನ್ನೂ ಹಲವು ಜನಪ್ರತಿನಿಧಿಗಳು ಧರಣಿ ಸ್ಥಳಕ್ಕೆ ಆಗಮಿಸಿ, ಈ ಬಗ್ಗೆ ತಮ್ಮ ನಿಲುವನ್ನು ವ್ಯಕ್ತಪಡಿಸಿದ್ದಾರೆ. ಸರ್ಕಾರದ ಕೋವಿಡ್ ನಿಯಮ ಪಾಲಿಸುವ ಉದ್ದೇಶದಿಂದ ಶ್ರೀಮಠದಲ್ಲಿ ನಡೆದ ರಾಜ್ಯ ಮಟ್ಟದ ಸಭೆಯಲ್ಲಿ ನಾವು ತೀರ್ಮಾನಿಸಿದಂತೆ ಏಕಾಂಗಿಯಾಗಿ ಸತ್ಯಾಗ್ರಹ ಕೈಗೊಂಡಿದ್ದೇವೆ. ಆದರೂ ಅಭಿಮಾನಪೂರ್ವಕವಾಗಿ ಸಮುದಾಯದ ಮುಖಂಡರು ವಿವಿಧ ಭಾಗಗಳಿಂದ ಆಗಮಿಸಿ, ಬೆಂಬಲ ನೀಡುತ್ತಿರುವುದು ಸಂತಸ ತಂದಿದೆ. ಈ ಬಗ್ಗೆ ಸ್ಪಷ್ಟವಾಗಿ ಹೇಳ ಬಯಸುವುದೇನೆಂದರೆ, ಈಗಾಗಲೇ ವಿಧಾನ ಸಭೆ ಅಧಿವೇಶನ ನಡೆಯುತ್ತಿದ್ದು, ಅಧಿವೇಶನದಲ್ಲಿ ಸರ್ಕಾರ ಯಾವುದೇ ತೀರ್ಮಾನ ತೆಗೆದುಕೊಳ್ಳದಿದ್ದರೆ, ಶ್ರೀಮಠದ ಮುಂದಿನ ನಡೆ ಏನೆಂಬುದನ್ನು ತಿಳಿಸುವವರೆಗೂ ಯಾರೂ ಸಹ ಬೇರೆ ಯಾವುದೇ ಸಂದೇಶಗಳಿಗೆ ಕಿವಿಗೊಡಬಾರದು ಮತ್ತು ಶ್ರೀಮಠದಿಂದ ವಿಧಾನ ಸೌಧ ಮುತ್ತಿಗೆಯಂತಹ ಯಾವುದೇ ಕರೆ ನೀಡಿರುವುದಿಲ್ಲ ಮತ್ತು ಶ್ರೀಮಠದಿಂದ ಸಂದೇಶ ನೀಡುವವರೆಗೂ ಯಾರೂ ಸಹ ಬೆಂಗಳೂರಿಗೆ ಆಗಮಿಸಬಾರದು ಎಂದು ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಅವರು ಈ ಮೂಲಕ ಸ್ಪಷ್ಟಪಡಿಸಿದ್ದಾರೆ.

# ಭರತ ಹುಣ್ಣಿಮೆ : ಪ್ರವೇಶ ನಿಷೇಧ, ಭಕ್ತರ ಸಂಖ್ಯೆ ವಿರಳ

ಹರಪನಹಳ್ಳಿ, ಫೆ.16- ಮಧ್ಯ ಕರ್ನಾಟಕದ ಐತಿಹಾಸಿಕ ಉಚ್ಚಂಗೆಮ್ಮ ದೇವಿ ಸನ್ನಿಧಿಯಲ್ಲಿ ಈ ಬಾರಿಯ ಭರತ ಹುಣ್ಣಿಮೆಗೆ ಗ್ರಾಮಸ್ಥರನ್ನು ಹೊರತುಪಡಿಸಿ ಹೊರಗಿನ ಭಕ್ತರ ಸಂಖ್ಯೆ ವಿರಳ ವಾಗಿತ್ತು

ರಾಜ್ಯದ ಅಲ್ಲಲ್ಲಿ ಸೋಂಕು ಉಲ್ಬಣ ಗೊಂಡ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳ ಆದೇಶದಂತೆ ಕೇವಲ ದೇವಿಯ ಪೂಜಾ ಕಾರ್ಯಕ್ರಮಗಳನ್ನು ಹೊರತು ಪಡಿಸಿ ಮುಂಜಾಗ್ರತಾ ಕ್ರಮವಾಗಿ ಐತಿಹಾಸಿಕ ಭರತ ಹುಣ್ಣಿಮೆ ಆಚರಣೆಯನ್ನು ಸ್ಥಳೀಯರಿಗೆ ಮಾತ್ರ ಸೀಮಿತಗೊಳಿಸಲಾಗಿತ್ತು. ಗ್ರಾಮದ ಸುತ್ತ ಮುತ್ತ ಜನ ಎತ್ತಿನಗಾಡಿ ಟ್ರ್ಯಾಕ್ಟರ್ ಸೇರಿದಂತೆ ಯಾವುದೇ ವಾಹನಗಳ ಮೂಲಕ ಕ್ಷೇತ್ರಕ್ಕೆ ಬರದಂತೆ ಬಿಗಿ ಕ್ರಮ ಕೈಗೊಳ್ಳಲಾಗಿತ್ತು.




ಈ ನಿಟ್ಟಿನಲ್ಲಿ ಜಿಲ್ಲಾಡಳಿತ ಹಾಗೂ ತಾಲ್ಲೂಕು ಆಡಳಿತ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದ್ದು, ಹೊರಗಿನ ಭಕ್ತರು ಅಲ್ಲೇ ಪೂಜೆ ಮುಗಿಸಿ ತಮ್ಮ ಊರುಗಳಿಗೆ ತೆರಳಿದರು.

ಗ್ರಾಮದ ಸುತ್ತಮುತ್ತಲಿನ ಭಕ್ತರಿಗೆ ವಾಸ್ತವ್ಯಕ್ಕೆ ಅವಕಾಶವಿಲ್ಲದ್ದರಿಂದ ಬರುವ ಭಕ್ತರು ದೇವರ ದರ್ಶನ ಪಡೆದು ಮರಳುತ್ತಿದ್ದರು. ಹುಣ್ಣಿಮೆ ಅಂಗವಾಗಿ ದೇವಸ್ಥಾನದಲ್ಲಿ ಎಂದಿನಂತೆ ನಡೆಯುವ ಸಂಪ್ರದಾಯದ ಪೂಜೆ. ಧಾರ್ಮಿಕ ಕಾರ್ಯಗಳು ಜರುಗಿದವು.

ಪುನರ್ವಸತಿ ಯೋಜನೆ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಿಬ್ಬಂದಿಯವರು ದೇವದಾಸಿ ಪದ್ಧತಿ ಆಚರಣೆ ಮಾಡದಂತೆ ಆನೆ ಹೊಂಡ. ಅರಿಶಿನ ಹೊಂಡ. ಪಾದಗಟ್ಟಿ ಬಳಿ ಕರಪತ್ರ ಹಂಚಿ ಜಾಗೃತಿ ಮೂಡಿಸಿ, ದೇವಿಯ ಹೆಸರಿನಲ್ಲಿ ಜಡೆ ಬಿಟ್ಟಿದ್ದ ಭಕ್ತರ ಜಡೆಯನ್ನು ಜಾಗೃತಿ ಮೂಡಿಸಿ ಕತ್ತರಿಸಿದರು.

ಎಲ್ಲೆಡೆ ಪೊಲೀಸ್ ಇಲಾಖೆಯಿಂದ ಬಿಗಿ ಬಂದೋಬಸ್ತ್ ಮಾಡಲಾಗಿತ್ತು. ಈ ವೇಳೆ ಸಿಪಿಐ ನಾಗರಾಜ ಕಮ್ಮಾರ್, ಅರಸೀಕೆರಿ ಪಿಎಸ್‌ಐ ನಾಗರತ್ನ, ದೇವದಾಸಿ ಪುನರ್ವಸತಿ ಯೋಜನಾಧಿಕಾರಿ ಪ್ರಜ್ಞಾ ಪಾಟೀಲ್, ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಮಲ್ಲಪ್ಪ ಸೇರಿದಂತೆ ಇತರರು ಇದ್ದರು.

# ಸಂಗೀತ ನಿರ್ದೇಶಕ, ಡಿಸ್ಕೋ ಮಾಂತ್ರಿಕ ಬಪ್ಪಿ ಲಹರಿ ಇನ್ನಿಲ್ಲ

ಮುಂಬೈ, ಫೆ. 16 – ಗಾಯಕ ಹಾಗೂ ಸಂಗೀತ ನಿರ್ದೇಶಕ ಬಪ್ಪಿ ಲಹರಿ ಅವರು ಅನಾರೋಗ್ಯದ ಕಾರಣದಿಂದಾಗಿ 69ನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ. 70 ಹಾಗೂ 80ರ ದಶಕದಲ್ಲಿ ಡಿಸ್ಕೋ ಹಾಡುಗಳಿಂದಾಗಿ ಅವರು ಹಿಂದಿ ಚಿತ್ರರಂಗದಲ್ಲಿ ಅತ್ಯಂತ ಜನಪ್ರಿಯರಾಗಿದ್ದರು.

ಜುಹುವಿನಲ್ಲಿರುವ ಆಸ್ಪತ್ರೆಯಲ್ಲಿ ಮಂಗಳವಾರ ರಾತ್ರಿ ಅವರು ಕೊನೆಯುಸಿರೆಳೆದಿದ್ದಾರೆ.

ತಿಂಗಳ ಹಿಂದೆ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಸೋಮವಾರ ಅವರು ಬಿಡುಗಡೆಯಾಗಿದ್ದರಾದರೂ, ಮಂಗಳವಾರ ಆರೋಗ್ಯ ಮತ್ತೆ ಹದಗೆಟ್ಟಿತ್ತು. ಆಸ್ಪತ್ರೆಗೆ ಕರೆ ತರಲಾಯಿತಾದರೂ, ಮಧ್ಯರಾತ್ರಿ ಅವರು ಸಾವನ್ನಪ್ಪಿದ್ದಾರೆ.

ಬಂಗಾರದ ಸರ ಹಾಗೂ ಸನ್‌ಗ್ಲಾಸ್‌ಗಳು ಬಪ್ಪಿ ಲಹರಿ ಅವರ ಹೆಗ್ಗುರುತುಗಳಾಗಿದ್ದವು. ಬಂಗಾರ ಸರಗಳನ್ನು ಅವರು ಅದೃಷ್ಟ ಎಂದು ಭಾವಿಸಿದ್ದರು. 'ಚಲ್ತೇ ಚಲ್ತೇ', 'ಡಿಸ್ಕೋ ಡ್ಯಾನ್ಸರ್' ಹಾಗೂ 'ಶರಾಬಿ' ಚಿತ್ರಗಳು ಅವರಿಗೆ ಜನಪ್ರಿಯತೆ ತಂದುಕೊಟ್ಟ ಚಿತ್ರಗಳಲ್ಲಿ ಸೇರಿವೆ.



ಅವರು ಪತ್ನಿ ಚಿತ್ರಾಣಿ ಹಾಗೂ ಮಕ್ಕಳಾದ ರೀಮಾ ಮತ್ತು ಬಪ್ಪ ಲಹರಿ ಅವರನ್ನು ಅಗಲಿದ್ದಾರೆ. ರೀಮಾ ಗಾಯಕಿಯಾಗಿದ್ದರೆ, ಬಪ್ಪ ಸಂಗೀತ ನಿರ್ದೇಶಕರಾಗಿದ್ದಾರೆ.

2014ರಲ್ಲಿ ಅವರು ಬಿಜೆಪಿಗೆ ಸೇರಿದ್ದರು. ಪಶ್ಚಿಮ ಬಂಗಾಳದ ಶ್ರೀರಾಮಪುರ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿದಾಗ ತೃಣಮೂಲ ಕಾಂಗ್ರೆಸ್‌ನ ಕಲ್ಯಾಣ ಬ್ಯಾನರ್ಜಿ ವಿರುದ್ಧ ಸೋತಿದ್ದರು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಸೇರಿದಂತೆ, ಹಲವು ಗಣ್ಯರು ಅವರ ಅಗಲಿಕೆಗೆ ಸಂತಾಪ ಸೂಚಿಸಿದ್ದಾರೆ.

ಐದು ದಶಕಗಳಿಗೂ ಹೆಚ್ಚು ಕಾಲ ಅವರು ಸಂಗೀತ ಕ್ಷೇತ್ರಕ್ಕೆ ಕೊಡುಗೆ ನೀಡಿದ್ದಾರೆ. 2021ರಲ್ಲಿನ 'ಗಣಪತಿ ಬಪ್ಪ ಮೋರ್ಯ' ಅವರ ಕೊನೆಯ ಭಕ್ತಿಗೀತೆಗಳ ಧ್ವನಿಸುರುಳಿ ಯಾಗಿದೆ.

1952ರಲ್ಲಿ ಪಶ್ಚಿಮ ಬಂಗಾಳದ ಜಲ್ಪೈಗುರಿಯಲ್ಲಿ ಜನಿಸಿದ್ದ ಬಪ್ಪಿ ಲಹರಿ ಅವರ ಮೂಲ ಹೆಸರು ಅಲೋಕೇಶ್ ಲಹಿರ್. ಸಂಗೀತದ ಹಿನ್ನೆಲೆಯ ಕುಟುಂಬದಲ್ಲಿ ಜನಿಸಿದ್ದ ಅವರು, ಬಾಲ್ಯದಲ್ಲೇ ಸಂಗೀತದ ಸೆಳೆತಕ್ಕೆ ಸಿಲುಕಿದರು. ಹಿಂದಿ ಚಿತ್ರದ ಜನಪ್ರಿಯ ಗಾಯಕರಲ್ಲಿ ಒಬ್ಬರಾದ ಕಿಶೋರ್ ಕುಮಾರ್ ಅವರು ಬಪ್ಪಿ ಲಹರಿಯ ಮಾವ.

70ರಿಂದ 90ರ ಅವಧಿಯಲ್ಲಿ ಅವರು ನೀಡಿದ ಸಂಗೀತ ಅತ್ಯಂತ ಜನಪ್ರಿಯವಾಗಿತ್ತು. 'ಐ ಆಮ್ ಎ ಡಿಸ್ಕೋ ಡ್ಯಾನ್ಸರ್', 'ಪಗ್ ಗುಂಘುರೂ', 'ಇಂತಿಹಾ ಹೋ ಗಯಿ' ಹಾಗೂ 'ಲಾಲ್ ದುಪಟ್ಟೆ ವಾಲಿ' ಹಾಡುಗಳು ಅವರ ಸಂಗೀತ ನಿರ್ದೇಶನದ ಶೈಲಿಯ ಪ್ರತೀಕವಾಗಿವೆ.

1976ರಲ್ಲಿ ಬಂದ 'ಚಲ್ತೇ ಚಲ್ತೇ' ರೀತಿಯ ಮಧುರ ಹಾಡು ಹಾಗೂ 'ಕಿಸಿ ನಜರ್ ಕೊ ತೇರಾ ಇಂತಜಾರ್ ಆಜ್ ಭಿ ಹೈ' ರೀತಿಯ ಗಜಲ್‌ಗಳಿಗೂ ಅವರು ಸಂಗೀತ ನೀಡಿದ್ದರು.

ಬಂಗಾಳಿ, ತೆಲುಗು, ತಮಿಳು, ಕನ್ನಡ ಹಾಗೂ ಗುಜರಾತಿ ಚಿತ್ರಗಳಿಗೂ ಅವರು ಸಂಗೀತ ನೀಡಿದ್ದರು. 2020ರ 'ಬಾಘಿ 3' ಚಿತ್ರದ 'ಭಂಕಸ್' ಹಾಡಿಗೆ ಸಂಗೀತ ನೀಡಿದ್ದು, ಚಿತ್ರರಂಗದ ಕೊನೆಯ ಹಾಡಾಗಿದೆ.

ಡಿಸ್ಕೋ ಹಾಡುಗಳಿಗೆ ಲಹರಿ ಅತಿ ಹೆಚ್ಚು ಜನಪ್ರಿಯರಾಗಿದ್ದರು. ಡಿಸ್ಕೋ ಜನಪ್ರಿಯತೆಗೆ ತರುವಲ್ಲಿ ಅವರ ಕೊಡುಗೆ ಮಹತ್ವದ್ದಾಗಿದೆ. ಅವರು 'ಡಿಸ್ಕೊ ಕಿಂಗ್' ಎಂದೇ ಅಭಿಮಾನಿಗಳಲ್ಲಿ ಗುರುತಿಸಿಕೊಂಡಿದ್ದರು.

## ಕಣವಿ ಅವರ ದಾವಣಗೆರೆ ನಂಟು




ದಾವಣಗೆರೆ, ಫೆ. 16- ದಾವಣಗೆರೆಗೂ ನಾಡೋಜ ಡಾ. ಚೆನ್ನವೀರ ಕಣವಿ ಅವರಿಗೂ ಅವಿನಾಭಾವ ಸಂಬಂಧ. ಒಂದು ಕಡೆ ರಕ್ತ ಸಂಬಂಧವಾದರೆ, ಇದನ್ನು ಮೀರಿ ಎಪ್ಪತ್ತರ ದಶಕದಿಂದ ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ನಿರಂತರ ನಂಟು.


ಹೆಸರಾಂತ ಕಲಾವಿದ, ದೃಶ್ಯಕಲಾ ಮಹಾವಿದ್ಯಾಲಯದ ಪ್ರಾಧ್ಯಾಪಕರಾಗಿದ್ದ ಡಾ. ಶಂಕರ ಪಾಟೀಲ ಅವರು ಚೆನ್ನವೀರ ಕಣವಿ ಅವರ ಸೋದರ ಅಳಿಯ. ಅವಿಭಾಜ್ಯ ಚಿತ್ರದುರ್ಗ ಜಿಲ್ಲಾ ಕಸಾಪ ಹಾಗೂ ಪ್ರತಿಮಾ ಸಭಾ ಕಾರ್ಯಕ್ರಮಗಳಿಗೆ ಆಗಾಗ ಉಪನ್ಯಾಸಕರಾಗಿ, ಪ್ರಬಂಧ ಮಂಡನೆಗಾಗಿ ಬರುತ್ತಿದ್ದ ಕಣವಿ ಅವರು, ಅಳಿಯ ಶಂಕರ ಪಾಟೀಲ ಅವರು ದೃಶ್ಯ ಕಲಾ ಮಹಾವಿದ್ಯಾಲಯಕ್ಕೆ ಅಧ್ಯಾಪಕರಾಗಿ ಬಂದ ನಂತರ ಅವರ ಮತ್ತು ದಾವಣಗೆರೆಯ ನಂಟು ನಿರಂತವಾಯಿತು.

ಅವರು ಜಿಲ್ಲಾ ಕಸಾಪ ಪ್ರತಿಮಾ ಸಭಾದ ಎಲ್ಲರೊಡನೆ ಒಡನಾಟ ಇಟ್ಟುಕೊಂಡಿದ್ದರು. ಸರಳತೆಯ ಪ್ರತಿರೂಪವಾಗಿದ್ದ ಅವರು ದಾವಣಗೆರೆಗೆ ಬಂದಾಗ ಎಲ್ಲರೊಡನೆ ಮುಕ್ತವಾಗಿ ಬೆರೆಯುತ್ತಿದ್ದರು. ಆಗಾಗ್ಗೆ ಶಂಕರ ಪಾಟೀಲರ ಕಲಾ ಗ್ಯಾಲರಿಯಲ್ಲಿ, ಕೆಲವೊಮ್ಮೆ ದಿ. ಪ್ರೊ. ಎಸ್.ಹೆಚ್.ಪಟೇಲರ ಮನೆಯಲ್ಲಿ ಸಾಹಿತ್ಯ-ಸಾಂಸ್ಕೃತಿಕ ಸಂವಾದ ಗೋಷ್ಠಿ ನಡೆಯುತ್ತಿದ್ದವು.

ಕಲಾವಿದ ಶಂಕರ ಪಾಟೀಲರು ದಿವಂಗತರಾದ ನಂತರ ಅವರ ಹೆಸರಿನಲ್ಲಿ ಪ್ರತಿ ವರ್ಷ ಒಬ್ಬ ಪ್ರಖ್ಯಾತ ಕಲಾವಿದರಿಗೆ ಶಂಕರ ಪಾಟೀಲರ ಸ್ಮರಣಾರ್ಥ ಪ್ರಶಸ್ತಿ ನೀಡಲಾಗುತ್ತಿತ್ತು. ಆ ಪ್ರಶಸ್ತಿ ಸಮಿತಿ ಗೌ.ಅಧ್ಯಕ್ಷರಾಗಿದ್ದ ಕಣವಿ ಅವರು ಪ್ರತಿ ವರ್ಷ ದಾವಣಗೆರೆಗೆ ಬಂದು ಕಾರ್ಯಕ್ರಮ ನಡೆಸಿ, ಪ್ರಶಸ್ತಿ ಪ್ರದಾನ ಮಾಡಿ, ನಮಗೆಲ್ಲಾ ಸಾಹಿತ್ಯ - ಸಾಂಸ್ಕೃತಿಕ ಭೋಜನ ನೀಡಿ ಹೋಗುತ್ತಿದ್ದರು.

ದೀಕ್ಷಿತ್ ರಸ್ತೆಯಲ್ಲಿ ಇದ್ದ ನಮ್ಮ 'ಜನತಾವಾಣಿ' ಕಾರ್ಯಾಲಯಕ್ಕೆ ಭೇಟಿ ನೀಡಿ, ಪತ್ರಿಕೆಯ ಬಗ್ಗೆ ಮೆಚ್ಚುಗೆ ನೀಡಿ ಹೋದದ್ದನ್ನು ಹಿರಿಯ ಪತ್ರಕರ್ತ ಬಾ.ಮ. ಬಸವರಾಜಯ್ಯ ಸ್ಮರಿಸಿದ್ದಾರೆ.

## ಕತ್ತಲ ಸ್ಮಾರ್ಟ್ ನಗರದಲ್ಲಿ ಅನಾಹುತ ಆಗುವ ಮೊದಲು ಬೆಳಕು ಬರಲಿ



ದಾವಣಗೆರೆ, ಅ.16- ಸ್ಮಾರ್ಟ್ ಸಿಟಿ ದಾವಣಗೆರೆಯಲ್ಲಿ ಬೀದಿ ದೀಪಗಳ ಸಮಸ್ಯೆ ಕಾಡುತ್ತಿದ್ದು, ಕತ್ತಲ ನಗರದಲ್ಲಿ ಅ ನಾ ಹು ತ ವಾ ಗು ವ ಮೊದಲು ಬೆಳಕು ಬರಲಿ ಎಂಬುದೇ ನಮ್ಮ ಆಗ್ರಹ ಎಂದು ಕಾಂಗ್ರೆಸ್ ಸಾಮಾಜಿಕ ಜಾಲತಾಣದ ಜಿಲ್ಲಾಧ್ಯಕ್ಷ ಕೆ.ಎಲ್.ಹರೀಶ್ ಬಸಾಪುರ ತಿಳಿಸಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವರು ತಿಂಗಳಿಗೊಮ್ಮೆ ಜಿಲ್ಲೆಗೆ ದರ್ಶನ ನೀಡಿ ರಾಜಧಾನಿಗೆ ಮರಳುತ್ತಾರೆ. ಅವರು ಸೂರ್ಯನಂತೆ ಹಗಲು ಹೊತ್ತಿನಲ್ಲಿ ನಗರಕ್ಕೆ ಭೇಟಿ ನೀಡುವುದರಿಂದ ದಾವಣಗೆರೆಯಲ್ಲಿ ಬೀದಿ ದೀಪವಿಲ್ಲದೆ ಜನರು ಅನುಭವಿಸುತ್ತಿರುವ ಸಮಸ್ಯೆಗಳು ಅವರಿಗೆ ಅರ್ಥವಾಗುತ್ತಿಲ್ಲ.

ಅತಿ ಮುಖ್ಯವಾಗಿ ಪಿ.ಬಿ. ರಸ್ತೆಯ ಡಿಸಿಎಂ ರೈಲ್ವೆ ಬ್ರಿಡ್ಜ್‌ನಿಂದ ಆವರಗೆರೆ ಮಾರ್ಗವಾಗಿ ಬಾಡಾ ಕ್ರಾಸ್‌ವರೆಗೆ ಬೀದಿ ದೀಪಗಳೇ ಇಲ್ಲ, ಭವಿಷ್ಯ ಜಿಲ್ಲಾ ಉಸ್ತುವಾರಿ ಸಚಿವರಲ್ಲದೆ ಸಂಸದರು, ಈ ಭಾಗದ ಶಾಸಕರು, ಮಹಾನಗರ ಪಾಲಿಕೆ ಸದಸ್ಯರುಗಳು ಈ ರಸ್ತೆಯಲ್ಲಿ ಸಂಚರಿಸುವುದಿಲ್ಲ ಎನಿಸುತ್ತದೆ.

ಪ್ರತಿದಿನ ಈ ಮಾರ್ಗವಾಗಿ ಸಂಚರಿಸುವ ಸಾವಿರಾರು ಜನರು ತಮ್ಮ ಜೀವ ಕೈಯಲ್ಲಿಡಿದುಕೊಂಡೇ ವಾಹನ ಚಲಾವಣೆ ಮಾಡುತ್ತಾರೆ. ನಮ್ಮ ಸರ್ಕಾರ ರಸ್ತೆಗಳಿಗೆ ಬೀದಿ ದೀಪ ಹಾಕಲಾರದಷ್ಟು ಬಡತನದಲ್ಲಿದೆಯೇ? ಎಂಬ ಪ್ರಶ್ನೆ ಜನಸಾಮಾನ್ಯರಲ್ಲಿ ಕಾಡುತ್ತಿದ್ದು, ಅನಾಹುತವಾಗಿ ಸಾರ್ವಜನಿಕರು ನಿಮಗೆ ಹಿಡಿಶಾಪ ಹಾಕುವ ಮೊದಲು, ಸಂಬಂಧಪಟ್ಟ ಶಾಸಕರು ಹಾಗೂ ಪಾಲಿಕೆ ಸದಸ್ಯರು ಸಮಸ್ಯೆಗೆ ಪರಿಹಾರ ಒದಗಿಸಲಿ ಎಂಬುದೇ ನಮ್ಮ ಬಯಕೆ ಎಂದಿದ್ದಾರೆ.

# ಜ್ಞಾನಾರ್ಜನೆಗಿರುವ ಅಡೆ ತಡೆಗಳ ವಿರುದ್ಧ ಧ್ವನಿ ಎತ್ತಬೇಕೇ ಹೊರತು, ಧರ್ಮಾಚರಣೆಗಳಿಗಲ್ಲ

### ವಿದ್ಯಾರ್ಥಿಗಳಿಗೆ ಹಂಪಿ ಕನ್ನಡ ವಿವಿ ಮಾಜಿ ಉಪಕುಲಪತಿ ಪ್ರೊ|| ಎ. ಮುರಿಗೆಪ್ಪ ಸಲಹೆ

ದಾವಣಗೆರೆ,ಫೆ.16- ವಿದ್ಯಾರ್ಥಿಗಳು ಜ್ಞಾನಾರ್ಜನೆಗೆ ಉಂಟಾಗುವ ಅಡೆತಡೆಗಳ ವಿರುದ್ದ ಧ್ವನಿ ಎತ್ತಬೇಕೇ ಹೊರತು ಧರ್ಮಾಚರಣೆಗಳಿಗಲ್ಲ ಎಂದು ಹಂಪಿ ಕನ್ನಡ ವಿವಿಯ ಮಾಜಿ ಉಪಕುಲಪತಿ ಪ್ರೊ|| ಎ. ಮುರಿಗೆಪ್ಪ ಹೇಳಿದರು.

ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ ಸಂಘಟಿಸಿರುವ 'ರಾಜ್ಯದ ಪ್ರಸಕ್ತ ಶೈಕ್ಷಣಿಕ ಸಮಸ್ಯೆಗಳು ಹಾಗು ಸವಾಲುಗಳು' ಎಂಬ ರಾಜ್ಯ ಮಟ್ಟದ ವೆಬಿನಾರ್‌ನಲ್ಲಿ ಅವರು ಮಾತನಾಡಿದರು.

ಶಿಕ್ಷಣ ಕೇತ್ರವಿಂದು ಹಿಂದೆಂದೂ ಕಂಡರಿಯದಂಥ ಸಮಸ್ಯೆಗಳನ್ನು ಎದುರಿಸುತ್ತಿದೆ, ಪರೀಕ್ಷೆ ಸಮೀಪಿಸುತ್ತಿವೆ ಆದರೆ ಪಠ್ಯಕ್ರಮ ಮುಗಿದಿಲ್ಲ. ಇಂತಹ ಸನ್ನಿವೇಶದಲ್ಲಿ ವಿದ್ಯಾರ್ಥಿಗಳು ತಮ್ಮ ಜ್ಞಾನಾರ್ಜನೆಗಾಗಿ ಉಂಟಾಗುವ ಇಂತಹ ಅಡೆತಡೆಗಳ ವಿರುದ್ಧ ಧ್ವನಿ ಎತ್ತಬೇಕಿದೆ. ಜೊತೆಗೆ ಒಡಕುಂಟು ಮಾಡುವ ಎಲ್ಲ ಶಕ್ತಿಗಳ ವಿರುದ್ದ ಒಗ್ಗಟ್ಟಾಗಬೇಕಿದೆ ಎಂದು ಕರೆ ನೀಡಿದರು.



ಸಮಿತಿ ರಾಜ್ಯ ಅಧ್ಯಕ್ಷ ಅಲ್ಲಮಪ್ರಭು ಬೆಟ್ಟದೂರು ಮಾತನಾಡುತ್ತಾ, ಉಪನ್ಯಾಸಕರ ಹುದ್ದೆಗಳು ಖಾಲಿ ಇವೆ, ಅತಿಥಿ ಶಿಕ್ಷಕರ ಗೋಳು ಸಂಪೂರ್ಣ ಬಗೆಹರಿಸಿಲ್ಲ. ಶಿಕ್ಷಕ ಹಸಿದಿದ್ದಾಗ ವಿದ್ಯಾರ್ಥಿಗಳಿಗೆ ಹೇಗೆ ಪಾಠ ಮಾಡಲು ಸಾಧ್ಯ ಎಂದರು. ಮೂಲ ಸಮಸ್ಯೆ ಹಿಜಾಬ್ ನಮ್ಮಲ್ಲಿಲ್ಲ ನಮ್ಮನ್ನಾಳುವವರಲ್ಲಿದೆ. ಬಹು ಸಂಸ್ಕೃತಿಯ ಮೇಲೆ ಏಕ ಸಂಸ್ಕೃತಿಯನ್ನು ಹೇರ ಹೊರಟಾಗ ಇಂಥ ಸಮಸ್ಯೆಗಳು ತಲೆ ದೋರುತ್ತವೆ ಎಂದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ವಿ.ಎನ್. ರಾಜಶೇಖರ್, ಸರ್ಕಾರದ ಬಳಿ ಸ್ಪಷ್ಟ ಸಮವಸ್ತ್ರ ನೀತಿ ಇಲ್ಲದಿರುವುದರಿಂದಾಗಿಯೇ ಬೀದಿಯಲ್ಲಿನ ಪುಂಡರು, ಪೋಕರಿಗಳು ಸಮವಸ್ತ್ರದ ಕುರಿತು ಮಾತನಾಡುವಂತಾಗಿದೆ. ದೇಶ ಇಂದು ಹಿಂದೆಂದೂ ಕಂಡರಿಯದ ಬಿಕ್ಕಟ್ಟುಗಳನ್ನು ಎದುರಿಸುತ್ತಿದೆ. ಇದರ ವಿರುದ್ದ ದೇಶಾದ್ಯಂತ ಹೋರಾಟಗಳು ಭುಗಿಲೇಳುತ್ತಿವೆ. ಈ ಹೋರಾಟಗಳನ್ನು ದಿಕ್ಕುತಿಗೊಳಿಸಲು ಸರ್ಕಾರ ಈ ಹಿಜಾಬ್ ಮತ್ತು ಕೇಸರಿ ಶಾಲಿನ ಗಲಭೆಯನ್ನು ಎಬ್ಬಿಸಿದೆ ಎಂದರು.

ಸಂತ ಜೋಸೆಫ್ ಸಂವಹನ ಮತ್ತು ಮಾಧ್ಯಮ ಅಧ್ಯಯನ ವಿಭಾಗದ ನಿರ್ದೇಶಕ ಡಾ. ರಿಚರ್ಡ್ ರೆಗೋ, ಹೈದರಾಬಾದಿನ ಸಿಯಾಸತ್ ಉರ್ದು ಪತ್ರಿಕೆಯ ವ್ಯವಸ್ಥಾಪಕ ಸಂಪಾದಕ ಜಹೀರುದ್ದೀನ್ ಅಲಿಖಾನ್ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಮಾಜಿ ನಿರ್ದೇಶಕ ಡಾ. ಪ್ರೀತಿ ಶುಭಚಂದ್ರ, ರಾಜ್ಯ ಕಾರ್ಯದರ್ಶಿ ಎಸ್. ಜಿ.ಮಹೇಶ್ ವೆಬಿನಾರ್‌ನಲ್ಲಿ ಭಾಗವಹಿಸಿದ್ದರು.

# ವಿದ್ಯಾರ್ಥಿಗಳು ಸುಖ ಬದಿಗಿಟ್ಟು ಅಧ್ಯಯನ ಮಾಡಬೇಕು



### ಸೋಮೇಶ್ವರ ವಿದ್ಯಾಲಯದಲ್ಲಿನ ಪುನಶ್ಚೇತನ ಕಾರ್ಯಕ್ರಮದಲ್ಲಿ ಆದರ್ಶ ಗೋಖಲೆ

ದಾವಣಗೆರೆ, ಫೆ.16- ನಗರದ ಶ್ರೀ ಸೋಮೇಶ್ವರ ವಿದ್ಯಾಲಯದಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ಪುನಶ್ಚೇತನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿದ ವಾಗ್ಮಿ, ಉಪನ್ಯಾಸಕ ಆದರ್ಶ ಗೋಖಲೆ ವಿದ್ಯಾರ್ಥಿಗಳ ಜೊತೆ ಸಂವಾದ ನಡೆಸಿದರು.

ನಿಮ್ಮೆಲ್ಲಾ ಸುಖವನ್ನು ಬದಿಗಿಟ್ಟು ಅಧ್ಯಯನ ಮಾಡಿದಾಗ ಮಾತ್ರ ಯಶಸ್ಸಿಗೆ ಹತ್ತಿರವಾಗುತ್ತೀರಿ ಎಂದು ಗೋಖಲೆ ವಿದ್ಯಾರ್ಥಿಗಳಿಗೆ ಹಿತ ನುಡಿದರು. ಜಗತ್ತನ್ನು ತಲ್ಲಣಗೊಳಿಸಿದ ಕೊರೊನಾ, ಓಮಿಕ್ರಾನ್ ಎಂಬ ಎರಡು ವೈರಸ್ ಇದೀಗ ನಿಶ್ಚಲಗೊಂಡಂತೆಯೇ ಆಗಿದೆ. ಆದರೆ, ಇದರ ಪರಿಣಾಮವಾಗಿ ವಿದ್ಯಾರ್ಥಿಗಳಲ್ಲಿ ಅಧ್ಯಯನ ವಿಚಾರವಾಗಿ ನಾಳೆ ಮಾಡೋಣ, ನನ್ನಿಂದಾಗದು ಎಂಬ ಮತ್ತೆರಡು ವೈರಸ್‌ಗಳು ಹುಟ್ಟಿವೆ ಅದಕ್ಕೆ ತಕ್ಷಣಕ್ಕೆ ವ್ಯಾಕ್ಸಿನ್ ಕಂಡುಕೊಳ್ಳಬೇಕು ಎಂದು ಮಾರ್ಮಿಕವಾಗಿ ವಿಶ್ಲೇಷಿಸಿದರು.

ಶಿಕ್ಷಕರನ್ನುದ್ದೇಶಿಸಿ ಮಾತಾಡಿದ ಗೋಖಲೆ ಅವರು 'ಸಾಮಾನ್ಯ ನರನನ್ನು ನಾರಾಯಣ ನನ್ನಾಗಿಸುವ ಸಾಮರ್ಥ್ಯ ಶಿಕ್ಷಕರಿಗೆ ಮಾತ್ರ ಇರುವುದು' ಎಂದರು. ಆನ್ಲೈನ್ ಶಿಕ್ಷಣದಿಂದ ಬಂದ ಮಕ್ಕಳ ಮನಸ್ಸನ್ನು ಮತ್ತೆ ಹಿಂದಿನಂತೆ ಹೊಂದಿಸಿಕೊಂಡು ಕಲಿಸುವ ಗುರು ತರ ಜವಾಬ್ದಾರಿ ಶಿಕ್ಷಕರ ಮೇಲಿದೆ ಎಂದರು.

ಸಂಸ್ಥೆಯ ಗೌರವ ಕಾರ್ಯದರ್ಶಿ ಕೆ. ಎಂ.ಸುರೇಶ್, ಪ್ರಾಂಶುಪಾಲರಾದ ಪ್ರಭಾವತಿ, ವೀಣಾ, ಶೈಕ್ಷಣಿಕ ನಿರ್ದೇಶಕ ಪತ್ರೇಶ್, ಆಡಳಿತಾಧಿಕಾರಿ ಹರೀಶ್ ಬಾಬು ಹಾಜರಿದ್ದರು. ಕಾರ್ಯಕ್ರಮವನ್ನು ಶಿಕ್ಷಕ ಶಿವಾನಂದ್ ಕರೂರ್ ಮಠ ನಿರೂಪಿಸಿದರು.

ವಾಸವಿ ಯುವಜನ ಸಂಘ (ರಿ)
ಎಸ್.ಕೆ.ಪಿ. ರಸ್ತೆ, ದಾವಣಗೆರೆ
ಜನ್ಮದಿನದ ಶುಭಾಶಯಗಳು

ಶ್ರೀ ನಿತಿನ್ ಆರ್.ಎನ್.
ನಿರ್ದೇಶಕರು
ಮಾತೆ ಶ್ರೀ ಕನ್ಯಕಾಪರಮೇಶ್ವರಿ ಅಮ್ಮನವರು ಅವರಿಗೆ ಆಯುರಾರೋಗ್ಯ-ಅಷ್ಟೈಶ್ವರ್ಯ-ಸುಖ-ಶಾಂತಿ - ನೆಮ್ಮದಿ ನೀಡಲಿ ಹಾಗೂ ಇನ್ನೂ ಹೆಚ್ಚಿನ ಸಮಾಜ ಸೇವೆ ಮಾಡಲು ಶಕ್ತಿ ನೀಡಲೆಂದು ಪ್ರಾರ್ಥಿಸುತ್ತಾ, ಶುಭ ಹಾರೈಸುತ್ತೇವೆ.
ಅಧ್ಯಕ್ಷರು, ಕಾರ್ಯಕಾರಿ ಸಮಿತಿ ಹಾಗೂ ಸರ್ವ ಸದಸ್ಯರು
ವಾಸವಿ ಯುವಜನ ಸಂಘ (ರಿ), ಎಸ್.ಕೆ.ಪಿ. ರಸ್ತೆ, ದಾವಣಗೆರೆ.

ವಾಸವಿ ಯುವಜನ ಸಂಘ (ರಿ)
ಎಸ್.ಕೆ.ಪಿ. ರಸ್ತೆ, ದಾವಣಗೆರೆ
ಜನ್ಮದಿನದ ಶುಭಾಶಯಗಳು

ಶ್ರೀ ಪೃಥ್ವಿಕೃಷ್ಣ ಕೆ.ಎಂ.
ನಿರ್ದೇಶಕರು
ಮಾತೆ ಶ್ರೀ ಕನ್ಯಕಾಪರಮೇಶ್ವರಿ ಅಮ್ಮನವರು ಅವರಿಗೆ ಆಯುರಾರೋಗ್ಯ-ಅಷ್ಟೈಶ್ವರ್ಯ-ಸುಖ-ಶಾಂತಿ - ನೆಮ್ಮದಿ ನೀಡಲಿ ಹಾಗೂ ಇನ್ನೂ ಹೆಚ್ಚಿನ ಸಮಾಜ ಸೇವೆ ಮಾಡಲು ಶಕ್ತಿ ನೀಡಲೆಂದು ಪ್ರಾರ್ಥಿಸುತ್ತಾ, ಶುಭ ಹಾರೈಸುತ್ತೇವೆ.
ಅಧ್ಯಕ್ಷರು, ಕಾರ್ಯಕಾರಿ ಸಮಿತಿ ಹಾಗೂ ಸರ್ವ ಸದಸ್ಯರು
ವಾಸವಿ ಯುವಜನ ಸಂಘ (ರಿ), ಎಸ್.ಕೆ.ಪಿ. ರಸ್ತೆ, ದಾವಣಗೆರೆ.

## ವಿಜೃಂಭಣೆಯ ಮಾರ್ಕಂಡೇಶ್ವರ ಮಹರ್ಷಿಗಳ ಜಯಂತಿ



### ರಾಣೇಬೆನ್ನೂರು

ರಾಣೇಬೆನ್ನೂರು,ಫೆ.16- ಶ್ರೀ ಗುರು ಮಾರ್ಕಂಡೇಶ್ವರ ಮಹರ್ಷಿಗಳ ಜಯಂತ್ಯೋತ್ಸವ, ತೊಟ್ಟಿಲೋತ್ಸವ ಹಾಗೂ ಪಾಲಕಿ ಉತ್ಸವ ಕಾರ್ಯಕ್ರಮ ಸಿದ್ದೇಶ್ವರ ನಗರದಲ್ಲಿರುವ ಶ್ರೀ ಮಾರ್ಕಂಡೇಶ್ವರ ದೇವಸ್ಥಾನದಲ್ಲಿ ಬಹಳ ವಿಜೃಂಭಣೆಯಿಂದ ಜರುಗಿತು.

ಶ್ರೀ ಗುರು ಮಾರ್ಕಂಡೇಶ್ವರ ಪದ್ಮಶಾಲಿ ಗುರು ಮಠ ಮಹಾಸಂಸ್ಥಾನದ ಪೀಠಾಧ್ಯಕ್ಷರಾದ ಶ್ರೀ ಪ್ರಭುಲಿಂಗ ಸ್ವಾಮೀಜಿಯವರ ದಿವ್ಯ ಸಾನ್ನಿಧ್ಯದಲ್ಲಿ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು.

ಸಮಾಜದ ಅಧ್ಯಕ್ಷ ನಾಗರಾಜ್ ಅಗಡಿ, ಉಪಾಧ್ಯಕ್ಷ ಹನುಮಂತಪ್ಪ ಮುಕ್ತೇನಹಳ್ಳಿ ಮತ್ತು ಕೆ.ಕೆ.ಹಳ್ಳಳ್ಳಿ, ಶಂಕ್ರಪ್ಪ ಗರಡಿಮನಿ, ಲಕ್ಷ್ಮಣ ಕಡ್ಲೆಬಾಳು, ಪ್ರವೀಣ ಗುತ್ತೂರು, ಹನುಮಂತಪ್ಪ ಸುಂಕಾಪುರ, ರೇಖಪ್ಪ ಕಡ್ಲೆಬಾಳು, ಮಾರುತಿ ಗರಡಿಮನಿ, ಬಸವರಾಜ ಐರಣಿ, ರವಿ ಕಿಚಡಿ, ಕುಮಾರ ರಂಗನವರ, ನೀಲಪ್ಪ ಕುಮಾರಪ್ಪನವರ, ಎಲ್ಲಪ್ಪ ಗುತ್ತಲ, ನಾಗೇಶ ದೇವರೆಡ್ಡಿ, ಪರಶುರಾಮ ಅಗಡಿ, ಬೆನಕೇಶ ಹದಡಿ, ಮಲ್ಲಿಕಾರ್ಜುನ ಮಾಗೇನಹಳ್ಳಿ, ಅಜಯ್ ಹುಲ್ಲತ್ತಿ, ಗಣೇಶ್ ಹುಲ್ಲತ್ತಿ, ರೇವಣಸಿದ್ದಪ್ಪ ಗುತ್ತೂರ ರಾಜು ಕಡ್ಲೆಬಾಳು, ನಾಗರಾಜ ಬಾದರಗಟ್ಟಿ ಆಗಮಿಸಿದ್ದರು.

ಎನ್‌ಡಬ್ಲ್ಯೂಕೆಎಸ್‌ಆರ್‌ಟಿಸಿ ಉಪಾಧ್ಯಕ್ಷ ಬಸವರಾಜ್ ಕೇಲಗಾರ ಹಾಗೂ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಚೋಳಪ್ಪ ಕಸವಾಳ ಕಾರ್ಯಕ್ರಮಕ್ಕೆ ಆಗಮಿಸಿ ಶ್ರೀ ಸ್ವಾಮಿಯ ದರ್ಶನ ಪಡೆದರು.

ಶ್ರೀ ಗುರು ಮಾರ್ಕಂಡೇಶ್ವರ ಪತ್ತಿನ ಸಹಕಾರಿ ಸೊಸೈಟಿಯ ನೂತನ ಅಧ್ಯಕ್ಷ ಹನುಮಂತಪ್ಪ ಮುಕ್ತೇನಹಳ್ಳಿ ಮತ್ತು ಉಪಾಧ್ಯಕ್ಷ ಲಕ್ಷ್ಮಣ ಕಡ್ಲಿಬಾಳ ಅವರನ್ನು ಡಾ.ಬಸವರಾಜ ಕೇಲಗಾರ ಸನ್ಮಾನಿಸಿದರು.

## ಸಾರ್ವಜನಿಕ ಪ್ರಕಟಣೆ

ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕು, ಮಹಜೇನಹಳ್ಳಿ ಗ್ರಾಮದ ರಿ.ಸ.ನಂ. 68/1ಎ2ಎ1ರ ವಿಸ್ತೀರ್ಣ 1 ಎಕರೆ 08 ಗುಂಟೆ ಹಾಗೂ ರಿ.ಸ.ನಂ. 68/1ಎ2ಎ2ರ ವಿಸ್ತೀರ್ಣ 24.08 ಗುಂಟೆ ಹಾಗೂ 68/1ಎ2ಎ3ರ ವಿಸ್ತೀರ್ಣ 24.08 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಇದರ ಮಾಲೀಕರಾದ ಸಿ. ಚಿದಾನಂದಪ್ಪ ಬಿನ್ ಲೇಟ್ ಚನ್ನಬಸಪ್ಪ ಮತ್ತು ಶ್ರೀಮತಿ ವಿದ್ಯಾ ಕೋಂ ಚಿದಾನಂದಪ್ಪ, ವಿದ್ಯಾನಗರ, ಹರಿಹರ ಟೌನ್ ಇವರು ನಮ್ಮ ಕಕ್ಷಿದಾರರಾದ ಆರ್. ರವೀಂದ್ರ ಬಿನ್ ಹೇಮಸುಂದರ ರಾಜು, ಡೋರ್ ನಂಬರ್ 3861, ಎಸ್.ಆರ್.ಎಸ್. ಬಿಲ್ಡಿಂಗ್, ಎಂ.ಸಿ.ಸಿ. ಬಿ ಬ್ಲಾಕ್, ಬಿಐಇಟಿ ರಸ್ತೆ, ದಾವಣಗೆರೆ ಇವರಿಗೆ ದಿನಾಂಕ : 15.06.2016 ರಂದು ಕ್ರಯದ ಕರಾರು ಮಾಡಿಕೊಟ್ಟಿದ್ದು, ಸದರಿ ಕ್ರಯದ ಕರಾರಿಗೆ ಅನುಗುಣವಾಗಿ ನೋಂದಾಯಿತ ಕ್ರಯಪತ್ರ ಮಾಡಿಸಿಕೊಡದೇ ಮೋಸ ಮಾಡಿದ ಹಿನ್ನೆಲೆಯಲ್ಲಿ ನಮ್ಮ ಕಕ್ಷಿದಾರರಾದ ಆರ್. ರವೀಂದ್ರರವರು ಸಿ. ಚಿದಾನಂದಪ್ಪ ಬಿನ್ ಲೇಟ್ ಚನ್ನಬಸಪ್ಪ ಮತ್ತು ಶ್ರೀಮತಿ ವಿದ್ಯಾ ಕೋಂ ಚಿದಾನಂದಪ್ಪ ಇವರುಗಳ ವಿರುದ್ಧವಾಗಿ ಕ್ರಯಪತ್ರ ಮಾಡಿಸಿಕೊಳ್ಳುವ ನಿಟ್ಟಿನಲ್ಲಿ ಈಗಾಗಲೇ ಕಾನೂನಿನ ಕ್ರಮ ಕೈಗೊಂಡಿದ್ದು, ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ಸದರಿ ಕ್ರಯದ ಕರಾರು ಜಾರಿಯಲ್ಲಿರುವುದರಿಂದ ಈ ಕೆಳ ಕಾಣಿಸಿದ ಷೆಡ್ಯೂಲ್ ಆಸ್ತಿಗಳನ್ನು ಯಾರಾದರೂ ಖರೀದಿಸಿದ್ದಲ್ಲಿ ಅವರು ಸಹ ಕಾನೂನು ಕ್ರಮಕ್ಕೆ ಒಳಗಾಗಬೇಕಾಗುತ್ತದೆ ಮತ್ತು ಈ ಹಿಂದಿನ ಕ್ರಯದ ಕರಾರು ಗಮನದಲ್ಲಿದ್ದು, ಈ ಆಸ್ತಿಗಳನ್ನು ಖರೀದಿಸಿದರೆ, ಮಾರಾಟಗಾರರು ಮತ್ತು ಖರೀದಿದಾರರು ಕಾನೂನು ಸಿವಿಲ್ ಮತ್ತು ಕ್ರಿಮಿನಲ್ ಕ್ರಮಕ್ಕೆ ಒಳಗಾಗುವುದರಿಂದ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ಈ ಕೆಳ ಕಾಣಿಸಿದ ಸ್ವತ್ತುಗಳು ಈಗಾಗಲೇ ಕಾನೂನು ಪ್ರಕ್ರಿಯೆಯಲ್ಲಿರುವುದರಿಂದ ಸದರಿ ಆಸ್ತಿಗಳಿಗೆ ಸಂಬಂಧಿಸಿದಂತೆ ಕ್ರಯ, ಅಡವು, ಭೋಗ್ಯ ಇತರೆ ವಹಿವಾಟು ಮಾಡಿಕೊಂಡಲ್ಲಿ ಅವರೇ ನೇರ ಜವಾಬ್ದಾರರಾಗಿರುತ್ತಾರೆ ಮತ್ತು ಈ ಸ್ವತ್ತುಗಳಿಗೆ ಸಂಬಂಧಿಸಿದಂತೆ ಈಗಾಗಲೇ ಕಾನೂನು ಕ್ರಮ ಕೈಗೊಳ್ಳಲಾಗಿದೆ ಎಂದು ಸಾರ್ವಜನಿಕರಿಗೆ ಈ ಮೂಲಕ ತಿಳಿಸುತ್ತೇವೆ. ಆದ್ದರಿಂದ ಈ ನೋಟಿಸ್.

**ಷೆಡ್ಯೂಲ್** : 1) ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕು, ಮಹಜೇನಹಳ್ಳಿ ಗ್ರಾಮದ ರಿ.ಸ.ನಂ. 68/1ಎ2ಎ1 ರ ವಿಸ್ತೀರ್ಣ 1 ಎಕರೆ 08 ಗುಂಟೆಗೆ ಚಕ್ಕುಬಂದಿ, ಪೂರ್ವಕ್ಕೆ : ಕೊಂಡಜ್ಜಿ ಹನುಮಂತಪ್ಪರವರ ಜಮೀನು, ಪಶ್ಚಿಮಕ್ಕೆ : ಸಿ. ಶಿವಾಜಿರವರ ಜಮೀನು, ಉತ್ತರಕ್ಕೆ : ಕೂನಾರ ಕೆಂಚಪ್ಪನವರ ಜಮೀನು, ದಕ್ಷಿಣಕ್ಕೆ ; ರೋಡ್. 2) ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕು, ಮಹಜೇನಹಳ್ಳಿ ಗ್ರಾಮದ ರೀ. ಸ.ನಂ. 68/1ಎ2ಎ2ರ ವಿಸ್ತೀರ್ಣ 0 ಎಕರೆ 24.08 ಗುಂಟೆಗೆ ಚೆಕ್ಕುಬಂದಿ: ಪೂರ್ವಕ್ಕೆ: ರಿ.ಸ.ನಂ. 68/1ಎ2ಎ1 ಪಶ್ಚಿಮಕ್ಕೆ : ರಿ.ಸ.ನಂ. 68/1ಎ2ಎ3, ಉತ್ತರಕ್ಕೆ : ಕೂನಾರ ಕೆಂಚಪ್ಪನವರ ಜಮೀನು, ದಕ್ಷಿಣಕ್ಕೆ : ರೋಡ್, 3) ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕು, ಮಂಜೇನಹಳ್ಳಿ ಗ್ರಾಮದ ರಿ.ಸ.ನಂ. 68/1ಎ2ಎ3ರ ವಿಸ್ತೀರ್ಣ 0 ಎಕರೆ 24.08 ಗುಂಟೆಗೆ ಚಕ್ಕುಬಂದಿ : ಪೂರ್ವಕ್ಕೆ : ರಿ.ಸ.ನಂ. 68/1ಎ2ಎ2, ಪಶ್ಚಿಮಕ್ಕೆ : ಕೃಷ್ಣಪ್ಪನವರ ಜಮೀನು, ಉತ್ತರಕ್ಕೆ : ಕೂನಾರ ಕೆಂಚಪ್ಪನವರ ಜಮೀನು, ದಕ್ಷಿಣಕ್ಕೆ : ರೋಡ್.

ಸಹಿ/- ಬಿ.ಎಸ್. ನಾಗರಾಜ್, ವಕೀಲರು
1ನೇ ಫ್ಲೋರ್, ಜಾಧವ್ ಬಿಲ್ಡಿಂಗ್, ಜಯದೇವ ಸರ್ಕಲ್ ಹತ್ತಿರ,
ದಾವಣಗೆರೆ. ಫೋ. : 94812 88018

# ಚೆಂಬೆಳಕಿನ ಕವಿಗೆ ನುಡಿ ನಮನ

## ಸಾತ್ವಿಕ ತಪಸ್ವಿ ಚೆನ್ನವೀರ ಕಣವಿ

ಕನ್ನಡದ ಸಮನ್ವಯ ಕವಿ
ಸುನೀತಗಳ ಸಾಮ್ರಾಟ
ಭಾವುಕ ಜೀವಿ
ಹೊಸಗನ್ನಡದ ಸುಪ್ರಸಿದ್ಧ
ಚೆಂಬೆಳಕಿನ ಚೇತನ ಮರೆಯಾಯಿತು!

ಕನ್ನಡ ಬಳಸಿ ಬೆಳೆಸಿ
ಹೆಸರಾಯಿತು ಕರ್ನಾಟಕ
ಉಸಿರಾಗಲಿ ಕನ್ನಡ
ವಿಶ್ವ ಭಾರತಿಗೆ ಕನ್ನಡದಾರತಿ
ಎದೆಯುಬ್ಬಿಸಿ ಹೇಳಿದರು
ಚೆನ್ನವೀರ ಕಣವಿ!

ನೆನಪಿನಲ್ಲಿ ಉಳಿಯುವ
ಸಾಹಿತ್ಯ ಬರೆಯುವವನೆ
ನಿಜವಾದ ಕವಿ ಎಂದು ಹೇಳಿ
ವಿಡಂಬನೆಯ ಮೂಲಕ
ವಾಸ್ತವವನ್ನು ತಿಳಿಸಿ
ಮಾತೃಭಾಷೆಗೆ ಮೊದಲ
ಪೂಜೆ ಸಲ್ಲಬೇಕೆಂದು ಕರೆಕೊಟ್ಟ
ಭಾವಜೀವಿ ಚೆನ್ನವೀರ ಕಣವಿ!

ಕಾವ್ಯಾಕ್ಷಿ; ಭಾವಜೀವಿ; ಆಕಾಶಬುಟ್ಟಿ;
ದೀಪದಾರಿ; ನೆಲಮುಗಿಲು; ಮಣ್ಣಿನ ಮೆರವಣಿಗೆ;
ಕವನ ಸಂಕಲನಗಳ ಸರದಾರ
ಧಾರವಾಡದ ಸಾತ್ವಿಕ ತಪಸ್ವಿ
ಚೆನ್ನವೀರ ಕಣವಿ!

ಕನ್ನಡ ಸಾಹಿತ್ಯಲೋಕದ ಮಿನುಗುತಾರೆ
ಶಶಿಯ ಬೆಳದಿಂಗಳಂತೆ ನಿನ್ನ ಮನ
ವಂದಿಸುವೆ ನಾ ನಿನಗೆ ನುಡಿನಮನ

**- ಜೆಂಬಿಗಿ ಮೃತ್ಯುಂಜಯ**
ಕನ್ನಡ ಉಪನ್ಯಾಸಕರು, ದಾವಣಗೆರೆ

ಕನ್ನಡದ ಸಮನ್ವಯ ಕವಿ, ಕರ್ನಾಟಕ ರತ್ನ, ಸುನೀತಗಳ ಸಾಮ್ರಾಟ್ ಚನ್ನವೀರ ಕಣವಿಯವರು ಇಂದು ಭೌತಿಕವಾಗಿ ನಮ್ಮನ್ನಗಲಿದ್ದರೂ, ಅವರ ಸಾಹಿತ್ಯದ ಸವಿಯ ಮೂಲಕ ಸದಾ ನಮ್ಮೊಂದಿಗಿದ್ದಾರೆ. ಅವರ ಆಕಾಶ ಬುಟ್ಟಿ ಸಂಕಲನದ 'ಗೆಳೆತನ' ಕವಿತೆಯ ಭಾವದ ಮೂಲಕ ಅವರಿಗೆ ಈ ಅಕ್ಷರಗಳ ನಮನ .

*ಗೆಳೆತನದ ಸುವಿಶಾಲ ಆಲದಡಿ ಪಸರಿಸಿಹ*
*ತಣ್ಣೆಳಲ ತಂಪಿನಲಿ ತಂಗಿರುವೆನು*
*ಜೀವನದನಂತ ದುರ್ಭರ ಭವಣೆ ನೋವುಗಳ*
*ಕಾವುಗಳ ಮೌನದಲಿ ನುಂಗಿರುವೆನು*
*ಗೆಳೆತನವೆ ಚಿರಬಾಳ ಸಂಜೀವಿನಿ ವಿಶ್ವದಂತಃಕರಣ*
*ಮಂದಾಕಿನಿ*

*ಉಪ್ಪಿಗಿಂತಲು ರುಚಿಯು ತಾಯಿಗಿಂತಲು ಬಂಧು*
*ಇಲ್ಲೆಂಬ ಗಾದೆ ನುಡಿ ಕೇಳಿರುವೆನು.*
*ಗೆಳೆತನದ ಶುಚಿ ರುಚಿಯು ಇದಕೂ ಮಿಗಿಲಾಗಿಹುದು*
*ಎಂಬ ಸಾಹಸ ಮಾಡೆ ದೋಷವೇನು?*
*ಕಂಡ ಕಂಡವರೇನು ಬಲ್ಲರಿದನು ಉಂಡವನು ಕಂಡಿಹನು ಇದರ*
*ಹದನು*

*ಹೇಗೋ ಹೇಗೋ ಹಗಲುಗೊಟ್ಟು ಬಂದಿಹ ಕೂರ್ಪು*
*ಆಗು ಹೋಗುಗಳಿಗೆ ಬಾಗದಂತೆ ಸುಖಕೆ ಸಂತಸಪಟ್ಟು*
*ದುಃಖದಲಿ ಸಹಭಾಗಿಯಾಗೆ ಜೀವನರಸದ ಪಾಕದಂತೆ*
*ಸರಸ ವಿರಸವನೆಲ್ಲ ಅಪ್ಪುಕಯ್ದು*
*ಬಾಳುವರು ಗಂಧದೊಲು ಜೀವ ತೇಯ್ದು.*

*ಇನಿವಿರಿದು ಗೆಳೆತನದ ಗುಟ್ಟಿಹುದು ನಲ್ಗೆಳೆಯ*
*ಬಿನ್ನಣದ ನುಡಿಯಲ್ಲ ಎದೆಯ ಮೀಟಿ*
*ಜೀವ ಜೀವಕೆ ಇಂಬುಕಯ್ವವರು ನಾಲ್ವರಿರೆ*
*ಚದುರಂಗ ಬಲವಿದಕೆ ಯಾವ ಸಾಟಿ*

**ಗೆಳತಿಗೆ, ಗೆಳೆತನ ಏನು?**

ಅದಕ್ಕೆ ಸೀಮೆ ,ಚೌಕಟ್ಟು ಏನಾದರೂ ಇದೆಯಾ? ಅದೊಂದು ಮಂದಾಕಿನಿ ಪ್ರಶಾಂತವಾಗಿ ,ಎಲ್ಲ ಏರಿಳಿತಗಳನ್ನು ಸಮನ್ವಯತೆಯಿಂದ ಅನುಭವಿಸಿ,

ಪರಸ್ಪರರ ಸುಖಕ್ಕಾಗಿ ನಿರಂತರ ಶ್ರಮಿಸುವ ಒಂದು ಕ್ರಿಯಾತ್ಮಕ ಭಾವ ನಿರ್ಬೋಧನೆ. ವಿನಾಕಾರಣ ಅನುಮಾನ,ಮೋಸ ಮುಂತಾದ ಯಾವುದೇ ರೀತಿಯ ಬಿಸಿ ತಾಗದು.ಅಂತೆಯೇ ಅದು ವಿಶಾಲ ಆಲದ ಮರದ ನೆರಳಲ್ಲಿ ಅಂದರೆ ನಿರಂತರ,ಪ್ರೀತಿ, ತ್ಯಾಗಗಳ ನೆರಳೇ ನೆರಳು.

ಇದೊಂದು ಅಮೃತಮಯವಾದ ತತ್ವ .ಚಿರಂತನೆಯ ಚಿರ ನೂತನ ಪ್ರಕ್ರಿಯೆಯೇ ಈ ಗೆಳೆತನ... ಗೆಳೆತನವೆಂಬ ಪರಿಷೆಯಲ್ಲಿ ಸ್ವಾರ್ಥವಿಲ್ಲ, ಮೇಲು- ಕೀಳಿನ ಅಹಮಿಕೆ ಇಲ್ಲ.



ಸ್ನೇಹದ ಸವಿಯನ್ನುಂಡವರು, ಹದವ ಕಂಡವರು, "ಉಪ್ಪಿಗಿಂತ ರುಚಿಯಿಲ್ಲ ತಾಯಿಗಿಂತ ಬಂಧುವಿಲ್ಲ" ಎಂಬ ಗಾದೆ ಮಾತಿಗಿಂತಲೂ ದೊಡ್ಡದೆಂದೂ, ಶ್ರೇಷ್ಠವೆಂದು ಹೇಳುತ್ತಾರೆ. ಸುಖದಲ್ಲಿ ಭಾಗಿಯಾಗಿ, ದುಃಖದಲ್ಲಿ ಜೊತೆಯಾಗಿರೆ ಅದುವೇ ರಸಪಾಕ ವೆನ್ನುತ್ತಾರೆ. ಸರಸ- ವಿರಸಗಳನ್ನು ಸಮವಾಗಿ ಅಪ್ಪಿ, ಪರಸ್ಪರರೂ ಗಂಧದಂತೆ ತೇಯ್ದು ಬಾಳುವರೆಂಬ ಕವಿತೆಯ ಭಾವ ಮನಮುಟ್ಟುವಂತಿದೆ.

ಗೆಳೆತನದ ಗುಟ್ಟು ಕೇವಲ ನುಡಿಯಲ್ಲ, ಹೃದಯದ ಮಾತು . ದೇಹಗಳೆರಡು ಆತ್ಮ ಒಂದು. ಜೀವಕ್ಕೆ ಜೀವ ಕೊಡುವ ನಾಲ್ವರು ಗೆಳೆಯರಿರೇ ಬದುಕಿನ ಚದುರಂಗದಾಟಕ್ಕೆ ಸಾಟಿಯಿಲ್ಲ. ಅದಕ್ಕಿಂತ ಬಲವು ಬೇರೆ ಬೇಕಿಲ್ಲ. ಇಂತಹ ಮಾಧುರ್ಯ ತುಂಬಿದ, ಬದುಕಿನ ಸಾರ ತುಂಬಿದ, ಸಾವಿರಾರು ಅದ್ಭುತ ಸಾಹಿತ್ಯದ ಮೂಲಕ ಅರ್ಥಪೂರ್ಣ ಸಂದೇಶ ನೀಡಿದ್ದಾರೆ.

ಗೆಳೆತನದ ಅವಿನಾಭಾವದ ರೀತಿಯಲ್ಲಿ ಬರೆದ ಕವನ ಗೆಳೆತನ. ಇಂತಹ ಅದೆಷ್ಟೋ ನವಿರಾದ ಕಾವ್ಯಗಳು ನಮ್ಮನ್ನು ಸನ್ಮಾರ್ಗಕ್ಕೆ ಕರೆದೊಯ್ಯುವ ಸಂದೇಶಗಳನ್ನು ನೀಡುತ್ತವೆ. ಒಂದು ಚಿಕ್ಕ ಗುಬ್ಬಿಯೂ ಕೂಡ ಬೃಹತ್ ಸಾಧನೆ ಮಾಡಬಲ್ಲದು, ಹದ್ದು ತನ್ನ ಕ್ಷಮತೆಗೆ ತಕ್ಕಷ್ಟು ಮಾತ್ರ ಎತ್ತರಕ್ಕೆ ಹಾರಬಲ್ಲದು. ಹೀಗೆ ಪ್ರತಿಯೊಬ್ಬ ಮನುಷ್ಯನೂ ಕೂಡ ಕೀಳರಿಮೆಯಿಂದ ಹೊರಬರಬೇಕು ಎನ್ನುವ ನೀತಿ ಕಣವಿಯವರ ಕಾವ್ಯಗಳಲ್ಲಿ ಕಾಣಬಹುದು. ನವೋದಯ ಮತ್ತು ನವ್ಯ ಗಳನ್ನು ಸಹಿತ ಅವರು ಸಮೀಕರಣ ಮಾಡಿಕೊಂಡಿದ್ದಾರೆ. ಇಂತಹ ಮಹಾನ್ ಕವಿಯ ಪರಿಚಯ ಹುಟ್ಟು, ಬದುಕು, ಸಾವು ಈ ವಿವರಗಳಿಗೆ ಸೀಮಿತವಾಗದೆ ಅವರ ಕಾವ್ಯಗಳ ಚರ್ಚೆ, ವಿಮರ್ಶೆಗಳಂತಹ ಅಧ್ಯಯನದ ಮೂಲಕವೂ ಮಾಡಿದಾಗ ಮಾತ್ರ ಶ್ರದ್ಧಾಂಜಲಿ ಸಲ್ಲಿಸಿದಂತಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯ. ಭಗವಂತ ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತೇನೆ.

**- ಸುನಿತಾ ಪ್ರಕಾಶ್**, ದಾವಣಗೆರೆ

## ಸಮನ್ವಯ ಕವಿ ಚನ್ನವೀರ ಕಣವಿ..

ಆಕಾಶ ಬುಟ್ಟಿಯಲ್ಲಿ ತೇಲಿದೆ
ಭಾವ ಜೀವ
ಕನ್ನಡಾಂಬೆಯ
ಮಡಿಲಿನಿಂದ ಜಾರಿದೆ
ಮತ್ತೊಂದು ಜೀವ
ಕನ್ನಡಮ್ಮನ ಜೀವಧ್ವನಿ
ಕನ್ನಡದ ಸಮನ್ವಯ ಕವಿ

ಸುನೀತಗಳ ಸಾಮ್ರಾಟ
ಕನ್ನಡ ಸಾಹಿತ್ಯದ ವಿರಾಟ
ಚೆಂಬೆಳಕಿನ ಕವಿ
ನಾಡೋಜ ಚನ್ನವೀರ
ಕಣವಿ

ಸಾಗಿದೆ ಪಯಣ ಧರಣಿಯ
ಒಡಲಿಗೆ
ದೂರದ ಕಡಲಿಗೆ
ಹೊಂಬೆಳಕ ಸೂಸಿ
ಕಾರ್ತಿಕ ಮೋಡದಾಚೆ

ಸಾಹಿತ್ಯ ಚಿಂತನದ
ಸಮತೋಲನ
ಸಮಹಿತದ
ಕಾವ್ಯಾನುಸಂಧಾನ
ನವಿಲೂರ ಮನೆಯಿಂದ
ಮರೆಯದ ನವ್ಯಧ್ವನಿ
ಬಣ್ಣಿಸಿದಷ್ಟು ಬೆಳಗುವ ಕವಿ
ರತ್ನ ನೀ ..

**- ಬಸವರಾಜ. ಕರುವಿನ ಬಸವನಾಳು.**

# ಮೈಲಾರ ಪಾದಯಾತ್ರಿಗಳಿಗೆ ನಿರ್ಬಂಧ ಸಡಿಲಿಕೆಗೆ ಒತ್ತಾಯ

ಹೂವಿನಹಡಗಲಿ, ಫೆ .16- ತಾಲ್ಲೂಕಿನ ಸುಪ್ರಸಿದ್ಧ ಶ್ರೀ ಮೈಲಾರಲಿಂಗೇಶ್ವರ ಜಾತ್ರೆಗೆ ಬರುವ ಪಾದಯಾತ್ರಿಗಳಿಗೆ ಮೈಲಾರ ಪ್ರವೇಶಿಸಲು ನಿರ್ಬಂಧ ಸಡಿಲಗೊಳಿಸಿ ಅನುಮತಿ ಕೊಡಬೇಕೆಂಬ ಒತ್ತಾಯ ಹೆಚ್ಚಾಗಿದೆ.

ಕೊಪ್ಪಳ, ಕುಷ್ಟಗಿ, ಗದಗ. ಹೊಸಪೇಟೆ, ಹಾವೇರಿ, ದಾವಣಗೆರೆ ಸೇರಿದಂತೆ ನಾಡಿನಾದ್ಯಂತ ಹರಕೆ ಹೊತ್ತು ಕೊಂಡ ಭಕ್ತರು ಪಾದಯಾತ್ರೆ ಕೈಗೊಂಡಿದ್ದಾರೆ ಕಡೇ ಪಕ್ಷ ಮೂಲಭೂತ ಸೌಕರ್ಯಗಳನ್ನು ನಮ್ಮಂತಹ ಪಾದಯಾತ್ರೆ ಗಳಿಗೆ ಕಲ್ಪಿಸಬೇಕು. ಕಳೆದ ವರ್ಷದಿಂದ ಕೊರೊನಾ ಕಾರಣದಿಂದ ಜಾತ್ರೆಗೆ ಹೊರಗಿನಿಂದ ಬರುವ ಭಕ್ತರ ಮೇಲೆ ನಿರ್ಬಂಧವನ್ನು ಹೇರಿ, ನಿಷೇಧಾಜ್ಞೆ ಜಾರಿ ಮಾಡಿದ್ದರೂ ಅಪಾರ ಸಂಖ್ಯೆಯಲ್ಲಿ ಭಕ್ತರು ಪಾದಯಾತ್ರೆ ಕೈಗೊಂಡಿದ್ದರು

ಅಲ್ಲದೇ, ಹೊರ ರಾಜ್ಯದ ಭಕ್ತರು ಈ ಜಾತ್ರೆಗೆ ಆಗಮಿಸುತ್ತಾರೆ. ಹಾಗಾಗಿ ಹಡಗಲಿ ಕ್ಷೇತ್ರದ ಶಾಸಕರು ಈ ಬಗ್ಗೆ ಜಿಲ್ಲಾಡಳಿತದೊಂದಿಗೆ ಶೀಘ್ರವಾಗಿ ಚರ್ಚಿಸಿ, ಮೈಲಾರಲಿಂಗೇಶ್ವರ ಸ್ವಾಮಿ ಭಕ್ತರ ಭಾವನೆಗಳಿಗೆ ಸ್ಪಂದಿಸಿ ಪಾದಯಾತ್ರಿಗಳಿಗೆ ನೆರವಾಗಬೇಕೆಂದು ಕೊಪ್ಪಳದ ಪಾದಯಾತ್ರಿಗಳು ಮನವಿ ಮಾಡಿದರು.

## ಮುರುಘಾ ಮಠಕ್ಕೆ ಜೈನ ಶ್ರೀ ಭೇಟಿ



ಚಿತ್ರದುರ್ಗ, ಫೆ. 16 - ಜೈನ ಗುರುಗಳಾದ ಥಾಣೆಯ ಸಾದ್ವಿ ಶ್ರೀ ಪ್ರಮೀಳಾ ಕುಮಾರಿಜಿ, ಆಸ್ತಾ ಶ್ರೀಜಿ, ವಿಘ್ನಾ ಪ್ರಭಾಜಿ ನಗರದ ಮುರುಘಾ ಮಠಕ್ಕೆ ಆಗಮಿಸಿ ಡಾ. ಶಿವಮೂರ್ತಿ ಮುರುಘಾ ಶರಣರನ್ನು ಭೇಟಿಯಾಗಿ ಜೈನಧರ್ಮ ಹಾಗು ವಿವಿಧ ಧರ್ಮಗಳ ನಡುವಿನ ಧಾರ್ಮಿಕ ಸಮನ್ವಯತೆ ಮತ್ತು ಪ್ರಸ್ತುತ ಬೆಳವಣಿಗೆ ಕುರಿತು ಚರ್ಚಿಸಿದರು. ಈ ಸಂದರ್ಭದಲ್ಲಿ ತೇರಾಪಂಥ್ ಅಧ್ಯಕ್ಷ ಬಾಬುಲಾಲ್ ಬಾಫ್ನಾ, ವಿನೋದ್ ಬಾಫ್ನಾ, ಲಲಿತ್ ಬಾಫ್ನಾ, ಅರವಿಂದ್ ಬಾಫ್ನಾ, ರಾಜೇಶ್ ಕೊಠಾರಿ ಉಪಸ್ಥಿತರಿದ್ದರು.

# ಭ್ರಾತೃತ್ವ, ಅಹಿಂಸೆ, ಸತ್ಯ ಸಾರಲು ಜನ್ಮತಾಳಿದ ಸಂತ ಸೇವಾಲಾಲ್

## ಹರಪನಹಳ್ಳಿ : ರಾಜ್ಯ ಯುವ ಕಾಂಗ್ರೆಸ್ ಕಾರ್ಯದರ್ಶಿ ಪಿ.ಟಿ.ಭರತ್

ಹರಪನಹಳ್ಳಿ, ಫೆ. 16- ಲೋಕ ಕಲ್ಯಾಣಕ್ಕಾಗಿ ಭ್ರಾತೃತ್ವ, ಅಹಿಂಸೆ ಹಾಗೂ ಸತ್ಯವನ್ನು ಸಾರಲು ಜನ್ಮತಾಳಿದ ಮಹಾನ್ ಸಂತ ಸೇವಾಲಾಲ್ ಎಂದು ರಾಜ್ಯ ಯುವ ಕಾಂಗ್ರೆಸ್ ಕಾರ್ಯದರ್ಶಿ ಪಿ.ಟಿ.ಭರತ್ ಹೇಳಿದರು.

ಪಟ್ಟಣದ ಬಾಣಗೇರಿಯ ಕಾಂಗ್ರೆಸ್ ಕಚೇರಿಯಲ್ಲಿ ತಾಲ್ಲೂಕು ಕಾಂಗ್ರೆಸ್ ಪಕ್ಷದ ವತಿಯಿಂದ ಆಯೋಜಿಸಲಾಗಿದ್ದ ಸಂತ ಶ್ರೀ ಸೇವಾಲಾಲ್ ಮಹಾರಾಜ್ ರವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಬಳಿಕ ಮಾತನಾಡಿದರು.

ತಾಂಡಾಗಳಲ್ಲಿ ವಾಸಿಸುವ ಲಂಬಾಣಿಗರು ತಮ್ಮದೇ ಆದ ಸಾಂಸ್ಕೃತಿಕ ಪರಂಪರೆ ಹೊಂದಿದ್ದಾರೆ. ಆಧುನಿಕತೆಯ ಪ್ರಭಾವದಿಂದ ಭಾರತದ ಅನೇಕ ಬುಡಕಟ್ಟುಗಳು ತಮ್ಮ ಅನನ್ಯತೆ ಕಳೆದುಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಲಂಬಾಣಿ ಬುಡಕಟ್ಟು ತನ್ನ ಅನನ್ಯತೆ ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದೆ ಎಂದರು. ಉತ್ತರ ಭಾರತದ ರಾಜಸ್ಥಾನ



ಮೂಲದ ಬಂಜಾರರು ಯಾವುದೋ ಕಾರಣದಿಂದ ದೇಶದ ಬೇರೆ ಬೇರೆ ಭಾಗಗಳಿಗೆ ಪಸರಿಸಿದ್ದು, ತಮ್ಮದೇ ಆದ ವಿಶಿಷ್ಟ ಸಂಸ್ಕೃತಿ ಹಾಗೂ ಪರಂಪರೆಗಳನ್ನು ಕಾಪಾಡಿಕೊಂಡು ಬಂದಿದ್ದಾರೆ. ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಹಿಂದುಳಿದವರಾಗಿದ್ದರೂ ಸಾಹಿತ್ಯ, ಸಂಸ್ಕೃತಿ, ಕಲೆಗಳಿಗೆ ಬಂಜಾರರಲ್ಲಿ ಬರವಿಲ್ಲ ಎಂದರು.

ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಹೆಚ್.ಬಿ. ಪರಶುರಾಮಪ್ಪ ಮಾತನಾಡಿ, ಬಂಜಾರರು ಸಂತ ಶ್ರೀ ಸೇವಾಲಾಲ್ ಮಹಾರಾಜರ ಹೆಸರಿನಲ್ಲಿ ಮಾಲೆ ಧರಿಸಿಕೊಂಡು ಪಾದಯಾತ್ರೆ ವ್ರತವನ್ನು ಮಾಡುತ್ತಾ ಬಂಜಾರ್ ಭಜನೆ ಗಾಯನದ ಮೂಲಕ ಅನ್ಯಧರ್ಮೀಯ ಬಂಧುಗಳು ತಮ್ಮ ಸಂಸ್ಕೃತಿ, ಅಚಾರ, ವಿಚಾರವನ್ನು ಖುಷಿಯಿಂದ ಹಂಚಿಕೊಳ್ಳುತ್ತಾರೆ ಎಂದರು

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬೇಲೂರು ಅಂಜಿನಪ್ಪ, ಚಿಗಟೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಆರ್. ಪ್ರೇಮ್ ಕುಮಾರ್, ಮುಖಂಡರಾದ ಶಶಿಧರ್ ಪೂಜಾರ್, ಹೆಚ್.ಕೆ. ಹಾಲೇಶ್, ತಿಮ್ಮಾನಾಯ್ಕ, ಪುರಸಭೆ ಸದಸ್ಯರಾದ ಜಾಕೀರ್ ಸರ್ಖಾವಸ್, ಭರತ್, ಗಿಡ್ಡಳ್ಳಿ ನಾಗರಾಜ್, ಕುಲುಮಿ ಅಬ್ದುಲ್, ಖುರ್ಷಿದ್ ಅಹಮದ್, ರಿಯಾಜ್ ಅಹ್ಮದ್, ಯುವ ಮುಖಂಡ ಟಿ. ಪ್ರವೀಣ್ ಕುಮಾರ್, ಟಿ. ಯರ್ರಿಸ್ವಾಮಿ, ಮಾಂತೇಶ್ ನಾಯ್ಕ, ಆರ್. ಮಂಜುನಾಥ್, ರಂಜಿತ್ ಪೂಜಾರ್ ಸೇರಿದಂತೆ, ಇತರರು ಇದ್ದರು.

# ನಾಳೆ ಜೆ.ಎಂ. ಇಮಾಮ್ ಟ್ರಸ್ಟ್ ವತಿಯಿಂದ ಪ್ರಶಸ್ತಿ ಪ್ರದಾನ

ಜಗಳೂರು.ಫೆ.16- ಜೆ.ಎಂ.ಇಮಾಮ್ ಟ್ರಸ್ಟ್ ವತಿಯಿಂದ ನಾಡಿದ್ದು ದಿನಾಂಕ 18 ರ ಶುಕ್ರವಾರ, ಮಹಮದ್ ಇಮಾಮ್ ಸ್ಮರಣಾರ್ಥವಾಗಿ ವಿವಿಧ ಸಾಧಕರಿಗೆ ಸನ್ಮಾನ ಹಾಗೂ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಲಹಾ ಸಮಿತಿ ಅಧ್ಯಕ್ಷ ಎಸ್. ಹಾಲಪ್ಪ ತಿಳಿಸಿದ್ದಾರೆ.

ಪಟ್ಟಣದ ಪತ್ರಿಕಾ ಭವನದಲ್ಲಿ ಜೆ.ಎಂ. ಇಮಾಮ್ ಟ್ರಸ್ಟ್ ವತಿಯಿಂದ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ಪ್ರತೀ ವರ್ಷದಂತೆ ಈ ಬಾರಿಯೂ ಕೂಡ ಜಗಳೂರಿನ, ಆದರ್ಶ ರಾಜಕಾರಣಿ ಮೈಸೂರು ಅರಸರ ಆಡಳಿತಾವಧಿಯಲ್ಲಿ ದಿವಾನರಾಗಿ, ಸಮರ್ಥ ಆಡಳಿತಗಾರರಾಗಿ ದೇಶದ ಉದ್ದಗಲಕ್ಕೂ ತನ್ನದೆಯಾದ ಛಾಪು ಮೂಡಿಸಿದ ಸಮರ್ಥ ನಾಯಕ ಜಗಳೂರಿನ ಮಹಮದ್ ಇಮಾಮ್ ರವರ ಸವಿ ನೆನಪಿಗಾಗಿ ರಾಜ್ಯಮಟ್ಟದ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಸಾಧಕರನ್ನು ಗುರುತಿಸಿ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಏರ್ಪಡಿಸಲಾಗಿದೆ.

ನಾಡಿದ್ದು ದಿನಾಂಕ 18 ರಂದು 11 ಗಂಟೆಗೆ ಇಮಾಮ್ ಸ್ಮಾರಕ ಶಾಲಾಂಗಳದಲ್ಲಿ ಶುಕ್ರವಾರ ಕಾರ್ಯಕ್ರಮ ಜರುಗಲಿದೆ. ಸಮಾರಂಭದ ಉದ್ಘಾಟನೆಯನ್ನು ಕೇಂದ್ರ ಸಾಹಿತ್ಯ ಆಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಡಾ. ಕುಂ.ವೀರಭದ್ರಪ್ಪ ನೆರವೇರಿಸುವರು, ಇಮ್ಮಣ್ಣನವರ ಕುರಿತು ಕಿರು ಪರಿಚಯ ಮಾಡಿಕೊಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕ ಎಸ್ ವಿ ರಾಮಚಂದ್ರಪ್ಪ, ಮಾಜಿ ಶಾಸಕ ಎಚ್. ಪಿ.ರಾಜೇಶ್, ಪ.ಪಂ ಅಧ್ಯಕ್ಷ ಎಸ್ ಸಿದ್ದಪ್ಪ ಭಾಗವಹಿಸುವರು.

ಪ್ರಶಸ್ತಿಗೆ ಭಾಜನರಾಗಿರುವ ಡಾ. ಕುಂ. ವೀರಭದ್ರಪ್ಪ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತರು, ಸಮಾಜ ಸೇವಾ ಕ್ಷೇತ್ರದಲ್ಲಿ ಅತ್ಯಂತ ಗಣನೀಯ ಸೇವೆ ಸಲ್ಲಿಸಿದ ರಾಜ್ಯ ಪ್ರಸಸ್ತಿ ಪುರಸ್ಕೃತೆ ಸೂಲಗಿತ್ತಿ ಸುಲ್ತಾನ್ ಬಿ ಹಾಗೂ ನಿವೃತ್ತ ಪ್ರಾಂಶುಪಾಲರಾದ ಎಂ ಬಸಪ್ಪ ಹಿರಿಯ ಸಾಹಿತಿಗಳಾದ ಎನ್ ಟಿ ಯರ್ರಿಸ್ವಾಮಿ , ಸಾಹಿತಿಗಳು ಬಸವೇಶ್ ಸಿ.ಎಂ.ಹೊಳೆ, ಗಣಪತಿ ವಿದ್ಯಾಸಂಸ್ಥೆ ಸ್ಥಾಪಕರಾದ ಕೆ ರವಿಕುಮಾರ್, ರಂಗಕರ್ಮಿ ಅಬ್ದುಲ್ ಪಿ ರವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಇಮಾಮ್ ಟ್ರಸ್ಟ್ ಅಧ್ಯಕ್ಷ ಜೆ.ಕೆ ಹುಸೇನ್ ಮಿಯಾ ಸಾಬ್, ಡಿ.ಸಿ ಮಲ್ಲಿಕಾರ್ಜುನ್, ಕಸಾಪ ಅಧ್ಯಕ್ಷರು ಸೇರಿದಂತೆ ವಿವಿಧ ಗಣ್ಯಮಾನ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಗೋಷ್ಠಿಯಲ್ಲಿ ಮುಖ್ಯ ಶಿಕ್ಷಕ ಜೆ ಆರ್ ಶಂಕರ್, ಮೇಲ್ವಿಚಾರಕ ನಾಗರಾಜ್, ಆಲ್ ಫಾತಿಮ್ ಸಂಘದ ಸಂಚಾಲಕಿ ಶಾಹಿನ್ ಬೇಗಂ ಹಾಜರಿದ್ದರು.

# ಮೆಟ್ರಿಕ್ : ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ದಾವಣಗೆರೆ, ಫೆ.16- ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ಹಾಗೂ ಪ್ರವರ್ಗ-1 ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳಿಗೆ ನೀಡಲಾಗುವ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸುವ ಅವಧಿಯನ್ನು ಇದೇ ದಿನಾಂಕ 28 ರವರೆಗೆ ವಿಸ್ತರಿಸಲಾಗಿದೆ ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ತಿಳಿಸಿದ್ದಾರೆ.

# ಕಣವಿ ನಿಧನಕ್ಕೆ ಮುರುಘಾ ಶರಣರ ಸಂತಾಪ

ಚಿತ್ರದುರ್ಗ, ಫೆ. 16- ಕನ್ನಡ ಸಾರಸ್ವತ ಲೋಕದ ಹಿರಿಯ ಸಾಹಿತಿ, ಡಾ. ಚೆನ್ನವೀರ ಕಣವಿ ನಿಧನಕ್ಕೆ ಡಾ. ಶಿವಮೂರ್ತಿ ಮುರುಘಾ ಶರಣರು ಸಂತಾಪ ವ್ಯಕ್ತಪಡಿಸಿದ್ದಾರೆ. ಕನ್ನಡದ ಸಮನ್ವಯದ ಕವಿ ಎಂದೇ ಪ್ರಸಿದ್ಧರಾಗಿದ್ದ ಕಣವಿಯವರು, ಏಳು ದಶಕಗಳಿಂದ ಸಾಹಿತ್ಯ ಲೋಕದಲ್ಲಿ ಅಪಾರ ಸೇವೆಯನ್ನು ಸಲ್ಲಿಸಿದ್ದಾರೆ. ಅವರ ಹೃದಯ ವೈಶಾಲ್ಯತೆ ಮತ್ತು ಅನನ್ಯವಾದ ಪ್ರತಿಭೆ ಎಂಥವರನ್ನು ಆಕರ್ಷಿಸುತ್ತಿತ್ತು ಎಂದು ಶರಣರು ಸ್ಮರಿಸಿದ್ದಾರೆ.


**ಮಾರಾಟಕ್ಕೆ/ಖರೀದಿಗೆ ವಿಚಾರಿಸಿರಿ**
ಬಸವೇಶ್ವರ ಲೇಔಟ್ 40 ಅಡಿ ರಸ್ತೆ, ಪೂರ್ವಕ್ಕೆ 30x50 ಸೈಟ್, 30x40 ಉತ್ತರ 30x40 3 ಸೈಟ್ ಪೂರ್ವಕ್ಕೆ
ಸುರೇಶ್ 95911 60520

**ಸೈಟ್‌ಗಳು ಮಾರಾಟಕ್ಕಿವೆ**
ಶಿವಕುಮಾರಸ್ವಾಮಿ ಬಡಾವಣೆ, ಸೆಂಟ್ ಜಾನ್ಸ್ ಸ್ಕೂಲ್ ಹತ್ತಿರ ಉತ್ತರ 30x40, ಬಸವೇಶ್ವರ ಬಡಾವಣೆ ದೊಡ್ಡ ಪಾರ್ಕ್ ಎದುರು ದಕ್ಷಿಣ 30x50, ಮಹಾಲಕ್ಷ್ಮಿ ಲೇಔಟ್ (ಡಬಲ್ ರೋಡ್ ಹತ್ತಿರ) ಉತ್ತರ 40x60, ದಕ್ಷಿಣ 40x60
ಐಗೂರು ವಿಜಯಕುಮಾರ 99457 02495

**ಮನೆ ಬಾಡಿಗೆಗೆ ಇದೆ**
ಸರಸ್ವತಿ ನಗರದಲ್ಲಿ 30x50 ಅಳತೆಯ ದಕ್ಷಿಣ ದಿಕ್ಕಿನ ಇಂಡಿಪೆಂಡೆಂಟ್ ಮನೆ ಬಾಡಿಗೆಗೆ ಇದೆ.
98804 40602

**ತಕ್ಷಣ ಬೇಕಾಗಿದ್ದಾರೆ**
ಹಾಸ್ಟೆಲ್‌ನಲ್ಲಿ ಕೆಲಸ ಮಾಡಲು ಅನುಭವವಿರುವ ಇಬ್ಬರು ಮಹಿಳಾ ಹೆಲ್ಪರ್ ಬೇಕಾಗಿದ್ದಾರೆ.
98457 75768
88846 75884

**ರೂಮ್ಸ್ ಬಾಡಿಗೆಗೆ ಇವೆ**
ದಾವಣಗೆರೆ ನಗರದ ಎಂಸಿಸಿ 'ಬಿ' ಬ್ಲಾಕ್‌ನಲ್ಲಿ ಪ್ರತ್ಯೇಕ ಅಟ್ಯಾಚ್ ಬಾತ್ ರೂಂವುಳ್ಳ ಮೂರು ರೂಂಗಳು ಬಾಡಿಗೆಗೆ ಇವೆ. (Only For Ladies) ಸಂಪರ್ಕಿಸಿ
97427 67274, 93538 97342

**ಮನೆಗಳು ಮಾರಾಟಕ್ಕಿವೆ**
ಎಸ್.ಎಸ್. ಲೇಔಟ್, ಬಸವೇಶ್ವರ ಲೇಔಟ್, ಸಿದ್ದವೀರಪ್ಪ ಬಡಾವಣೆ, ವಿದ್ಯಾನಗರ.
ಮೊ. 97425-12125

**ಬೇಕಾಗಿದ್ದಾರೆ**
ನಗರದ ಪ್ಯಾಕೇಜ್ಡ್ ಡ್ರಿಂಕಿಂಗ್ ವಾಟರ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು SSLC/PUC ಫೇಲಾದ ಯುವಕರು, ಬ್ಯಾಡ್ಜ್ ಹಾಗೂ ಲೈಸೆನ್ಸ್ ಹೊಂದಿರುವವರು ಡ್ರೈವರ್ ಕೆಲಸಕ್ಕೆ ಬೇಕಾಗಿದ್ದಾರೆ. ಆಸಕ್ತರು ಖುದ್ದಾಗಿ ಸಂಪರ್ಕಿಸಿ
ಪ್ರತೀಕ್ ಎಂಟರ್ ಪ್ರೈಸಸ್
ನಾಗನೂರು- ಶಾಮನೂರು ರಸ್ತೆ, ಶಾಮನೂರು, ದಾವಣಗೆರೆ. ಮೊ : 9448110287

**WANTED**
Boys required for data entry and billing section at Food Mart Supermarket. Experience candidates will have preference.
Quli: Any Degree
Mob: 98864 63531

**TUITION**
(State and CBSE)
Classes : 8th 9th and 10th
Address: # 1315/1, 2nd Main, 7th Cross, K.T.J Nagar, Davanagere-2
74063 64767

**ಮನೆ ಬಾಡಿಗೆಗೆ ಇದೆ**
ಒಂದನೇ ಮಹಡಿಯಲ್ಲಿ 2BHK ಯ ಉತ್ತಮ ನೀರು, ಗ್ಯಾಸ್ ಗೀಸರ್ ಕನೆಕ್ಷನ್, ಇಟಾಲಿಯನ್ ಕಿಚನ್‌ವುಳ್ಳ ಮನೆ #118/1ಸಿ, 34 & 39, ಎಂ.ಸಿ. ಕಾಂಪ್ಲೆಕ್ಸ್, ಬಿ.ಟಿ. ಲೇಔಟ್‌ನಲ್ಲಿ ವಾಸದ ಮನೆ ಉಪಯೋಗಕ್ಕೆ ಬಾಡಿಗೆಗೆ ದೊರೆಯುತ್ತದೆ.
ನಾಗರಾಜ್ ಮೊ: 98454 72073
ಮಲ್ಲೇಶ್ ಮೊ: 78927 89804

**ಜೀವನ ಪರ್ಯಂತ ಪೆನ್ಷನ್**
LIC, IPO, ಖರೀದಿ ಮಾಹಿತಿ ಮ್ಯುಚ್ಯುವಲ್ ಫಂಡ್ ಪಾಲಿಸಿ, ಮಕ್ಕಳ ಮದುವೆ, ವಿದ್ಯಾಭ್ಯಾಸ, ಗೃಹ ನಿರ್ಮಾಣ, ಹಳೆಯ ಪಾಲಿಸಿಗಳ ಹಾಗು ವಾಹನಗಳ ವಿಮೆಯ ಮಾಹಿತಿಗಾಗಿ
86602 35013

**ಬೋರ್‌ವೆಲ್ ಪಾಯಿಂಟ್**
ವೈಜ್ಞಾನಿಕ ವಿಧಾನದಿಂದ 1000 ಅಡಿವರೆಗೆ.
ಸಂಪರ್ಕಿಸಿ: ಬಸವರಾಜಪ್ಪ ಎಂ.ಟಿ.
ಜಲ ಪರಿಶೋಧಕರು
94492 02888

**Require Center Head Immediately**
A lady with good hold on English language & communication skills is required for an upcoming Pre school in Davangere. Person with experience will be given preference.
Contact 87921 29327 for details.

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮನೆ ಬಾಡಿಗೆಗೆ ಇದೆ**
ದೇವರಾಜ ಅರಸ್ ಬಡಾವಣೆ 'ಎ' ಬ್ಲಾಕ್, 3ನೇ ಕ್ರಾಸ್ ಕೋರ್ಟ್ ಹಿಂಭಾಗ, ಮನೆ ಬಾಡಿಗೆಗೆ ಇದೆ.
(ಸಸ್ಯಹಾರಿಗಳಿಗೆ ಮಾತ್ರ)
99459 99381
74111 56285

**ಬೇಕಾಗಿದ್ದಾರೆ**
35 ವರ್ಷದ ಒಳಗಿನ ದವಸ ಧಾನ್ಯಗಳನ್ನು ಶುಚಿಗೊಳಿಸಲು ಮತ್ತು ಮನೆ ಕೆಲಸಕ್ಕೆ ಹೆಣ್ಣುಮಕ್ಕಳು ಬೇಕಾಗಿದ್ದಾರೆ. ಸಮಯ : ಬೆಳಿಗ್ಗೆ 9 ರಿಂದ ಸಂಜೆ 6 ಸಂಬಳ 5 ಸಾವಿರ/- ರೂ
ಸ್ವಾದ್ ಹೈಪರ್ ಮಾರ್ಟ್
ಪಿ.ಜೆ. ಎಕ್ಸ್‌ಟೆನ್ಷನ್ 4ನೇ ಮೇನ್ ರೋಡ್, ದಾವಣಗೆರೆ.
72597 71185, 97401 42758
ಭೇಟಿ ಸಮಯ ಮಧ್ಯಾಹ್ನ 3 ರಿಂದ ಸಂಜೆ 6ರವರೆಗೆ

**ಬೇಕಾಗಿದ್ದಾರೆ**
ಮಹಿಳಾ ಜವಾನರು ಬೇಕಾಗಿದ್ದಾರೆ. ಆಯ್ಕೆಯಾದ ಅಭ್ಯರ್ಥಿಯ ಮಗುವಿಗೆ ಉಚಿತ ಶಿಕ್ಷಣ ಹಾಗೂ ಆಕರ್ಷಕ ವೇತನ ನೀಡಲಾಗುವುದು. ಸಂಪರ್ಕಿಸಿ :
ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆ
ಕೊಂಡಜ್ಜಿ ರಸ್ತೆ, ಹೊಸ ಆರ್‌ಟಿಓ ಕಛೇರಿ ಹಿಂಭಾಗ, ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್, ದಾವಣಗೆರೆ.
ಮೊ.99640 17729

**SHOPS FOR RENT**
(With Wash Room Facility)
N.R. ROAD, DAVANGERE.
94483 69523

**ತುರ್ತಾಗಿ ಬೇಕಾಗಿದ್ದಾರೆ**
ಪರ್ವ ಮಿಲೆಟ್ ಹೆಲ್ತ್ ಮಿಕ್ಸ್ ಸೆಂಟರ್ ಎಂಬ ಕಂಪನಿಗೆ ದಾವಣಗೆರೆ ಹಾಗೂ ಹಾವೇರಿ ಜಿಲ್ಲೆ, ಸಿಟಿ, ತಾಲ್ಲೂಕಿನಾದ್ಯಂತ ಡಿಸ್ಟ್ರಿಬ್ಯೂಟರ್ ಬೇಕಾಗಿದ್ದಾರೆ.
84314 81240

**ಮನೆ ಬಾಡಿಗೆಗೆ ಇದೆ**
2BHK ಮೊದಲನೆ ಮಹಡಿ, ಬೋರ್‌ವೆಲ್ ವ್ಯವಸ್ಥೆ ಹಾಗೂ ಕಾರ್ಪೊರೇಶನ್ ನೀರಿನ ವ್ಯವಸ್ಥೆಯಿರುತ್ತದೆ. ಶಿವಕುಮಾರ್ ಸ್ವಾಮಿ ಬಡಾವಣೆ ಮೊದಲನೆ ಹಂತ, 6 ನೇ ಮೇನ್ 2 ನೇ ಕ್ರಾಸ್ ದಾವಣಗೆರೆ.
73493 72914 , 74062 93090

**WANTED**
Banking Sector tele caller(Female Only)
Qualification - Any Degree
No.2257/5 2nd Floor, M.C.C 'A' Black Beside Togataveera Kalyana Manatapa
9663072555
Interview time : 11 AM

**ತಕ್ಷಣ ಬೇಕಾಗಿದ್ದಾರೆ**
SS ಆಸ್ಪತ್ರೆ, ಬಾಪೂಜಿ ಆಸ್ಪತ್ರೆ ಹಾಗೂ ದಾವಣಗೆರೆ ಸುತ್ತಮುತ್ತಲು 8 ಗಂಟೆ ಹಾಗೂ 12 ಗಂಟೆ ಕೆಲಸ ಮಾಡಲು ಲೇಡಿಸ್/ಜೆಂಟ್ಸ್ ಸೆಕ್ಯೂರಿಟಿ ಗಾರ್ಡ್ಸ್ ತಕ್ಷಣ ಬೇಕಾಗಿದ್ದಾರೆ. ESI-PF ಸೌಲಭ್ಯ ಇರುತ್ತದೆ.
ಅಸೋಸಿಯೇಟೆಡ್ ಎಂಟರ್ ಪ್ರೈಸಸ್, ದಾವಣಗೆರೆ.
7019948769, 9739089022, 90605 45500

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗ /ಹುಡುಗಿಯರು ಬೇಕಾಗಿದ್ದಾರೆ.
ಐ.ಡಿ. ವೀರಣ್ಣ ಪೆಟ್ರೋಲ್ ಬಂಕ್, ದೊಡ್ಡಬಾತಿ
70906 49340
98443 83522

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,450/-Sqft)
ಹುಲ್ಲುಮನೆ ಪ್ರಾಪರ್ಟೀಸ್ & ಪವರ್ ಲಿಮಿಟೆಡ್
95135 03000
97392 15000

**ಶ್ರೀ ಸಾಯಿ ಮರದ ಗಾಣದ ಶುದ್ಧ ಶೇಂಗಾ ಎಣ್ಣೆ**
Cold Pressed 100% Organic Groundnut Oil
# 327, Beside Goshala, P.B. Road, Avaragere, Davangere. Contact :
63620 54750

**REQUIRED**
A LIBERTY SHOWROOM requires SALES EXECUTIVE
Qualification - PUC / Degree
Address - Liberty Showroom Opp.SS Mall, Shamnur Road, Davanagere
76761 54314

**ಬೇಕಾಗಿದ್ದಾರೆ**
ಕೋ ಆಪರೇಟಿವ್ ಸೊಸೈಟಿಯಲ್ಲಿ ಕೆಲಸಗಾರರು ಬೇಕಾಗಿದ್ದಾರೆ. ಕ್ಲರ್ಕ್- Female, ಅಟೆಂಡರ್-Male and Female, ಪಿಗ್ಮಿ ಕಲೆಕ್ಷನ್ - -Male and Female
ಪ್ರೈವೇಟ್ ಬಸ್ ಸ್ಟ್ಯಾಂಡ್, ಶಾಪ್ ನಂ. 88
88614 38237

**ಬೇಕಾಗಿದ್ದಾರೆ**
ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
Qualification-ITI
L.V. Hose maker & spares
KSRTC ಬಸ್‌ಸ್ಟ್ಯಾಂಡ್ ಹತ್ತಿರ, ದಾವಣಗೆರೆ.
ಫೋ. : 81519 44441

**ತಕ್ಷಣ ಬೇಕಾಗಿದ್ದಾರೆ**
ಕೊರಿಯರ್ ಆಫೀಸ್ ನಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಜ್ಞಾನವುಳ್ಳ, ಇಂಗ್ಲೀಷ್ ಓದಲು, ಬರೆಯಲು ಬರುವಂತಹ ಹುಡುಗಿಯರು ಹಾಗೂ ಕೊರಿಯರ್ ಪಾರ್ಸಲ್ ಡೆಲಿವರಿ ಮಾಡಲು ಹುಡುಗರು ಬೇಕಾಗಿದ್ದಾರೆ. ದ್ವಿಚಕ್ರ ವಾಹನ (Two Wheeler Bike) ಇರಬೇಕು. ಪೆಟ್ರೋಲ್ ಭತ್ಯೆ ಕೊಡಲಾಗುವುದು ಸಂಪರ್ಕಿಸಿ
94807 95548, 98800 42597
Whatsaap No. 70199 83025

**JOBS**
Sales Manager/Executives
Any Degree (English, Computer Knowledge)
Office Job/Marketing/ Field Work, Male/Female
Freshers/Experienced
98444 92888

**ಉತ್ತಮ ಗುಣಮಟ್ಟದ ಅಡಿಕೆ ಗೋಟು ಮತ್ತು ಅಡಿಕೆ ಮೊಳಕೆ ಬೀಜಗಳು ದೊರೆಯುತ್ತವೆ**
5 ಕೆಜಿ ಪ್ಯಾಕೆಟ್ ಸಸಿಗಳು ಲಭ್ಯ
ದರ - 100 ರಿಂದ 150 ರೂಪಾಯಿ
ಸ್ಥಳ : ಹೆಚ್. ಕಲಪನಹಳ್ಳಿ.
99456 43545, 99015 58855

**ಅಕ್ವಶೈನ್ RO ವಾಟರ್ ಪ್ಯೂರಿಫೈಯರ್**
ನಮ್ಮಲ್ಲಿ ಎಲ್ಲಾ ಕಂಪನಿಯ ವಾಟರ್ ಪ್ಯೂರಿಫೈಯರ್ ಸೇಲ್ಸ್ ಮತ್ತು ಸರ್ವೀಸ್ ಮಾಡಲಾಗುತ್ತದೆ. ಹೋಲ್‌ಸೇಲ್ ದರದಲ್ಲಿ ಎಲ್ಲಾ ಬಿಡಿಭಾಗಗಳು ಲಭ್ಯವಿರುತ್ತವೆ.
ಫೋ. : 99807 27767

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಬೇಕಾಗಿದ್ದಾರೆ**
ವಿಜಯ ಮಿತ್ರ ಎಜುಕೇಷನಲ್ ಅಕಾಡೆಮಿಯಲ್ಲಿ ಕೆಲಸ ನಿರ್ವಹಿಸಲು
ಬ್ರಾಂಚ್ ಹೆಡ್ - any graduation ಮಹಿಳೆ
ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್- ಯಾವುದೇ ಪದವಿ
ನೇರವಾಗಿ ಸಂಪರ್ಕಿಸಿ:
ವಿಜಯ ಮಿತ್ರ ಎಜ್ಯುಕೇಷನಲ್ ಅಕಾಡೆಮಿ
#296/2-B, 2-C ಫಸ್ಟ್ ಫ್ಲೋರ್ ಡಾ. ಗುರುಪಾದಪ್ಪ ಮನೆ ಪಕ್ಕ, ಕಾಲೇಜು ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
Mob: 95139 15520

**ಡ್ರೈವರ್ ಬೇಕಾಗಿದ್ದಾರೆ**
ಅನುಭವವುಳ್ಳ ಕಾರ್ ಡ್ರೈವರ್ ಬೇಕಾಗಿದ್ದಾರೆ. ಆಕರ್ಷಕ ಸಂಬಳ, ಊಟ ಹಾಗೂ ವಸತಿ ನೀಡಲಾಗುವುದು.
ಬ್ಯಾಡ್ಜ್ ಉಳ್ಳವರು ಸಂಪರ್ಕಿಸಿ :
94489 80070
78991 90070

**GST Registration, INCOME TAX , CASES, Audit and for Accounts Maintenances**
Contact
MEGHANA ASSOCIATES (R)
99809 16126

**ಬೇಕಾಗಿದ್ದಾರೆ**
ಫ್ಲೋವ್‌ಮ್ಯಾನ್ ಟ್ರ್ಯಾಕ್ಟರ್ಸ್ (ವಿ.ಎಸ್.ಟಿ. ಶಕ್ತಿ) ಲೋಕಿಕೆರೆ ರಸ್ತೆ, ಚೌಡಮ್ಮ ದೇವಸ್ಥಾನದ ಹತ್ತಿರ ಇಂಡಸ್ಟ್ರಿಯಲ್ ಏರಿಯಾ ದಾವಣಗೆರೆ. ನುರಿತ ಐಟಿಐ ಆಗಿರುವ ಮತ್ತು ಕಂಪ್ಯೂಟರ್ ಆಪರೇಟರ್ ಟ್ಯಾಲಿ, ಡಿಟಿಪಿ ಅನುಭವವುಳ್ಳವರು ಬೇಕಾಗಿದ್ದಾರೆ.
(ಪುರುಷರು ಮಾತ್ರ)
78999 12347, 93410 12025

**ಜಂಗಮ ವಧು ಬೇಕಾಗಿದೆ**
ಜಂಗಮ 25 ವರ್ಷದ, BE ಬೆಂಗಳೂರಿನಲ್ಲಿ ಕೆಲಸದಲ್ಲಿರುವ ಬಡಕುಟುಂಬದ ವರನಿಗೆ, ವಿಶಾಲ ಭಾವನೆಗಳುಳ್ಳ, ಮನೆ ಅಳಿಯ ಮಾಡಿಕೊಳ್ಳುವ ಕುಟುಂಬದ ವಧು ಬೇಕಾಗಿದೆ.
98807 29108

**ಮಿಯಾಖಾನ್**
ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್ , ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ. ದಾವಣಗೆರೆ
ಮೊ : 81339 33804

**ಮರು-ಮದುವೆ**
ಲಿಂಗಾಯತ 38 ವರ್ಷದ MBA ಹೊರ ದೇಶದಲ್ಲಿ ಕೆಲಸದಲ್ಲಿರುವ ಒಳ್ಳೆಯ ಮನೆತನದ, ವಿಚ್ಛೇದಿತನಿಗೆ ಸೂಕ್ತ ವಿಧವೆ, ವಿಚ್ಛೇದಿತ ವಧು ಬೇಕಾಗಿದೆ.
98807 29108

**ಬೇಕಾಗಿದ್ದಾರೆ**
ಡಾಬಾದಲ್ಲಿ ಅಡುಗೆ ಕೆಲಸ ಮಾಡುವವರು, ಕ್ಲೀನರ್, ಸಪ್ಲೈಯರ್, ಆರ್ಡರ್ ತೆಗೆದುಕೊಳ್ಳುವವರು, ಸೆಕ್ಯೂರಿಟಿ ಗಾರ್ಡ್ಸ್ ಮತ್ತು ಮಹಿಳೆಯರು ಬೇಕಾಗಿದ್ದಾರೆ.
78928 68866, 85490 62143

**G-Shop**
Sales representative
Qualification - PUC or Any degree
Salary : 10,000=00
Contact No.
Nidhi - 9620086824 ,
Akshata - 9071291672
Residential should be Davanagere and Harihar City

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**SBI Life Insurance**
ಕಂಪನಿಯು ಇನ್ಶೂರೆನ್ಸ್ ಪ್ರತಿನಿಧಿಗಳ ಕೆಲಸಕ್ಕೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದೆ.
ವಿದ್ಯಾರ್ಹತೆ: SSLC ಉತ್ತೀರ್ಣ, ವಯಸ್ಸು: 18 ವರ್ಷ ತುಂಬಿರ ಬೇಕು. ಸೌಲಭ್ಯ: ಆಕರ್ಷಕ ಕಮೀಷನ್, ವೇತನ, ವಿದೇಶ ಪ್ರವಾಸ, ಮಾಸಿಕ 10 ಸಾವಿರ ರೂ ಪೆನ್ಷನ್
ಸಂಪರ್ಕಿಸಿ: Ravikumar M.G.
Agency Manager, SBI Life Insurence, DVG Branch
95358 10209

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಸಂಘ-ಸಂಸ್ಥೆಗಳ ಬೈಲಾ ನೋಂದಣಿ, ನವೀಕರಣ, ಮತ್ತು ಆಡಿಟ್‌ಗಾಗಿ ಸಂಪರ್ಕಿಸಿ**
MEGHANA ASSOCIATES (R)
99809 16126

**ಶ್ರೀ ಮುರುಘನ್ ಬೋರ್‌ವೆಲ್ಸ್**
ನಮ್ಮಲ್ಲಿ ಸೂಪರ್ ಫಾಸ್ಟ್ 4.5' ಇಂಚು ಬೋರ್‌ವೆಲ್ ಕೊರೆಯಲಾಗುವುದು. ಮನೆಯ ಒಳಗಡೆ ಮತ್ತು ಹೊರಗಡೆ 300-450 ಅಡಿಯವರೆಗೆ ಕೊರೆಯಲಾಗುವುದು.
99640 78484, 95906 15776

**PRINCE CORRESPONDENCE COLLEGE**
* ನೇರವಾಗಿ ದ್ವಿತೀಯ ಪಿಯುಸಿಗೆ ಪ್ರವೇಶ ಪಡೆಯಬಹುದು (NIOS)
* Arts, Commerce, Science
* B.A., B.Com., B.Sc., BBM.,
* M.A., M.Com., M.Sc., (all sub)
* Diploma, B.E. MBA., MCA., & All Courses
77609 55550, 96200 28627

## ಚಿಮ್ಮುವ ಬೆಳಕು

ಗದಗ-ಹೊಂಬಳದ ಚೆನ್ನವೀರ ಕಣವಿ
ಕನ್ನಡ ಸಮನ್ವಯತೆಯ ಮಹಾಕವಿ
ನವೋದಯದ ಕಿರಣವು ಹೊಂಬೆಳಕಲ್ಲಿ
ಕಾವ್ಯ ಮಾಲೆಯ ಮಿಂಚದು ಚೆಂಬೆಳಕಲ್ಲಿ.

ಸಂಕರಪ್ಪ-ಪಾರ್ವತವ್ವರ ಕುಲದೀಪಕರು
ಶಿಸ್ತು, ಸಂಯಮದಲ್ಲಿ ಬೆಳೆದ ಸುಪುತ್ರರು
ಬಾಲ್ಯದಲ್ಲೇ ಬರವಣಿಗೆಯ ಸೃಷ್ಟಿ ಸೊಬಗು
ಮನವು ತುಂಬಿದ ಭಾವ ಜೀವಿಯ ಬೆರಗು.

ಹಲವಾರು ಸುನೀತಿಯ ಸರದಾರರಿವರು
ಸಾಮಾಜಿಕ ನೆಲೆಗಟ್ಟದು ಆಕಾಶ ಬುಟ್ಟಿಯೊಳು
ವಿದ್ವಾಂಸ, ವಿಡಂಬನೆಯ ಕಾರ್ಯಕರ್ತರು
ವಿಶ್ವ ಭಾರತಿಗೆ ಕನ್ನಡದಾರತಿ ಎಂದವರು.

ಮನಮುಟ್ಟುವ ಮಧುರ ಭಾವಗೀತೆಯಲಿ
ಒಂದು ಮುಂಜಾವಿನಲಿ.. ಸೋನೆ ಮಳೆ
ಮರೆಯಲಾದೀತೇ ಭಾವನೆಯದು ಬಲೆಯಲ್ಲಿ
ಗುಡಿ ಗೋಪುರಕೆ ಹೊಂಬೆಳಕಿನ ಕನ್ನಡವಿಲ್ಲಿ.

ಹೆಸರಾಯಿತು ಕರ್ನಾಟಕ- ಉಸಿರಾಗಲಿ ಕನ್ನಡ
ಹಸಿಗೋಡೆಯ ಹರಳಿನಂತೆ ಹುಸಿಹೋಗದ ಕನ್ನಡ
ವಿಶ್ವ ವಿನೂತನ ವಿದ್ಯಾಚೇತನ.. ಸಂಸ್ಕಾರಿ
ಪ್ರಶಾಂತ, ಸೌಮ್ಯ ನುಡಿಯ ಸಜ್ಜನ ಚೆನ್ನಾರಿ..

- ವೀಣಾ ಕೃಷ್ಣಮೂರ್ತಿ, ದಾವಣಗೆರೆ.

## ಕಣವಿ ನಿಧನ : ನಗರದಲ್ಲಿ ಇಂದು ಕಸಾಪ ಶ್ರದ್ಧಾಂಜಲಿ

ನಾಡಿನ ಹಿರಿಯ ಕವಿ ಚನ್ನವೀರ ಕಣವಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸುವ ಕಾರ್ಯಕ್ರಮವು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಇಂದು ಸಂಜೆ 5.30ಕ್ಕೆ ಕುವೆಂಪು ಕನ್ನಡ ಭವನದಲ್ಲಿ ನಡೆಯಲಿದೆ. ಜಿಲ್ಲಾ ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ.

## ನಾಡಿನ 'ಕವಿತೆಯ ಕಣಜ' ಚನ್ನವೀರ ಕಣವಿ

### ತರಳಬಾಳು ಶ್ರೀ

ಸಿರಿಗೆರೆ, ಫೆ.16- ಭಾವಜೀವಿ, ಸಮನ್ವಯ ಕವಿ, ಸೌಜನ್ಯದ ಕವಿ ಎಂದೇ ಹೆಸರಾದ ಚೆನ್ನವೀರ ಕಣವಿಯವರು ಸೃಜನ ಶೀಲ ಕವಿ. ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ರಂಗಗಳ ಸೇವೆಯ ಬಗ್ಗೆ ಗೌರವ ಹೊಂದಿದ್ದ ನಮ್ಮ ನಡುವಿನ ಅಪರೂಪದ ಬಹುಶ್ರುತ ವಿದ್ವಾಂಸರು ಎಂದು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಗುಣಗಾನ ಮಾಡಿದರು.

ಉತ್ತರ ಕರ್ನಾಟಕ ಭಾಷೆಯಲ್ಲೇ ಕವಿತೆ ಕಟ್ಟುವ ಬಗೆ ಅವರ ಸಾಹಿತ್ಯ ಕೃಷಿಯ ವಿಶೇಷವಾಗಿರುತ್ತಿತ್ತು. ಕಿಶೋರಾವಸ್ಥೆಯಲ್ಲಿಯೇ ಸೃಷ್ಟಿಯ ಸೊಬಗು ಎಂಬ ಕವನ ರಚನೆಯಿಂದ ಕಾವ್ಯಕಾಯಕ ಆರಂಭ ಮಾಡಿದ ಅವರು, ಮಧುರ ಚೆನ್ನ, ದ.ರಾ.ಬೇಂದ್ರೆ, ಕುವೆಂಪುರ ವರಿಂದ ಪ್ರಭಾವಿತರಾಗಿದ್ದರು, ತರಳಬಾಳು ಮಠದ ಸಾಹಿತ್ಯಿಕ ಚಟುವಟಿಕೆಗಳೊಂದಿಗೆ ಅವರದು ಅನನ್ಯ ಸಂಬಂಧ. ಅನೇಕ ತರಳಬಾಳು ಹುಣ್ಣಿಮೆಗಳಲ್ಲಿ ಭಾಗವಹಿಸಿ ಸಮಾರಂಭದ ಶಿಸ್ತು, ಸಮಯ ಪಾಲನೆ, ಮಠದ ಸಾಹಿತ್ಯಿಕ ಚಟುವಟಿಕೆಗಳ ಬಗ್ಗೆ ಅಪಾರ ಅಭಿಮಾನ ವ್ಯಕ್ತಪಡಿಸಿರುವ ಜೊತೆಗೆ, ನಮ್ಮ ಸ್ವತಃ ಬರಹಗಾರರಾಗಿ ಬೆಂಗಳೂರಿನ ತರಳಬಾಳು ಕೇಂದ್ರದಲ್ಲಿ ನಡೆಯುವ ಬೆಳದಿಂಗಳ ಕವಿಗೋಷ್ಠಿಗಳಲ್ಲಿ ಭಾಗವಹಿಸಿದ್ದರು. ಕಣವಿಯವರ ಸಾಹಿತ್ಯ, ಸಂಸ್ಕೃತಿ ಸಂವರ್ಧನೆಯ ಕೊಡುಗೆ ಸರ್ವ ಮಾನ್ಯವಾದುದು. ಮಠದ ವತಿಯಿಂದ ಸಾಹಿತ್ಯ ಸಿರಿ ಮಾಲಿಕೆಯಲ್ಲಿ ತಮ್ಮ 'ಮಾನಸ ಪೂಜೆ' ಕವನ ಸಂಕಲನವನ್ನು ಪ್ರಕಟಿಸಿರುವುದನ್ನು ಬಹುವಾಗಿ ಸ್ಮರಿಸಿಕೊಳ್ಳುತ್ತಿದ್ದರು. ನಮ್ಮ 'ಬಿಸಿಲು ಬೆಳದಿಂಗಳು' ಖಾಯಂ ಓದುಗರಾಗಿ ಲೇಖನಗಳಿಗೆ ಪ್ರತಿಕ್ರಿಯಿಸುವ ಸೌಜನ್ಯತೆಯನ್ನು ಮೆರೆದವರು ಹಾಗೂ ಶಿಗ್ಗಾಂವ ತರಳಬಾಳು ಹುಣ್ಣಿಮೆಯಲ್ಲಿ ಭಾಗವಹಿಸಿದ್ದನ್ನು ನೆನಪಿಸಿಕೊಂಡರು.

ಕಣವಿಯವರ ಬದುಕಿನ ಸಾಹಿತ್ಯದ ಕೊನೆಯ ಪುಟ ಇಂದಿಗೆ ಕೊನೆಗೊಂಡಿದ್ದರೂ, ಅವರ ಸಾಹಿತ್ಯ ಕೃಷಿಯ ಫಸಲು ಕೊನೆಗೊಳ್ಳದು. ಸರಳ-ವಿರಳ ವ್ಯಕ್ತಿತ್ವದ 'ಕವಿತೆಯ ಕಣಜ' ಕಣವಿಯವರ ಅಗಲಿಕೆ ನೋವು ತಂದಿದೆ ಎಂದು ಜಗದ್ಗುರುಗಳು ತಮ್ಮ ಸಂತಾಪ ಸೂಚಕದಲ್ಲಿ ತಿಳಿಸಿದ್ದಾರೆ.

## ಹೆಚ್‌ಬಿಎಂ ರಚಿಸಿದ ಕ್ಯಾರಿಕೇಚರ್‌ಗೆ ಹಸ್ತಾಕ್ಷರ



ದಾವಣಗೆರೆ, ಫೆ.16- ಹಿರಿಯ ಕವಿ ಶ್ರೀ ಚನ್ನವೀರ ಕಣವಿ ಅವರು ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲೆಂದು ದಾವಣಗೆರೆಗೆ ಆಗಮಿಸಿದ್ದ ಸಂದರ್ಭದಲ್ಲಿ ಅವರ 'ಕ್ಯಾರಿಕೇಚರನ್ನು ಹಿರಿಯ ವ್ಯಂಗ್ಯಚಿತ್ರಕಾರ ಎಚ್. ಬಿ.ಮಂಜುನಾಥ ಅವರು ರಚಿಸಿದಾಗ, ಅದನ್ನು ನೋಡಿ ಮೆಚ್ಚಿದ ಕಣವಿ ಅವರು ಅದಕ್ಕೆ ತಮ್ಮ ಹಸ್ತಾಕ್ಷರ ನೀಡಿದ್ದರು. ಕಣವಿ ಅವರ ನಿಧನಕ್ಕೆ ಮಂಜುನಾಥ್ ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

# ಗುಣಮಟ್ಟದ ಅಂಬೇಡ್ಕರ್ ಭವನ ನಿರ್ಮಾಣ

## ಜಗಳೂರು: ಅಂಬೇಡ್ಕರ್ ಭವನಗಳಿಗೆ ಶಂಕುಸ್ಥಾಪನೆ ನೆರವೇರಿಸಿದ ಶಾಸಕ ರಾಮಚಂದ್ರ



ಜಗಳೂರು, ಫೆ. 16- ತಾಲ್ಲೂಕಿನಾದ್ಯಂತ ಮಂಜೂರಾಗಿರುವ ಅಂಬೇಡ್ಕರ್ ಭವನಗಳನ್ನು ಸುಸಜ್ಜಿತ ಹಾಗೂ ಗುಣಮಟ್ಟದಿಂದ ನಿಗದಿತ ಸಮಯದಲ್ಲಿ ಪೂರ್ಣಗೊಳಿಸಬೇಕು ಎಂದು ಶಾಸಕ ಎಸ್.ವಿ.ರಾಮಚಂದ್ರ ಅಧಿಕಾರಿಗಳಿಗೆ ಸೂಚಿಸಿದರು.

ತಾಲ್ಲೂಕಿನ ತುಪ್ಪದಹಳ್ಳಿ, ಪಲ್ಲಾಗಟ್ಟೆ, ಸೂರಡ್ಡಿಹಳ್ಳಿ, ಉರ್ಲಕಟ್ಟೆ, ತಾರೇಹಳ್ಳಿ, ಕಸವನಹಳ್ಳಿ ಗ್ರಾಮಗಳಲ್ಲಿ 60 ಲಕ್ಷ ವೆಚ್ಚದಲ್ಲಿ ಅಂಬೇಡ್ಕರ್ ಭವನಗಳಿಗೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

ನನ್ನ ಆಡಳಿತಾವಧಿಯಲ್ಲಿ ದಲಿತ ಸಮುದಾಯದವರಿಗೆ ಅಂಬೇಡ್ಕರ್ ಭವನಗಳು ಗುರುತರ ಹೆಜ್ಜೆಗಳಾಗಲಿದ್ದು, ಆಯಾ ಗ್ರಾಮಗಳಲ್ಲಿ ದಲಿತರು ವಿವಾಹ, ಸಭೆ, ಸಮಾರಂಭದಂತಹ ಕಲ್ಯಾಣ ಕಾರ್ಯಕ್ರಮಗಳಿಗೆ ಸದುಪಯೋಗ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

**ಸ್ಮಶಾನ ಹಾಗೂ ಸಿಸಿ ರಸ್ತೆ ಮಂಜೂರು:** ತಾಲ್ಲೂಕಿನ ತುಪ್ಪದಹಳ್ಳಿ, ಪಲ್ಲಾಗಟ್ಟೆ ಸೇರಿದಂತೆ ಒಟ್ಟು 16 ಗ್ರಾಮಗಳಲ್ಲಿ ತಲಾ 47 ಲಕ್ಷ ವೆಚ್ಚದಲ್ಲಿ ಸುಸಜ್ಜಿತ ಸ್ಮಶಾನ ನಿರ್ಮಾಣ ಹಾಗೂ ವಿವಿಧ ಗ್ರಾಮಗಳಲ್ಲಿ 2 ಕೋಟಿ ರೂ.ವೆಚ್ಚದ ಸಿಸಿ ರಸ್ತೆಗಳಿಗೆ ಜನವರಿ 22 ರಂದು ಸಂಸದ ಸಿದ್ದೇಶ್ವರ ಅವರ ಸಮ್ಮುಖದಲ್ಲಿ ಶಂಕುಸ್ಥಾಪನೆ ನೆರವೇರಿಸಲಾಗುವುದು ಎಂದು ಹೇಳಿದರು.

**ಶೀಘ್ರ 57 ಕೆರೆ ತುಂಬಿಸುವ ಯೋಜನೆ ನೀರು ಭರ್ತಿ:** ದೀಟೂರಿನಿಂದ 18 ಕಿ.ಮೀ ದೂರ ಪೈಪ್ ಲೈನ್ ಕಾಮಗಾರಿ ಯಾವುದೇ ಅಡೆತಡೆಯಿಲ್ಲದೆ ಪೂರ್ಣಗೊಂಡು ನೀರು ಹರಿಯುತ್ತಿದೆ. ಉಳಿದಂತೆ 10 ರಿಂದ 12 ದಿನಗಳ ಒಳಗಾಗಿ ತಾಲ್ಲೂಕಿನ ತುಪ್ಪದಹಳ್ಳಿ ಕೆರೆಗೆ ಪ್ರಾಯೋಗಿಕ ನೀರು ಹರಿಸಲಾಗುವುದು ಎಂದು ಶಾಸಕರು ಭರವಸೆ ನೀಡಿದರು.

ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಿ.ಮಹೇಶ್ವರಪ್ಪ ಮಾತನಾಡಿ, ತಾಲ್ಲೂಕಿನ ಕೆಲ ಗ್ರಾಮಗಳಲ್ಲಿ ದಲಿತ ಸಮುದಾಯಗಳು ಹಲವು ವರ್ಷಗಳಿಂದ ಸ್ಮಶಾನಗಳಿಲ್ಲದೆ ಅಂತ್ಯಸಂಸ್ಕಾರಕ್ಕೆ ಸಾಕಷ್ಟು ಹರಸಾಹಸಪಡುವಂತಾಗಿತ್ತು.

ಕಾಂಪೌಂಡ್, ನೀರಿನ ಸೌಕರ್ಯದೊಂದಿಗೆ ಸುಸಜ್ಜಿತ ಸ್ಮಶಾನ ನಿರ್ಮಾಣಗೊಳ್ಳಲಿವೆ ಎಂದು ತಿಳಿಸಿದರು.

ತಾ.ಪಂ ಇಓ ಲಕ್ಷ್ಮಿಪತಿ ಮಾತನಾಡಿ, ಜಿಲ್ಲಾಧಿಕಾರಿ ಹಾಗೂ ಶಾಸಕರು ಪ್ರತಿ ತಿಂಗಳಿಗೊಮ್ಮೆ ಒಂದು ಗ್ರಾಮ ವಾಸ್ತವ್ಯ ಹೂಡಲು ನಿರ್ದೇಶಿಸಿದ್ದು, ಇದೇ ಶನಿವಾರ ಹಾಲೇಕಲ್ಲು ಗ್ರಾಮದಲ್ಲಿ ಮೊದಲ ಗ್ರಾಮ ವಾಸ್ತವ್ಯ ಹಮ್ಮಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಸಮಾರಂಭದಲ್ಲಿ ಬಿಜೆಪಿ ಮಂಡಲ ಅಧ್ಯಕ್ಷ ಎಚ್.ಸಿ.ಮಹೇಶ್, ತಹಶೀಲ್ದಾರ್ ಜಿ. ಸಂತೋಷ್ ಕುಮಾರ್, ಭೂ ಸೇನಾ ನಿಗಮದ ಎಇಇ ಚಂದ್ರಶೇಖರ್, ಎಇಇ ಭಾರತಿ, ಎಇ ಶಿವರಾಜ್, ಡಿಎಸ್ ಎಸ್ ಸಂಘಟನೆ ಮುಖಂಡರಾದ ಪೂಜಾರ್ ಸಿದ್ದಪ್ಪ, ವಕೀಲ ಹನುಮಂತಪ್ಪ, ಓಬಣ್ಣ, ಕುಬೇಂದ್ರಪ್ಪ, ಹನುಮಂತಪ್ಪ, ಸತೀಶ್, ಶಿವಮೂರ್ತಿ ಮುಂತಾದವರು ಭಾಗವಹಿಸಿದ್ದರು.

## ಆವರಗೊಳ್ಳದಲ್ಲಿ ಇಂದು ಬಸವೇಶ್ವರ ಆರೋಹಣ ಉತ್ಸವ, 23 ಕ್ಕೆ ತೇರು

ದಾವಣಗೆರೆ ತಾಲ್ಲೂಕು ಆವರಗೊಳ್ಳ ಗ್ರಾಮದ ಶ್ರೀ ವೀರಭದ್ರೇಶ್ವರ ರಥೋತ್ಸವದ ಅಂಗವಾಗಿ ಇಂದು ರಾತ್ರಿ 9 ಗಂಟೆಗೆ ಬಸವೇಶ್ವರ ಆರೋಹಣ ಉತ್ಸವ ಜರುಗಲಿದೆ.

ನಾಳೆ ಶುಕ್ರವಾರ ರಾತ್ರಿ 9 ಗಂಟೆಗೆ ಸರ್ಪಾರೋಹಣ ಉತ್ಸವ, 19 ರಂದು ರಾತ್ರಿ 8 ಗಂಟೆಗೆ ರಥಕ್ಕೆ ಕಳಸಾರೋಹಣ ಹಾಗೂ ರಾತ್ರಿ 9 ಗಂಟೆಗೆ ಅಶ್ವಾರೋಹಣ ಉತ್ಸವ, 20 ರಂದು ರಾತ್ರಿ ದೊಡ್ಡಬಾತಿ ಶ್ರೀ ರೇವಣಸಿದ್ದೇಶ್ವರ ಸ್ವಾಮಿ ಮತ್ತು ಶ್ರೀ ಬೀರಲಿಂಗೇಶ್ವರ ಸ್ವಾಮಿ ಆಗಮನ, ಶ್ರೀ ವೀರಭದ್ರ ಸ್ವಾಮಿಗೆ ಆವರಗೊಳ್ಳ ಪುರವರ್ಗ ಮಠದ ವಂಶಸ್ಥರಿಂದ ಹರಿದ್ರಾಲೇಪನ, ತೇರುಮನೆ ಚೌಡೇಶ್ವರಿ ದೇವಿಗೆ ದೇವಸ್ಥಾನದ ವತಿಯಿಂದ ಪೂಜಾರರವರಿಂದ ಉಡಿ ತುಂಬುವ ಶಾಸ್ತ್ರ ನಡೆಯಲಿದೆ.

21 ರಂದು ಬೆಳಿಗ್ಗೆ 8 ಕ್ಕೆ ಗಜಾರೋಹಣ ಉತ್ಸವ, ಸಂಜೆ 6 ಗಂಟೆಗೆ ಶ್ರೀ ವೀರಭದ್ರೇಶ್ವರ ಮಹಾಸ್ವಾಮಿಯ ಮಹಾ ರಥೋತ್ಸವ ಜರುಗಲಿದೆ.

22 ರಂದು ಬೆಳಿಗ್ಗೆ 8 ಗಂಟೆಗೆ ಶ್ರೀ ಸ್ವಾಮಿಯ ಗುಗ್ಗಳ ಸೇವೆ, ಭಕ್ತರಿಂದ ಅಂದು ರಾತ್ರಿ 10 ಗಂಟೆಗೆ ಓಕುಳಿ ಸೇವೆ, ಗಂಗಾಪೂಜೆ ನಂತರ ಉಯ್ಯಾಲೆ ಮಂಟಪದಲ್ಲಿ ಶ್ರೀ ಸ್ವಾಮಿಯು ಆಸೀನರಾಗುವುದು, 23 ರಂದು ಬೆಳಿಗ್ಗೆ 8 ಗಂಟೆಗೆ ವಿವಿಧ ಕಾರ್ಯಕ್ರಮಗಳು, 24 ರಂದು ಕಂಕಣ ವಿಸರ್ಜನೆಯೊಂದಿಗೆ ರಥೋತ್ಸವದ ಕಾರ್ಯಕ್ರಮಗಳು ಮುಕ್ತಾಯವಾಗಲಿವೆ.

## ಜಗಳೂರಿನಲ್ಲಿ ಇಂದು ಉಚಿತ ಹೃದಯ ತಪಾಸಣಾ ಶಿಬಿರ

ಎಸ್.ಎಸ್. ನಾರಾಯಣ ಹಾರ್ಟ್ ಸೆಂಟರ್ (ದಾವಣಗೆರೆ), ಶ್ರೀ ರಾಘವೇಂದ್ರ ಆಸ್ಪತ್ರೆ (ಜಗಳೂರು), ಲಯನ್ಸ್ ಕ್ಲಬ್ (ಜಗಳೂರು), ಅಮ್ಮಲಯನ್ಸ್ ಕ್ಲಬ್ ನಿಯೋಜಿತ ಲಿಯೋ ಕ್ಲಬ್ (ಜಗಳೂರು) ಇವರುಗಳ ಆಶ್ರಯದಲ್ಲಿ ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಜಗಳೂರಿನ ಶ್ರೀ ರಾಘವೇಂದ್ರ ಆಸ್ಪತ್ರೆಯಲ್ಲಿ ಉಚಿತ ಹೃದಯ ತಪಾಸಣಾ ಶಿಬಿರ ನಡೆಯಲಿದೆ.

ವಿವರಗಳಿಗೆ ಮೊ: 99800 26026, 98458 67907, 91649 11143, 82968 20570, ದೂರವಾಣಿ ಸಂಖ್ಯೆ: 08196-227328 ಗೆ ಸಂಪರ್ಕಿಸಲು ಕೋರಲಾಗಿದೆ.

# ಪರಿಶಿಷ್ಟರ ಸಮಾವೇಶಕ್ಕೆ ಮುಂದಾದ ಪರಮೇಶ್ವರ್

### ನಾಯಕತ್ವ ಪೈಪೋಟಿಯ ನಡುವೆ ಸಮಾವೇಶಕ್ಕೆ ಪಟ್ಟು



ಬೆಂಗಳೂರು, ಫೆ. 16 - ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನಡುವೆ ಸಂಭಾವ್ಯ ಮುಖ್ಯಮಂತ್ರಿ ಹುದ್ದೆಗಾಗಿ ಪೈಪೋಟಿ ನಡೆಯುತ್ತಿರುವ ಬೆನ್ನಲ್ಲೇ ಕೆಪಿಸಿಸಿ ಮಾಜಿ ಅಧ್ಯಕ್ಷ ಡಾ. ಜಿ. ಪರಮೇಶ್ವರ್ ವಿಭಾಗ ಮಟ್ಟದಲ್ಲಿ ಪರಿಶಿಷ್ಟರ ಸಮಾವೇಶ ನಡೆಸಲು ಮುಂದಾಗಿದ್ದಾರೆ.

ಮುಂದೆ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮುಖ್ಯಮಂತ್ರಿಯಾಗಲು ನನಗೆ ಕೊನೆಯ ಅವಕಾಶ ಸಿಗುತ್ತದೆ, ಅಷ್ಟರಲ್ಲಿ ತಮ್ಮ ನಾಯಕತ್ವವನ್ನು ರೂಪಿಸಿಕೊಳ್ಳುವ ಉದ್ದೇಶದಿಂದ ಇಂತಹ ಸಮಾವೇಶಕ್ಕೆ ಮುಂದಾಗಿದ್ದಾರೆ.

ಸಿದ್ದರಾಮಯ್ಯ ಸೇರಿದಂತೆ ಕೆಲವು ನಾಯಕರು ವಿರೋಧ ವ್ಯಕ್ತಪಡಿಸಿದರೂ ಅದನ್ನು ಲೆಕ್ಕಿಸದ ಪರಮೇಶ್ವರ್, ಭರದಿಂದ ಸಮಾವೇಶದ ಸಿದ್ಧತೆ ನಡೆಸಿದ್ದಾರೆ.

ಪಕ್ಷದ ಅಡಿಯಲ್ಲೇ ನನ್ನ ಮುಂದಾಳತ್ವದಲ್ಲಿ ಸಮಾವೇಶ ನಡೆಯುತ್ತದೆ, ಈ ಸಭೆಗಳಿಗೆ ರಾಷ್ಟ್ರ ಹಾಗೂ ರಾಜ್ಯದ ನಾಯಕರುಗಳನ್ನು ಆಹ್ವಾನಿಸುತ್ತೇನೆ, ಇದು ಮುಂಬರುವ ಚುನಾವಣೆಗೆ ಪಕ್ಷ ಸಂಘಟನೆ ಉದ್ದೇಶವಾಗಿದೆ ಎಂದವರು ಹೇಳಿದ್ದಾರೆ.

ತಮ್ಮ ದೃಢ ನಿರ್ಧಾರವನ್ನು ಪಕ್ಷದ ವರಿಷ್ಠರ ಗಮನಕ್ಕೂ ತಂದಿದ್ದಾರೆ. ನಿನ್ನೆ ಕೆಪಿಸಿಸಿ ಕಚೇರಿಯಲ್ಲಿ ನಡೆದ ಮುಖಂಡರ ಸಭೆಯಲ್ಲೂ ವಿಷಯ ಪ್ರಸ್ತಾಪಿಸಿ ತಮ್ಮ ಬೆಂಬಲ ಬೇಕೆಂದು ಕೋರಿದ್ದಾರೆ.

ಇದಕ್ಕೆ ಸಿದ್ದರಾಮಯ್ಯ, ಎಲ್ಲರೂ ಒಟ್ಟಾಗಿ ಹೋಗೋಣ ಪ್ರತ್ಯೇಕ ಸಭೆಗಳನ್ನು ನಡೆಸುವುದು ಬೇಡ, ಸಣ್ಣ-ಪುಟ್ಟ ಸಮಸ್ಯೆಗಳಿದ್ದರೆ ಬಗೆಹರಿಸಿಕೊಳ್ಳೋಣ ನೀವು ಬನ್ನಿ ಎಂದಿದ್ದಾರೆ.

ಇದಕ್ಕೆ ಸುತಾರಾಂ ಒಪ್ಪದ ಪರಮೇಶ್ವರ್, ಪರಿಶಿಷ್ಟರ ಸಭೆ ನಡೆದೇ ನಡೆಯುತ್ತದೆ, ಇದರಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂದು ಸಭೆಯಲ್ಲೇ ಉತ್ತರ ನೀಡಿದ್ದಾರೆ. ಪರಮೇಶ್ವರ್ ನಿರ್ಧಾರಕ್ಕೆ ಮೂಲ ಕಾಂಗ್ರೆಸ್ಸಿಗರು ಬೆಂಬಲ ವ್ಯಕ್ತಪಡಿಸಿ, ಮುಂದುವರೆಯಿರಿ ಎಂದಿದ್ದಾರೆ.

ಮಾಜಿ ಸಚಿವ ಮಹದೇವಪ್ಪ ಅವರನ್ನು ಪರಿಶಿಷ್ಟರ ನಾಯಕರಾಗಿ ಮುಂಚೂಣಿಗೆ ತರಲು ಸಿದ್ದರಾಮಯ್ಯ ಮುಂದಾಗಿರುವುದು ಪರಮೇಶ್ವರ್ ಅವರನ್ನು ಕೆರಳಿಸಿದೆ.

ಕಳೆದ ಮೂರ್ನಾಲ್ಕು ದಶಕಗಳಿಂದ ಪಕ್ಷಕ್ಕಾಗಿ ಎಲ್ಲಾ ಹಂತಗಳಲ್ಲಿ ದುಡಿದಿದ್ದೇನೆ, ಹೊರಗಿನಿಂದ ಬಂದವರಿಗೆ ಮುಖ್ಯಮಂತ್ರಿ ಸ್ಥಾನ ಮತ್ತು ಇತರೆ ಹುದ್ದೆಗಳು ದೊರೆಯುತ್ತಿವೆ.

ಅವಕಾಶ ಬಂದಾಗ ನಮಗೆ ಸಿಗಬೇಕಾದ ಅಧಿಕಾರ ತಪ್ಪಿಸಲಾಗಿದೆ, ಕಾಂಗ್ರೆಸ್‌ನ ಮೂಲ ಅಲ್ಪಸಂಖ್ಯಾತರನ್ನು ತುಳಿದು ವಲಸೆ ಬಂದ ಜಮೀರ್ ಅವರಿಗೆ ಮಣೆ ಹಾಕಲಾಗಿದೆ ಎಂಬುದು ಪರಮೇಶ್ವರ್ ಆಕ್ಷೇಪ.

ಇದೀಗ ಮಹದೇವಪ್ಪ ಅವರನ್ನು ಮುಂಚೂಣಿಗೆ ತರಲು ಹೊರಟಿದ್ದಾರೆ, ಈಗ ನಾವು ಸುಮ್ಮನಿದ್ದರೆ, ನಮ್ಮನ್ನೂ ತುಳಿಯುತ್ತಾರೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ನಾಯಕತ್ವಕ್ಕೆ ನಾನೂ ಅರ್ಹನಿದ್ದೇನೆ, ನಾಯಕತ್ವ ಪ್ರದರ್ಶನ ಮತ್ತು ಪಕ್ಷ ಸಂಘಟನೆಗಾಗಿ ಸಮಾವೇಶ ನಡೆಸಿಯೇ ನಡೆಸುತ್ತೇನೆ ಎಂದಿದ್ದಾರೆ. ಸಮಾವೇಶದ ಪೂರ್ಣ ವೆಚ್ಚವನ್ನು ನಾನೇ ಭರಿಸುತ್ತೇನೆ, ಪಕ್ಷ ಹಾಗೂ ಯಾರಿಂದಲೂ ಒಂದು ನಯಾ ಪೈಸೆ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿಕೊಂಡಿರುವ ಪರಮೇಶ್ವರ್ ನಾಯಕತ್ವ ಪಡೆಯುವ ಎಲ್ಲಾ ಪ್ರಯತ್ನಕ್ಕೆ ಮುಂದಾಗಿದ್ದಾರೆ.

## ಚನ್ನವೀರ ಕಣವಿ ಅಗಲಿಕೆಗೆ ಸಂತಾಪ

ದಾವಣಗೆರೆ, ಫೆ.16- ನಾಡಿನ ಹೆಸರಾಂತ ಹಿರಿಯ ಕವಿ ಚನ್ನವೀರ ಕಣವಿ ಅವರ ನಿಧನಕ್ಕೆ ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ ತೀವ್ರ ಸಂತಾಪ ವ್ಯಕ್ತಪಡಿಸಿದೆ. ನಾಡಿನ ಹಿರಿಯ ಚೇತನ, ನಾಡೋಜ ಚನ್ನವೀರ ಕಣವಿಯವರ ಅಗಲುವಿಕೆಯಿಂದ ನಾಡಿನ ಸಾಹಿತ್ಯ ಕ್ಷೇತ್ರ, ಸಾಮಾಜಿಕ ಚಿಂತನಾ ಕ್ಷೇತ್ರಕ್ಕೂ ತುಂಬಲಾರದ ನಷ್ಟವಾಗಿದೆ ಎಂದು ಸಂತಾಪದಲ್ಲಿ ತಿಳಿಸಲಾಗಿದೆ.

ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ ಸಲಹೆಗಾರರಾಗಿದ್ದ ಕಣವಿ ಅವರು ವೈಜ್ಞಾನಿಕ ಮತ್ತು ಪ್ರಜಾತಾಂತ್ರಿಕ ಶಿಕ್ಷಣದ ಪರವಾಗಿದ್ದರು. ಬಡ ಮತ್ತು ಜನ ಸಾಮಾನ್ಯರಿಗೆ ಶಿಕ್ಷಣ ಕೈಗೆಟುಕುವಂತಿರಬೇಕು ಎಂದು ಪ್ರತಿಪಾದಿಸುತ್ತಿದ್ದರು ಎಂದು ಸ್ಮರಿಸುವ ಮೂಲಕ ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ ಜಿಲ್ಲಾ ಸಂಚಾಲಕರಾದ ನಾಗಜ್ಯೋತಿ ಶೋಕ ವ್ಯಕ್ತಪಡಿಸಿದ್ದಾರೆ.

## ಕೊಕ್ಕನೂರಿನಲ್ಲಿ ನಾಳೆ ಡಿಸಿ ಗ್ರಾಮ ವಾಸ್ತವ್ಯ : ಸ್ಥಳ ಪರಿಶೀಲನೆ



ಮಲೇಬೆನ್ನೂರು, ಫೆ. 16- ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರ ನೇತೃತ್ವದಲ್ಲಿ ನಾಡಿದ್ದು ದಿನಾಂಕ 19 ರ ಶನಿವಾರದಂದು ಕೊಕ್ಕನೂರು ಗ್ರಾಮದಲ್ಲಿ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ' ಎಂಬ ವಿನೂತನ ಕಾರ್ಯಕ್ರಮದಡಿ ಜಿಲ್ಲಾಡಳಿತ ಗ್ರಾಮ ವಾಸ್ತವ್ಯ ಹೂಡಲಿದ್ದು, ಈ ಹಿನ್ನೆಲೆಯಲ್ಲಿ ಬುಧವಾರ ಉಪ ವಿಭಾಗಾಧಿಕಾರಿ ಶ್ರೀಮತಿ ಮಮತಾ ಹೊಸಗೌಡರ್, ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಅವರು ಸ್ಥಳ ಪರಿಶೀಲಿಸಿದರು.

ಕೊಕ್ಕನೂರು ಗ್ರಾಮದ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ನಡೆಯಲಿರುವ ಕಾರ್ಯಕ್ರಮಕ್ಕೆ ಸಿದ್ಧತೆ ಕೈಗೊಳ್ಳುವಂತೆ ಮಮತ ಹೊಸಗೌಡರ್ ಅಧಿಕಾರಿಗಳಿಗೆ ತಿಳಿಸಿದರು.

ಗ್ರಾ.ಪಂ. ವ್ಯಾಪ್ತಿಗೆ ಸಂಬಂಧಪಟ್ಟ ಸಮಸ್ಯೆಗಳ ಬಗ್ಗೆ ಜನರು ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರದ ಮೂಲಕ ಅರ್ಜಿ ಸಲ್ಲಿಸುವಂತೆ ತಹಶೀಲ್ದಾರ್ ರಾಮಚಂದ್ರಪ್ಪ ಮನವಿ ಮಾಡಿದ್ದಾರೆ.

ಈ ಕಾರ್ಯಕ್ರಮಕ್ಕೆ ಕೊಕ್ಕನೂರು ಗ್ರಾ.ಪಂ. ಮತ್ತು ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಸಮಿತಿ ಸಂಪೂರ್ಣ ಬೆಂಬಲ ನೀಡಿದೆ ಎಂದು ಉಪ ತಹಶೀಲ್ದಾರ್ ಆರ್. ರವಿ ತಿಳಿಸಿದರು.

ಗ್ರಾಮಲೆಕ್ಕಾಧಿಕಾರಿ ಬೋರಯ್ಯ, ಗ್ರಾ.ಪಂ. ಅಧ್ಯಕ್ಷ ನಿಂಗನಗೌಡ, ಪಿಡಿಓ ನಾಗರಾಜ್ ಸಾರಥಿ, ಗ್ರಾಮದ ಅಭಿ ಪಾಟೀಲ್, ಸಿದ್ದು ದಾಸರ, ಶಾಲಾ ಮುಖ್ಯ ಶಿಕ್ಷಕ ಮಹಾದೇವಪ್ಪ ಹಾಗೂ ಶಿಕ್ಷಕರು, ಗ್ರಾಮ ಸಹಾಯಕ ಶಶಿಕುಮಾರ್ ಈ ವೇಳೆ ಹಾಜರಿದ್ದರು.

# ಬಾಪೂಜಿ ಆಸ್ಪತ್ರೆಯಲ್ಲಿ ನವಜಾತ ಶಿಶುಗಳ ಶ್ರವಣ ಪರೀಕ್ಷೆ

ದಾವಣಗೆರೆ, ಫೆ. 16- ನಗರದ ಬಾಪೂಜಿ ಆಸ್ಪತ್ರೆಯಲ್ಲಿ ಕಿವಿ, ಮೂಗು, ಗಂಟಲು ವಿಭಾಗದಲ್ಲಿ ನವಜಾತ ಶಿಶುಗಳ ಶ್ರವಣ ಪರೀಕ್ಷೆಗೆ ಅತ್ಯಾಧುನಿಕ ಯಂತ್ರಗಳು ಲಭ್ಯವಿದೆ ಎಂದು ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ.ಡಿ.ಎಸ್. ಕುಮಾರ್ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದಲ್ಲಿ ಜನಿಸುವ ಪ್ರತಿ ಸಾವಿರ ನವಜಾತ ಶಿಶುಗಳಲ್ಲಿ ಶೇ.2ರಷ್ಟು ಮಕ್ಕಳಲ್ಲಿ ಹುಟ್ಟುತ್ತಲೇ ಕಿವಿ ಕೇಳದಿರುವ ದೋಷವಿರುತ್ತದೆ. ಈ ಸಮಸ್ಯೆಯನ್ನು ಬೇಗ ಗುರುತಿಸದಿದ್ದರೆ ಮಕ್ಕಳು ಮಾತನಾಡಲು ಹಾಗೂ ಬೆಳವಣಿಗೆಗೆ ತೊಂದರೆಯಾಗುತ್ತದೆ. ಜನಿಸಿದ 1 ತಿಂಗಳ ನಂತರ ಶಿಶುಗಳ ಕಿವಿ ಕೇಳುವಿಕೆಯನ್ನು ಒಎಇ ಮತ್ತು ಬೇರಾ ಟೆಸ್ಟ್ ಮೂಲಕ ಖಚಿತ ಪಡಿಸಿಕೊಳ್ಳಬಹುದಾಗಿದೆ.

**ವಿಡಿಯೋ ನಿಸ್ಟಾಗ್ಮೋಗ್ರಫಿ:** ತಲೆ ಸುತ್ತುವಿಕೆ ಸಾಮಾನ್ಯ ಕಾರಣವಾಗಿದ್ದು, ಶೇ.90 ರಷ್ಟು ಜನರಲ್ಲಿ ಒಳಕಿವಿಯಲ್ಲಿನ ತೊಂದರೆಗೆ ತಲೆ ಸುತ್ತುವಿಕೆ ಕಂಡು ಬರುತ್ತಿದೆ. ನಿರ್ದಿಷ್ಟ ಕಾರಣ ಕಂಡು ಹಿಡಿದು ತಲೆ ಸುತ್ತುವಿಕೆಯನ್ನು ಗುಣಪಡಿಸಬಹುದಾಗಿದೆ. ವೀಡಿಯೋ ನಿಸ್ಟಾಗ್ಮೋಗ್ರಫಿ ಸಾಧನದಿಂದ ತಲೆಸುತ್ತುವಿಕೆಗೆ ನಿರ್ದಿಷ್ಟ ಕಾರಣ ಕಂಡುಹಿಡಿದು ಸೂಕ್ತ ಚಿಕಿತ್ಸೆ ನೀಡಬಹುದಾಗಿದೆ. ಈ ಪರೀಕ್ಷೆ ಆಸ್ಪತ್ರೆಯ ಒಪಿಡಿ ವಿಭಾಗದ ರೂಂ. ನಂ.11ರಲ್ಲಿ ಲಭ್ಯವಿರುವುದಾಗಿ ಅವರು ಹೇಳಿದರು.

**ಅಲರ್ಜಿ ವಿಶೇಷ ತಪಾಸಣೆ ಚಿಕಿತ್ಸೆ:** ಶೇ.33ರಷ್ಟು ಜನರು ಅಲರ್ಜಿ ಹಾಗೂ ಅದರ ರೋಗಗಳಾದ ಒಣ ಕೆಮ್ಮು, ನೆಗಡಿ, ಅಸ್ತಮಾ, ಮೈ ತುರಿಕೆ, ಮುಖ, ತುಟಿ ಊತ, ಮೈ ಮೇಲೆ ಕೆಂಪು ಗುಳ್ಳೆಗಳು, ಹೊಟ್ಟೆ ನೋವು, ವಾಂತಿಯಿಂದ ಬಳಲುತ್ತಿದ್ದಾರೆ. ಅಲರ್ಜಿ ಬಗ್ಗೆ ಜಾಗ್ರತೆ ಹಾಗೂ ಸರಿಯಾದ ಪರೀಕ್ಷೆ ಅವಶ್ಯವಾಗಿದ್ದು, ಕಿವಿ, ಮೂಗು ಹಾಗೂ ಗಂಟಲು ವಿಭಾಗದ ನುರಿತ ವೈದ್ಯರ ತಂಡವು ಅಲರ್ಜಿಗೆ ಮೂಲ ಕಾರಣವಾದ ಅಲರ್ಜನ್ ಪದಾರ್ಥ ಪತ್ತೆ ಹಚ್ಚುವ ಸ್ಕಿನ್ ಪ್ರಿಕ್ ಟೆಸ್ಟ್ ಎಂಬ ಪರೀಕ್ಷೆ ನಡೆಸಿ, ಚಿಕಿತ್ಸೆ ನೀಡುತ್ತಿದೆ ಎಂದು ಹೇಳಿದರು.

**ಚರ್ಮ ರೋಗಕ್ಕೆ ಲೇಸರ್ ಚಿಕಿತ್ಸೆ:** ಬಾಪೂಜಿ ಆಸ್ಪತ್ರೆಯ ಚರ್ಮ ರೋಗ ವಿಭಾಗದಲ್ಲಿ ನಾಲ್ಕು ಬಗೆಯ ಲೇಸರ್ ಯಂತ್ರಗಳನ್ನು ಅಳವಡಿಸಲಾಗಿದ್ದು, ಕಡಿಮೆ ಬೆಲೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಆಸ್ಪತ್ರೆಯ ಚರ್ಮರೋಗ ವಿಭಾಗದ ಮುಖ್ಯಸ್ಥ ಡಾ. ಸೂಗಾರೆಡ್ಡಿ ಹೇಳಿದ್ದಾರೆ.

ಹೆಣ್ಣು ಮಕ್ಕಳಲ್ಲಿ ಕೆನ್ನೆ, ಗದ್ದ, ಮೇಲ್ತುಟಿ ಮೇಲೆ ಅನಾವಶ್ಯಕವಾಗಿ ಕೂದಲು ಬೆಳೆದಿರುವುದನ್ನು ತೆಗೆಯಲು ಡಯೋಡ್ ಲೇಸರ್ ಚಿಕಿತ್ಸೆ. ಮೊಡವೆಯ ಗಾಯಗಳನ್ನು ತೆಗೆಯಲು, ಚರ್ಮದ ಸುಕ್ಕುಗಳನ್ನು ಕಡಿಮೆ ಮಾಡಲು, ಚರ್ಮ ಮರುಕಳಿಸುವಿಕೆಗೆ ಪ್ರಾಕ್ಷನಲ್ ಲೇಸರ್ ಯಂತ್ರ. ಹಚ್ಚೆ (ಟ್ಯಾಟೂ) ಹುಟ್ಟು ಮಚ್ಚೆಗಳನ್ನು ತೆಗೆಯಲು ಕ್ಯೂಸ್ವಿಚ್ಡ್ ಯಂತ್ರ ಲಭ್ಯವಿದೆ. ತೊನ್ನು, ಸೋರಿಯಾಸಿಸ್, ಅಲೋಫೆಷಿಯಾ ಎರಿಯಾಟ ಸಮಸ್ಯೆಗೆ ಎಕ್ಸೈಮರ್ ಲೇಸರ್ ಯಂತ್ರದ ಮೂಲಕ ಚಿಕಿತ್ಸೆ ಪಡೆಯಬಹುದಾಗಿದೆ ಎಂದು ಮಾಹಿತಿ ನೀಡಿದರು.

ಲೇಸರ್ ಕಿರಣಗಳು ರೋಗ ಇದ್ದ ಜಾಗಕ್ಕೆ ಬಿದ್ದಾಗ ಅಲ್ಲಿರುವ ಜಾವಿಕೋಳಗಳ ಮೇಲೆ ತನ್ನ ಪರಿಣಾಮ ಬೀರುತ್ತದೆ. ಆದ್ದರಿಂದ ಲೇಸರ್ ತುಂಬಾ ಪ್ರಶಂಸೆ ಪಡೆಯುತ್ತಿದೆ. ಇದೊಂದು ಸರಳ ವಿಧಾನವಾಗಿದ್ದು, ಮದ್ದಿಲ್ಲದ ಕಾಯಿಲೆಗಳಿಗೂ ಈ ಚಿಕಿತ್ಸೆ ಮದ್ದಾಗಿರುವ ಕಾರಣ ಲೇಸರ್ ಅತ್ಯಾಧುನಿಕ ದಿನಗಳಲ್ಲಿ ತುಂಬಾ ಉಪಯೋಗವಾಗಿದೆ ಎಂದು ಹೇಳಿದರು.

ಜೆ.ಜೆ.ಎಂ. ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಬಿ. ಮುರುಗೇಶ್, ಡಾ.ಕೆ.ಬಿ. ಬಸವರಾಜ್, ಡಾ.ಪ್ರಶಾಂತ್, ಡಾ. ಚೈತನ್ಯ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ಅಸಗೋಡು ಗ್ರಾಮ ಪಂಚಾಯ್ತಿ ಅಧ್ಯಕ್ಷೆಯಾಗಿ ವೀರಮ್ಮ



ಜಗಳೂರು, ಫೆ. 16- ತಾಲ್ಲೂಕಿನ ಅಸಗೋಡು ಗ್ರಾಮ ಪಂಚಾಯಿತಿ ಅಧ್ಯಕ್ಷ ಸ್ಥಾನಕ್ಕೆ ವೀರಮ್ಮ ಹನುಮಂತಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಸರೋಜಮ್ಮ ಬಸವರಾಜಪ್ಪ ಅವರ ರಾಜೀನಾಮೆಯಿಂದಾಗಿ ತೆರವಾದ ಅಧ್ಯಕ್ಷ ಸ್ಥಾನಕ್ಕೆ ಬುಧವಾರ ನಡೆದ ಚುನಾವಣೆಯಲ್ಲಿ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣೆ ಅಧಿಕಾರಿ ಪಿಡಬ್ಲ್ಯೂಡಿ ಎಇಇ ರುದ್ರಪ್ಪ ಅವರು ಅವಿರೋಧ ಆಯ್ಕೆ ಘೋಷಿಸಿದರು. ಈ ಸಂದರ್ಭದಲ್ಲಿ ಮಾಜಿ ಅಧ್ಯಕ್ಷ ರವಿಕುಮಾರ್ ಸೇರಿದಂತೆ, ಸದಸ್ಯರು ಮುಖಂಡರುಗಳು ಇದ್ದರು.

## ನಾಡೋಜ ಕಣವಿ ನಿಧನಕ್ಕೆ ಜೆಂಬಿಗಿ ಮೃತ್ಯುಂಜಯ ಸಂತಾಪ

ದಾವಣಗೆರೆ,ಫೆ.16- ಕನ್ನಡ ನಾಡಿನ ಹಿರಿಯ ಕವಿ ಚೇತನ, ನಾಡೋಜ ಡಾ. ಚೆನ್ನವೀರ ಕಣವಿ ಅವರ ನಿಧನಕ್ಕೆ ನಗರದ ಕನ್ನಡ ಉಪನ್ಯಾಸಕರೂ, ಸಾಹಿತಿಗಳೂ ಆದ ಜೆಂಬಿಗಿ ಮೃತ್ಯುಂಜಯ ಅವರು ಸಂತಾಪ ಸೂಚಿಸಿದ್ದಾರೆ.

ಕಣವಿ ಅವರು ಮೃದುತನಕೆ, ಸಂಭಾವಿ ತನಕೆ, ಸ್ನೇಹ ಸುನೀತಕೆ ಹೆಸರಾಗಿದ್ದರು ಎಂದು ಮೃತ್ಯುಂಜಯ ಹೇಳಿದ್ದಾರೆ.

## ಗೋಡ್ಸೆ ಮಾದರಿ ಎಂದು ಮಕ್ಕಳಿಗೆ ಪ್ರಬಂಧ ಸ್ಪರ್ಧೆ ಆಯೋಜನೆ : ಅಧಿಕಾರಿ ಅಮಾನತ್ತು

ಅಹಮಾಬಾದ್, ಫೆ. 16 – ಮಹಾತ್ಮ ಗಾಂಧೀಜಿ ಹಂತಕ ನಾಥೂರಾಮ್ ಗೋಡ್ಸೆಯನ್ನು ಮಾದರಿಯಾಗಿ ಬಣ್ಣಿಸುವ ಸ್ಪರ್ಧೆ ಆಯೋಜಿಸಿದ್ದ ಗುಜರಾತ್‌ನ ವಲ್ಸದ್ ಜಿಲ್ಲೆಯ ಯುವ ಸಬಲೀಕರಣ ಅಧಿಕಾರಿಯನ್ನು ಅಮಾನತ್ತುಗೊಳಿಸಲಾಗಿದೆ. ನಾಥೂರಾಮ್ ಗೋಡ್ಸೆಯನ್ನು ಆದರ್ಶವಾಗಿ ಪರಿಗಣಿಸಿ ಆಯೋಜಿಸಲಾಗಿದ್ದ ಪ್ರಬಂಧ ಸ್ಪರ್ಧೆಯಲ್ಲಿ ಬಾಲಕಿಯೊಬ್ಬರು ಪ್ರಥಮ ಸ್ಥಾನ ಪಡೆದ ಬಗ್ಗೆ ವಲ್ಸದ್ ಜಿಲ್ಲೆಯ ಸ್ಥಳೀಯ ಪತ್ರಿಕೆಗಳಲ್ಲಿ ವರದಿಗಳು ಪ್ರಕಟವಾಗಿದ್ದವು. ನಂತರ ಸ್ಪರ್ಧೆ ಆಯೋಜಿಸಿದ್ದು ಬೆಳಕಿಗೆ ಬಂದಿತ್ತು.

ಪ್ರೊಬೇಷನರಿ ಅಧಿಕಾರಿಯಾಗಿರುವ ಮೀತಾಬೆನ್ ಗಾವ್ಲಿ ಅವರನ್ನು ತಕ್ಷಣವೇ ಅಮಾನತ್ತುಗೊಳಿಸಲಾಗಿದೆ. ಅವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಯುವಜನ ಹಾಗೂ ಕ್ರೀಡಾ ಇಲಾಖೆ ತಿಳಿಸಿದೆ. ಇಲಾಖೆಯ ವತಿಯಿಂದ ಖಾಸಗಿ ಶಾಲೆಯೊಂದರಲ್ಲಿ ಪ್ರಬಂಧ ಸ್ಪರ್ಧೆ ಆಯೋಜಿಸಲಾಗಿತ್ತು. 11ರಿಂದ 13 ವರ್ಷದ ಮಕ್ಕಳಿಗಾಗಿ ಸ್ಪರ್ಧೆ ಆಯೋಜಿಸಲಾಗಿತ್ತು. ಮಕ್ಕಳಿಗೆ ಮೂರು ವಿಷಯದ ಆಯ್ಕೆ ನೀಡಲಾಗಿತ್ತು. ಪಕ್ಷಿ ಹಾಗೂ ವಿಜ್ಞಾನಕ್ಕೆ ಸಂಬಂಧಿಸಿದ ಎರಡು ವಿಷಯಗಳಿದ್ದರೆ, ಮೂರನೆಯದ್ದು ಗೂಡ್ಸೆ ಆದರ್ಶವಾಗಿ ಪರಿಗಣಿಸುವುದಾಗಿತ್ತು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಎಸ್.ಎಸ್. ಲೇಔಟ್ ಎ ಬ್ಲಾಕ್, ಕುವೆಂಪು ನಗರ, ಎಂಸಿಸಿ ಬಿ-ಬ್ಲಾಕ್, ಸಿದ್ದವೀರಪ್ಪ ಬಡಾವಣೆ, ಶಾಮನೂರು ರೋಡ್, ಗ್ರೀನ್ ಪಾರ್ಕ್, ಬಾಪೂಜಿ ಸಮುದಾಯ ಭವನ, ಬಾಟ್ಲಿ ಬಿಲ್ಡಿಂಗ್, ಬಿಐಇಟಿ ಕಾಲೇಜ್, ಗ್ಲಾಸ್ ಹೌಸ್, ಅಂಗ ವಿಕಲರ ಸ್ಕೂಲ್ ಹಾಗೂ ಸುತ್ತಮುತ್ತಲಿನ ಪ್ರದೇಶ, ನಿಟುವಳ್ಳಿ ಹಾಗೂ ನಿಟುವಳ್ಳಿ ಹೊಸಬಡಾವಣೆ, ದುರ್ಗಾಂಬಿಕ ದೇವಸ್ಥಾನ ಸುತ್ತಮುತ್ತ, 60 ಅಡಿ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

**ಮಾನ್ಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಸಿ.ಜೆ.ಎಂ ನ್ಯಾಯಾಲಯ ದಾವಣಗೆರೆ.**

**ಸಿಆರ್-ಮಿಸ್ ನಂ. 23 : 2022**

**ಅರ್ಜಿದಾರ :** 1) **ಶ್ರೀ ಹಾಲೇಶ್ ಸಿ. ತಂದೆ ಲೇಟ್ ಚಂದ್ರಪ್ಪ**, ವಯಸ್ಸು 31 ವರ್ಷ, ವೃತ್ತಿ: ತರಗಾರ ಕೆಲಸ, ವಾಸ: 11ನೇ ಕ್ರಾಸ್ ಭಾರತ್ ಕಾಲೋನಿ, ದಾವಣಗೆರೆ. ಆಧಾರ್ ನಂ. 8429 8251 3662. 2) **ಶ್ರೀ ಸಂತೋಷ್ ಸಿ. ತಂದೆ ಲೇಟ್ ಚಂದ್ರಪ್ಪ**, ವಯಸ್ಸು 28 ವರ್ಷ, ವೃತ್ತಿ ತರಗಾರ ಕೆಲಸ, ವಾಸ: 11ನೇ ಕ್ರಾಸ್ ಭಾರತ್ ಕಾಲೋನಿ ದಾವಣಗೆರೆ. 3) **ಲಕ್ಷ್ಮಿ ಸಿ. ತಂದೆ ಲೇಟ್ ಚಂದ್ರಪ್ಪ ಗಂಡ ಪ್ರಕಾಶ್ ಪಿ.** ವಯಸ್ಸು 25 ವರ್ಷ, ವೃತ್ತಿ: ಮನೆಗೆಲಸ, ವಾಸ: ನಂ.86 ವೊಡ್ಡಿನಹಳ್ಳಿ ಗ್ರಾಮ, ದಾವಣಗೆರೆ ತಾ, ಜಿ, ಆಧಾರ್ ನಂ. 7091 4136 2341

**ವಿರುದ್ಧ:** ಜನನ -ಮರಣ ನೋಂದಣಾಧಿಕಾರಿಗಳು ಹಾಗೂ ತಹಶೀಲ್ದಾರ್ ದಾವಣಗೆರೆ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ ಅಡಿ ನೀಡಲಾದ ಪತ್ರಿಕಾ ಪ್ರಕಟಣೆ ನೋಟಿಸ್**

ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರರು ಮಾನ್ಯ ಘನ ನ್ಯಾಯಾಲಯದಲ್ಲಿ ತಮ್ಮ ತಾಯಿಯ ಮರಣ ಪತ್ರ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿದಾರರ ತಾಯಿಯ ಹೆಸರು ಶ್ರೀಮತಿ ಗೌರಮ್ಮ ಗಂಡ ಲೇಟ್ ಚಂದ್ರಪ್ಪ ಎಂದು ಇರುತ್ತದೆ. ಅರ್ಜಿದಾರರ ತಾಯಿ ಶ್ರೀಮತಿ ಗೌರಮ್ಮ ಗಂಡ ಲೇಟ್ ಚಂದ್ರಪ್ಪ ಇವರು ತಾ.05.09.2006ರಂದು ಹೊನ್ನೂರು ಗ್ರಾಮ, ದಾವಣಗೆರೆ ತಾಲ್ಲೂಕು ಇಲ್ಲಿ ಮರಣ ಹೊಂದಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಬೇರೆ ಯಾರಾದಾದರೂ ತಕರಾರು ಇದ್ದಲ್ಲಿ ನಿಮ್ಮ ಹಾಜರಾತಿಗಾಗಿ ತಾ. 03.3.2022 ರಂದು ಬೆಳಿಗ್ಗೆ 11 ಗಂಟೆಗೆ ನೀವು ಖುದ್ದಾಗಿ ಅಥವಾ ವಕೀಲರ ಮುಖಾಂತರವಾಗಿ ಪ್ರಕರಣದಲ್ಲಿ ಹಾಜರಿದ್ದು, ತಕರಾರು ಇದ್ದಲ್ಲಿ ಸಲ್ಲಿತಕ್ಕದ್ದು, ತಪ್ಪಿದಲ್ಲಿ ಸದರಿ ಪ್ರಕರಣವನ್ನು ಏಕಪಕ್ಷೀಯವಾಗಿ ಅರ್ಜಿದಾರರ ಪರ ತೀರ್ಮಾನ ತೆಗೆದುಕೊಳ್ಳಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ತಾ. 15ನೇ ಫೆಬ್ರವರಿ 2022ರಂದು ಕೊಡಲ್ಪಟ್ಟಿದೆ.

ಅರ್ಜಿದಾರರ ಪರ ವಕೀಲರು
**ಶ್ರೀ ಕೆ. ನಾಗಕುಮಾರಸ್ವಾಮಿ ಮತ್ತಿ ಶ್ರೀ ಕೆ.ಎಸ್ ಉಮಾ,** ವಕೀಲರು
ಗೌರಿ ಶಂಕರ ನಿಲಯ, ನಂ. 571/2, 1ನೇ ಸ್ಟೇಜ್, ಹದಡಿ ರೋಡ್,
ಶಿವಕುಮಾರಸ್ವಾಮಿ ನಗರ, ದಾವಣಗೆರೆ-577005
ಸ್ಥಳ: ದಾವಣಗೆರೆ ದಿನಾಂಕ: 15.02.2022

ನ್ಯಾಯಾಲಯದ ಆದೇಶದ ಮೇರಗೆ
ಸಹಿ/- **ಶಿರಸ್ತೇದಾರರು**
ಗೌರವಾನ್ವಿತ ಪ್ರಧಾನ ಹಿರಿಯ ಸಿವಿಲ್
ಹಾಗು ಸಿ.ಜೆ.ಎಂ ನ್ಯಾಯಾಲಯ

**ಹುಟ್ಟುಹಬ್ಬದ ಶುಭಾಶಯಗಳು**



ಬಾಪೂಜಿ ಶಾಲೆಯ
ನಿವೃತ್ತ ಮುಖ್ಯೋಪಾಧ್ಯಾಯರೂ,
ಶಿಕ್ಷಣ ತಜ್ಞರೂ,
ನಮ್ಮ ಗುರುಗಳೂ,
ಹಿರಿಯ ಮುತ್ಸದ್ಧಿಗಳೂ ಆದ
**ಶ್ರೀ ಕೆ. ಇಮಾಂ**
ಅವರಿಗೆ 82ನೇ ವರ್ಷದ
ಹುಟ್ಟುಹಬ್ಬದ ಶುಭಾಶಯಗಳು.

- ♦ **ಬಿ. ವೀರಣ್ಣ, ಅಧ್ಯಕ್ಷರು,** ಜಿಲ್ಲಾ ವಾಲ್ಮೀಕಿ ನಾಯಕ ಸಮಾಜ
- ♦ **ಶ್ರೀಮತಿ ಲಕ್ಷ್ಮಿದೇವಿ ವೀರಣ್ಣ,** ಸದಸ್ಯರು, ಮಹಾನಗರ ಪಾಲಿಕೆ
- ♦ **ಶ್ರೀಮತಿ ಬಿ.ವಿ. ಪಲ್ಲವಿ ಮತ್ತು ಪವನ್ ಕುಮಾರ್**
- ♦ **ಬಿ.ವಿ. ಪ್ರಮೋದ್, ಬಿ.ವಿ. ಪರಶುರಾಮ್, ಚಿ. ಪ್ರಜ್ವಲ್**
- ♦ **ಬಸವರಾಜ್**

**ಮಾನ್ಯ 1ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ**

**ಅಸಲು ದಾವಾ ನಂ. 17/2020**
**ವಾದಿ : ಕರ್ನಾಟಕ ಬ್ಯಾಂಕ್ ಲಿ.,**
**ವಿರುದ್ಧ**
**ಪ್ರತಿವಾದಿ: ಶ್ರೀ ಯಶವಂತಕುಮಾರ್ ಪಿ.**

ಶ್ರೀ ಯಶವಂತಕುಮಾರ್ ಪಿ. ತಂದೆ ಪುಟ್ಟಭೋವಿ, ವಯಸ್ಸು 30 ವರ್ಷ, ಪೊಲೀಸ್ ಪೇದೆ C/o ಪೊಲೀಸ್ ಠಾಣೆ, ಸಂತೇಬೆನ್ನೂರು ಗ್ರಾಮ - 577552 ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ

**ಆದೇಶ 5 ನಿಯಮ 20ರ ವ್ಯವಹಾರ ಪ್ರಕ್ರಿಯಾ ಸಂಹಿತೆ ಪ್ರಕಾರ ಪ್ರತಿವಾದಿಗೆ ನೋಟೀಸ್**

ಈ ಮೇಲ್ಕಂಡ ದಾವೆಯನ್ನು ವಾದಿಯು ಪ್ರತಿವಾದಿಯ ವಿರುದ್ಧ ಸಾಲದ ಹಣ ರೂ. 45,745.00 ಗಳ ವಸೂಲಾತಿಗಾಗಿ ಸಲ್ಲಿಸಿರುತ್ತಾರೆ. ಸದರಿ ದಾವೆಯನ್ನು ನಿಮ್ಮ ಹಾಜರಾತಿಗಾಗಿ ಘನ ನ್ಯಾಯಾಲಯವು ದಿನಾಂಕ 29.03.22ರಂದು ಮುದ್ದತ್ತು ನಿಗದಿಪಡಿಸಿರುತ್ತದೆ. ಆದ್ದರಿಂದ ಸದರಿ ತಾರೀಖಿನಂದು ನೀವು ಖುದ್ದಾಗಲೀ ಅಥವಾ ನಿಮ್ಮ ವಕೀಲರ ಮೂಲಕವಾಗಲೀ ಮೇಲ್ಕಂಡ ಘನ ನ್ಯಾಯಾಲಯದಲ್ಲಿ ಬೆಳಿಗ್ಗೆ 11 ಗಂಟೆಗೆ ಹಾಜರಾಗಿ ನಿಮ್ಮ ತಕರಾರು ಇದ್ದರೆ ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಮೇಲ್ಕಂಡ ದಾವೆಯನ್ನು ನಿಮ್ಮ ವಿರುದ್ಧ ಏಕ ಪಕ್ಷೀಯವಾಗಿ ತೀರ್ಮಾನ ಮಾಡಲಾಗುವುದು.

ನ್ಯಾಯಾಲಯದ ಮೊಹರು ಹಾಗೂ ನನ್ನ ಸಹಿಯೊಂದಿಗೆ ದಿನಾಂಕ 16.02.2022ರಂದು ನೀಡಲಾಗಿದೆ.

**ಎ.ಎಂ. ಹೆಗಡೆ** ವಾದಿಯ ಪರ ವಕೀಲರು
ಸ್ಥಳ: ದಾವಣಗೆರೆ ದಿನಾಂಕ : 16.02.22

ನ್ಯಾಯಾಲಯದ ಆದೇಶದ ಮೇರೆಗೆ
**ಶಿರಸ್ತೇದಾರರು**
ಮಾನ್ಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರವರ
ಮತ್ತು ಸಿ.ಜೆ.ಎಂ ನ್ಯಾಯಾಲಯ ದಾವಣಗೆರೆ.

# ಭರಮಣ್ಣ ನಾಯಕನ ಕೆರೆ ಏರಿ ಬಿರುಕು ಸ್ಥಳಕ್ಕೆ ಮುರುಘಾ ಶರಣರ ಭೇಟಿ : ಪರಿಶೀಲನೆ



ಚಿತ್ರದುರ್ಗ ಫೆ. 16- ಭರಮಸಾಗರದ ಹತ್ತಿರವಿರುವ ಭರಮಣ್ಣ ನಾಯಕನ ಕೆರೆಗೆ ಡಾ. ಶಿವಮೂರ್ತಿ ಮುರುಘಾ ಶರಣರು ಭೇಟಿ ನೀಡಿ ಬಿರುಕು ಬಿಟ್ಟಿರುವ ಕೆರೆಯ ಏರಿಯನ್ನು ಪರಿಶೀಲಿಸಿದರು.

ಅನೇಕ ವರ್ಷಗಳಿಂದ ಖಾಲಿ ಇದ್ದ ಕೆರೆಗೆ ಈಗ ನೀರು ತುಂಬಿಸಿರುವುದು ಅತ್ಯಂತ ಶ್ಲಾಘನೀಯ. ಆದರೆ ಕೆರೆ ಬಿರುಕು ಬಿಟ್ಟಿರುವುದು ನಮಗೆಲ್ಲ ದೊಡ್ಡ ಸಂದೇಶವನ್ನು ಕೊಡುತ್ತದೆ. ಬಿರುಕು ಬಿಡುವುದು ಸಾಮಾನ್ಯ. ಆದರೆ ಕೆರೆಗೆ ನೀರು ತುಂಬಿಸುವಾಗ ತಜ್ಞರ ಸಲಹೆ, ಸೂಚನೆ ಪಡೆಯುವುದು ಸೂಕ್ತ ಎಂದು ಶರಣರು ತಿಳಿಸಿದರು.

ಜನರು ಕೆರೆ ತುಂಬಿದೆ ಎನ್ನುತ್ತಾರೆ. ಕೆರೆ ಏರಿ ಹೇಗಿದೆ ಎಂದು ನೋಡುವುದಿಲ್ಲ. ಇದು ನಮಗೂ, ನಿಮಗೂ, ಸರ್ಕಾರಕ್ಕೂ, ಸಂಘ-ಸಂಸ್ಥೆಗಳಿಗೆ ದೊಡ್ಡ ಅನುಭವ. ಏನೇ ಆಗಲಿ ದುರಸ್ತಿ ಕಾರ್ಯವು ಭರದಿಂದ ಸಾಗಿರುವುದು ಸಂತೋಷವನ್ನು ತಂದಿದೆ ಎಂದು ಶರಣರು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಹೆಬ್ಬಾಳು ರುದ್ರೇಶ್ವರ ವಿರಕ್ತಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮಿಗಳು, ದಾವಣಗೆರೆ ವಿರಕ್ತಮಠದ ಶ್ರೀ ಬಸವ ಪ್ರಭು ಸ್ವಾಮೀಜಿ, ಮುಖಂಡರಾದ ಎಸ್.ಎಂ.ಎಲ್. ತಿಪ್ಪೇಸ್ವಾಮಿ, ಡಿ.ವಿ. ಶರಣಪ್ಪ, ಎ.ಜೆ. ಪರಮಶಿವಯ್ಯ, ಶೈಲೇಶ್, ಶಿವಬಸಯ್ಯ, ಡಿ.ವಿ.ಎಸ್. ಪ್ರದೀಪ್, ಪ್ರವೀಣ್, ಎಸ್.ಎಂ.ಎಲ್. ಕಿರಣ್, ಕೋಗುಂಡೆ ಮಂಜಣ್ಣ, ತೀರ್ಥಪ್ಪ, ನಾಗೇಂದ್ರಪ್ಪ, ಕೃಷ್ಣಮೂರ್ತಿ, ಕಲ್ಲೇಶ್, ತುರುವನೂರು ಚನ್ನೇಶ್ ಮತ್ತಿತರರಿದ್ದರು.

# ಹರಿಹರ: ಮಾ.22ರಿಂದ ಊರಮ್ಮ ದೇವಿ ಹಬ್ಬ

## ಹರಿಹರೇಶ್ವರ ರಥೋತ್ಸವ ವಿಷಯದಲ್ಲಿ ಜಿಲ್ಲಾಧಿಕಾರಿ ತುಘಲಕ್ ದರ್ಬಾರ್ : ಶಾಸಕರ ಅಸಮಾಧಾನ

ಹರಿಹರ, ಫೆ. 16 - ನಗರದ ಗ್ರಾಮದೇವತೆ ಊರಮ್ಮ ದೇವಿಯ ಹಬ್ಬವನ್ನು ಬರುವ ಮಾರ್ಚ್ 22 ರಿಂದ 26 ರವರೆಗೆ ಧಾರ್ಮಿಕ ವಿಧಿ, ವಿಧಾನಗಳೊಂದಿಗೆ ಸಡಗರ, ಸಂಭ್ರಮ ದಿಂದ ಆಚರಿಸಲಾಗುತ್ತದೆ. ಸಾರ್ವಜನಿಕ ರಲ್ಲಿ ಯಾವುದೇ ಗೊಂದಲ ಬೇಡ ಎಂದು ಶಾಸಕ ಎಸ್. ರಾಮಪ್ಪ ಹೇಳಿದರು.

ನಗರದ ರಚನಾ ಕ್ರೀಡಾ ಟ್ರಸ್ಟ್ ಸಭಾಂಗಣದಲ್ಲಿ ನಡೆದ ಪತ್ರಿಕಾಗೋಷ್ಠಿ ಯಲ್ಲಿ ಮಾತನಾಡಿದ ಅವರು, ಹಬ್ಬದ ಆಚರಣೆ ಬಗ್ಗೆ ಈಗಾಗಲೇ ಎಲ್ಲಾ ಪೂರ್ವ ಸಿದ್ಧತೆ ಮಾಡಲಾಗುತ್ತಿದೆ. ಕಸಬಾ ಮತ್ತು ಮಾಜೇನಹಳ್ಳಿ ಗ್ರಾಮದಲ್ಲಿನ ಭಕ್ತರ ಮನೆಗಳಿಗೆ ದೇವಿಯ ಮೂರ್ತಿಯನ್ನು ತೆಗೆದುಕೊಂಡು ಹೋಗಿ ಪೂಜಾ ಕಾರ್ಯಗಳನ್ನು ಮಾಡಲಾಗಿದೆ ಎಂದರು.

ಬರುವ ಶುಕ್ರವಾರ ಬೆಳಗ್ಗೆ 12 ಕ್ಕೆ ಹಂದರಗಂಬ ಪೂಜೆ ಮಾಡಲಾಗುತ್ತದೆ. ಸಾರ್ವಜನಿಕರು ಯಾವುದೇ ಗೊಂದಲಕ್ಕೆ ಸಿಲುಕ ಬಾರದು ಎಂದವರು ತಿಳಿಸಿದರು.

ಹಬ್ಬದ ಆಚರಣೆ ವಿಚಾರಕ್ಕೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮತ್ತು ತಹಶೀಲ್ದಾರ್ ಕೆ. ಬಿ. ರಾಮಚಂದ್ರಪ್ಪನವರೊಂದಿಗೆ ಚರ್ಚೆ ಕೂಡ ಮಾಡಲಾಗಿದೆ. ಅವರು ಸಮ್ಮತಿಸುವ ವಿಶ್ವಾಸವಿದೆ. ಹಾಗಾಗಿ ಗ್ರಾಮದೇವತೆ ಹಬ್ಬವನ್ನು ಸಡಗರ, ಸಂಭ್ರಮದಿಂದ ಆಚರಿಸಲಾಗುತ್ತದೆ ಎಂದು ಹೇಳಿದರು.

ಹಬ್ಬದ ಆಚರಣೆ ವೇಳೆ ಕುಸ್ತಿ, ಎತ್ತಿನ ಬಂಡಿ ಓಟ, ಬೆಲ್ಲದ ಬಂಡಿ ಸ್ಪರ್ಧೆ ಸೇರಿದಂತೆ ವಿವಿಧ ಕ್ರೀಡೆಗಳನ್ನೂ ಸಹ ನಡೆಸಲಾಗುತ್ತದೆ ಎಂದರು.

ಹರಿಹರೇಶ್ವರ ರಥೋತ್ಸವ ಆಚರಣೆಗೆ ತಹಶೀಲ್ದಾರರ್ ಮತ್ತು ಜಿಲ್ಲಾಧಿವಕಾರಿಗಳು 144ನೇ ಸೆಕ್ಷನ್ ನೆಪ ಮಾಡಿಕೊಂಡು ಹರಿಹರೇಶ್ವರ ರಥೋತ್ಸವವ ಬೆಳಗಿನ ಜಾವ 5.20ಕ್ಕೆ ಮೂರು ಹೆಜ್ಜೆಗಳನ್ನು ಹಾಕಿಸಿ ರಥೋತ್ಸವ ನಡೆಯದಂತೆ ಮಾಡಿದ್ದಾರೆ. ಇದ ರಿಂದಾಗಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮತ್ತು ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪನವರ ಮೇಲೆ ನಗರದ ಜನತೆ ಅಸಮಾಧಾನ ಹೊಂದಿದ್ದಾರೆ. ಜಿಲ್ಲಾಧಿಕಾರಿಗಳು ತುಘಲಕ್ ದರ್ಬಾರ್ ಮಾಡುತ್ತಿದ್ದಾರೆ. ಅವರ ವರ್ತನೆಯ ಬಗ್ಗೆ ನಾನು ವಿಧಾನಸಭೆ ಅಧಿವೇಶನದಲ್ಲಿ ಮಾತನಾಡುತ್ತೇನೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಾಜೇನಹಳ್ಳಿ ಗೌಡ್ರು ಚನ್ನಬಸಪ್ಪ, ಕಸಬಾ ಗೌಡ್ರು ಲಿಂಗರಾಜ್ ಪಾಟೀಲ್, ಉತ್ಸವ ಸಮಿತಿಯ ಅಧ್ಯಕ್ಷ ಕೆ. ಅಣ್ಣಪ್ಪ , ಕಾರ್ಯದರ್ಶಿ ಬೆಣ್ಣೆ ರೇವಣಸಿದ್ದಪ್ಪ, ಖಜಾಂಚಿ ಶೇರಾಪುರ ರಾಜಪ್ಪ, ಸಹ ಕಾರ್ಯದರ್ಶಿ ಪಾಲಾಕ್ಷ, ನಗರಸಭೆಯ ಮಾಜಿ ಅಧ್ಯಕ್ಷ ಬಿ.ರೇವಣಸಿದ್ದಪ್ಪ, ನಗರಸಭೆ ಸದಸ್ಯ ಶಂಕರ್ ಖಟಾವ್ಕರ್, ಕೆ.ಬಿ. ರಾಜಶೇಖರ, ಹಳ್ಳದಕೇರಿ ನಿಜಗುಣ, ಗೀರೀಶ್ ಗೌಡ್ರು, ಹಂಚಿನ ನಾಗರಾಜಪ್ಪ, ನಾಗರಾಜ್ ಮೆಹರ್ವಾಡೆ, ಬಸವರಾಜಪ್ಪ, ಕಾಂತರಾಜ್ ಮತ್ತಿತರರು ಉಪಸ್ಥಿತರಿದ್ದರು.

# ನೂತನ ಪ್ರಭಾರ ಐಜಿಪಿಯಾಗಿ ತ್ಯಾಗರಾಜನ್



ದಾವಣಗೆರೆ, ಫೆ.16- ಪೂರ್ವ ವಲಯದ ಪ್ರಭಾರ ಪೊಲೀಸ್ ಮಹಾ ನಿರೀಕ್ಷಕರಾಗಿ ಡಾ. ಕೆ. ತ್ಯಾಗರಾಜನ್ ಇಂದು ಅಧಿಕಾರ ವಹಿಸಿಕೊಂಡರು.

ತ್ಯಾಗರಾಜನ್ ಅವರು ಇಂದು ನಗರದ ಪೂರ್ವ ವಲಯ ಐಜಿಪಿ ಕಚೇರಿಯಲ್ಲಿ ಅಧಿಕಾರ ಸ್ವೀಕರಿಸಿದ್ದಾರೆ.

ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಸಿ.ಬಿ.ರಿಷ್ಯಂತ್, ಐ.ಪಿ.ಎಸ್, ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ರಾಮಗೊಂಡ ಬಿ.ಬಸರಗಿ ಸೇರಿದಂತೆ ಪೊಲೀಸ್ ಅಧಿಕಾರಿಗಳು ನೂತನ ಪ್ರಭಾರ ಐಜಿಪಿ ಅವರನ್ನು ಗೌರವ ಪೂರ್ವಕವಾಗಿ ಸ್ವಾಗತಿಸಿದರು.

# ಸಮವಸ್ತ್ರ ; ಹೈಕೋರ್ಟ್ ಆದೇಶ ಪಾಲನೆ ಕಡ್ಡಾಯ : ಮುಖ್ಯಮಂತ್ರಿ

ಬೆಂಗಳೂರು, ಫೆ. 16 - ಸಮವಸ್ತ್ರ ಧರಿಸುವಿಕೆ ಕುರಿತಂತೆ ಹೈಕೋರ್ಟ್‌ನ ವಿಸ್ತೃತ ಪೀಠ ನೀಡಿರುವ ಮಧ್ಯಂತರ ಆದೇಶವನ್ನು ಪ್ರತಿಯೊಬ್ಬರು ಪಾಲನೆ ಮಾಡಲೇಬೇಕಾಗುತ್ತದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಧಾನಸಭೆಯಲ್ಲಿ ತಿಳಿಸಿದ್ದಾರೆ.

ಶೂನ್ಯ ವೇಳೆಯಲ್ಲಿ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ವಿಷಯ ಪ್ರಸ್ತಾಪಿಸಿ, ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥ್ ನಾರಾಯಣ ಅವರು ನಿನ್ನೆ ಚಾಮರಾಜನಗರದಲ್ಲಿ ಪದವಿ, ಪದವಿಪೂರ್ವ ಕಾಲೇಜುಗಳಲ್ಲಿ ಸರ್ಕಾರ ಸಮವಸ್ತ್ರ ಕಡ್ಡಾಯ ಮಾಡಿಲ್ಲ. ಯಾರು ಯಾವ ಬಟ್ಟೆಗಳನ್ನಾದರೂ ಹಾಕಿಕೊಂಡು ಬರಬಹುದೆಂದು ಹೇಳಿದ್ದಾರೆ. ಸರ್ಕಾರ ಇದರಂತೆ ನಡೆದುಕೊಳ್ಳಬೇಕು ಎಂದು ಒತ್ತಾಯಿಸಿದರು.

ಬೊಮ್ಮಾಯಿ ಅವರು ಪ್ರತಿಕ್ರಿಯಿಸಿ, ಯಾವ ಕಾಲೇಜುಗಳಲ್ಲಿ ಸಮವಸ್ತ್ರ ನೀತಿ ಇದೆಯೋ ಅಲ್ಲಿ ಅದರಂತೆ ನಡೆದುಕೊಳ್ಳಬೇಕು. ಎಲ್ಲಿ ಸಮವಸ್ತ್ರ ಇಲ್ಲವೋ ಅಲ್ಲಿ ವಿದ್ಯಾರ್ಥಿಗಳು ತಮ್ಮಗಿಷ್ಟ ಬಂದ ಬಟ್ಟೆಗಳನ್ನು ಧರಿಸಬಹುದು. ಈಗ ಹೈಕೋರ್ಟ್‌ನ ವಿಸ್ತೃತ ಪೀಠ ನೀಡಿರುವ ಮಧ್ಯಂತರ ಆದೇಶದಂತೆ ವಿದ್ಯಾರ್ಥಿಗಳು ನಡೆದುಕೊಳ್ಳಬೇಕೆಂದು ಮನವಿ ಮಾಡಿದರು.

## 4 ವರ್ಷದೊಳಗಿನ ಮಕ್ಕಳಿಗೆ ಹೆಲ್ಮೆಟ್ ಕಡ್ಡಾಯಗೊಳಿಸಲು ನಿಯಮ

ನವದೆಹಲಿ, ಫೆ. 16 – ಮೋಟರ್ ಸೈಕಲ್‌ನಲ್ಲಿ ತೆರಳುವ ನಾಲ್ಕು ವರ್ಷದೊಳಗಿನ ಮಕ್ಕಳಿಗೆ ಅಪಘಾತದ ಹೆಲ್ಮೆಟ್ ಧರಿಸುವುದನ್ನು ಕಡ್ಡಾಯಗೊಳಿಸಲು ಕೇಂದ್ರ ರಸ್ತೆ ಸಾರಿಗೆ ಸಚಿವಾಲಯ ನಿಯಮಗಳನ್ನು ರೂಪಿಸಿದೆ. ಹೊಸ ನಿಯಮಗಳ ಅನ್ವಯ ನಾಲ್ಕು ವರ್ಷದವರೆಗಿನ ಮಕ್ಕಳನ್ನು ಮೋಟರ್‌ಸೈಕಲ್‌ನಲ್ಲಿ ಕರೆದುಕೊಂಡು ಹೋಗುತ್ತಿದ್ದರೆ, ವೇಗ 40 ಕಿ.ಮೀ. ದಾಟುವಂತಿಲ್ಲ. ಈ ನಿಯಮಗಳು ಅಧಿಸೂಚನೆ ಪ್ರಕಟಗೊಂಡ ಒಂದು ವರ್ಷದ ನಂತರ ಜಾರಿಗೆ ಬರಲಿವೆ.

# ಹೊರಗುತ್ತಿಗೆ ಡಿ ದರ್ಜೆ ನೌಕರರಿಗೆ ಏಜೆನ್ಸಿಯ ಚೆಕ್‌ನಲ್ಲಿ ವೇತನ

ಬೆಂಗಳೂರು, ಫೆ. 16 - ಸರ್ಕಾರದ ಬೇರೆ ಬೇರೆ ಇಲಾಖೆಗಳಲ್ಲಿ ಹೊರಗುತ್ತಿಗೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಡಿ ದರ್ಜೆ ನೌಕರರಿಗೆ ಇನ್ನು ಮುಂದೆ ಏಜೆನ್ಸಿಯ ಚೆಕ್ ಮೂಲಕವೇ ವೇತನ ನೀಡಲಾಗುವುದು ಎಂದು ಸಚಿವ ಗೋವಿಂದ ಕಾರಜೋಳ ವಿಧಾನಸಭೆಯಲ್ಲಿ ತಿಳಿಸಿದರು.

ಶೂನ್ಯವೇಳೆಯಲ್ಲಿ ಕೆ.ಆರ್.ರಮೇಶ್‌ಕುಮಾರ್ ಅವರು ವಿಷಯ ಪ್ರಸ್ತಾಪಿಸಿ ತೋಟಗಾರಿಕೆ, ಲೋಕೋಪಯೋಗಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ದಿನಗೂಲಿ ನೌಕರರಿಗೆ ಆರೇಳು ತಿಂಗಳಿನಿಂದ ವೇತನ ಬಿಡುಗಡೆಯಾಗಿಲ್ಲ.

ಇತ್ತೀಚೆಗೆ ಅವರ ಕುಟುಂಬದ ಸದಸ್ಯರು, ಮಕ್ಕಳು ನನ್ನ ಬಳಿ ಬಂದು ತಮ್ಮ ಸಮಸ್ಯೆಯನ್ನು ತೋಡಿಕೊಂಡಿದ್ದಾರೆ. ಆರೇಳು ತಿಂಗಳಿನಿಂದ ವೇತನ ಸಿಗದಿದ್ದರೆ ಅವರು ಜೀವನ ನಿರ್ವಹಿಸುವುದು ಹೇಗೆ? ಎಂದು ಪ್ರಶ್ನಿಸಿದರು.

ಇದಕ್ಕೆ ಉತ್ತರಿಸಿದ ಕಾರಜೋಳ ಅವರು, ವಾಟರ್ ಮನ್‌ಗಳು, ತೋಟಗಾರಿಕೆ ಸಹಾಯಕರು, ವಿವಿಧ ಇಲಾಖೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯನ್ನು ಹೊರಗುತ್ತಿಗೆ ಮೇಲೆ ನೇಮಕ ಮಾಡಿಕೊಳ್ಳಲಾಗುತ್ತದೆ. ಇವರನ್ನು ಏಜೆನ್ಸಿ ಮೂಲಕ ನಾವು ತೆಗೆದುಕೊಳ್ಳುತ್ತೇವೆ. ಇನ್ನು ಮುಂದೆ ಇವರಿಗೆ ಏಜೆನ್ಸಿಯವರೇ ಸಕಾಲಕ್ಕೆ ಸರಿಯಾಗಿ ಚೆಕ್ ಮೂಲಕ ವೇತನ ನೀಡಲು ಕ್ರಮ ತೆಗೆದುಕೊಳ್ಳುವುದಾಗಿ ಹೇಳಿದರು.

ವಿವಿಧ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಡಿ ದರ್ಜೆ ನೌಕರರನ್ನು 1985 ರಿಂದ ಖಾಯಂ ಮಾಡುವುದನ್ನು ನಿಲ್ಲಿಸಿದ್ದೇವೆ.

ಹೊರಗುತ್ತಿಗೆ ಮೂಲಕ ನೌಕರರನ್ನು ನೇಮಕ ಮಾಡಿಕೊಂಡರೆ ಕೊನೆಗೆ ಅದೇ ನೌಕರರು ಕಾರ್ಮಿಕ ಇಲಾಖೆ ಮೂಲಕ ನ್ಯಾಯಾಲಯದ ಮೆಟ್ಟಿಲೇರಿ ನಮ್ಮನ್ನು ಖಾಯಂಗೊಳಿಸುವಂತೆ ಪಟ್ಟು ಹಿಡಿಯುತ್ತಾರೆ. ಹೀಗಾಗಿ ಅವರನ್ನು ಏಜೆನ್ಸಿ ಮೂಲಕವೇ ತೆಗೆದುಕೊಳ್ಳುತ್ತಿದ್ದೇವೆ ಎಂದು ಸ್ಪಷ್ಟನೆ ನೀಡಿದರು.

## ಕೊರೊನಾ ನಿರ್ಬಂಧಗಳ ಮರು ಪರಿಶೀಲನೆಗೆ ಸೂಚನೆ

ನವದೆಹಲಿ, ಫೆ. 16 – ದೇಶಾದ್ಯಂತ ಕೊರೊನಾ ಪ್ರಕರಣಗಳ ಸಂಖ್ಯೆ ಇಳಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ, ನಿರ್ಬಂಧಗಳನ್ನು ಮರು ಪರಿಶೀಲಿಸುವಂತೆ ರಾಜ್ಯಗಳಿಗೆ ಕೇಂದ್ರ ಸರ್ಕಾರ ತಿಳಿಸಿದೆ.

ಕಳೆದ ಜನವರಿ 21ರಿಂದ ಪ್ರತಿದಿನ ಕಂಡು ಬರುವ ಕೊರೊನಾ ಪ್ರಕರಣಗಳಲ್ಲಿ ಇಳಿಕೆಯಾಗಿದೆ. ಪಾಸಿಟಿವಿಟಿ ದರ ಮಂಗಳವಾರದಂದು ಶೇ.3.63 ಆಗಿದ್ದು, 27,409 ಪ್ರಕರಣಗಳು ಕಂಡು ಬಂದಿವೆ.

# ದೇವರಾಜ ಅರಸು ಬಡಾವಣೆಯ ಅನ್ನಪೂರ್ಣೇಶ್ವರಿ ದೇವಿಯ ರಥೋತ್ಸವ



ದಾವಣಗೆರೆ, ಫೆ.16- ನಗರದ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಿಯ ರಥೋತ್ಸವವು ನಿನ್ನೆ ವಿಜೃಂಭಣೆಯಿಂದ ಜರುಗಿತು.

ಶ್ರೀಮತಿ ಪ್ರಭಾ ಎಸ್.ಎಸ್.ಮಲ್ಲಿಕಾರ್ಜುನ್ ಅವರು ದೇವಿಯ ದರ್ಶನ ಪಡೆದು ರಥೋತ್ಸವದಲ್ಲಿ ಭಾಗವಹಿಸಿದ್ದರು. ದೇವಸ್ಥಾನದ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್, ಖಜಾಂಚಿ ರಮೇಶ್ ಕಡೆಕೊಪ್ಪ, ನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಆಶಾ ಉಮೇಶ್ ಅವರುಗಳು ಪ್ರಭಾ ಅವರನ್ನು ಸನ್ಮಾನಿಸಿದರು.

ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಪಾಲಿಕೆ ಸದಸ್ಯರುಗಳಾದ ಶ್ರೀಮತಿ ಸುಧಾ ಹಿಟ್ಟಿಗುಡಿ ಮಂಜುನಾಥ, ಶ್ರೀಮತಿ ಸವಿತಾ ಗಣೇಶ್ ಹುಲ್ಮನಿ ಭಾಗವಹಿಸಿದ್ದರು.

ದೇವಸ್ಥಾನ ಸಮಿತಿಯ ಪದಾಧಿಕಾರಿಗಳಾದ ಬಿ.ವಿ.ಶ್ರೀಧರಮೂರ್ತಿ, ವಕೀಲ ಪ್ರಕಾಶ್ ಪಾಟೀಲ್, ಚಲ್ಪತಿ, ನಟರಾಜ್ ಉಮೇಶಣ್ಣ, ಸಾಮಾಜಿಕ ಸೇವಾಕರ್ತ ಕೆ.ಎಂ.ವೀರಯ್ಯ ಸ್ವಾಮಿ ಮತ್ತು ಇತರರು ಉಪಸ್ಥಿತರಿದ್ದರು.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಎಸ್.ಎಸ್.ಬಡಾವಣೆ 'ಎ' ಬ್ಲಾಕ್, ಕುವೆಂಪು ನಗರ, ಎಂ.ಸಿ.ಸಿ. 'ಬಿ' ಬ್ಲಾಕ್, ಸಿದ್ದವೀರಪ್ಪ ಬಡಾವಣೆ, ಶಾಮನೂರು ರೋಡ್, ಗ್ರೀನ್ ಪಾರ್ಕ್, ಬಾಪೂಜಿ ಸಮುದಾಯ ಭವನ, ಬಾಟ್ಲಿ ಬಿಲ್ಡಿಂಗ್, ಬಿಐಇಟಿ ಕಾಲೇಜ್, ಗ್ಲಾಸ್ ಹೌಸ್, ಅಂಗವಿಕಲ ಶಾಲೆ, ನಿಟುವಳ್ಳಿ ಹಾಗು ನಿಟುವಳ್ಳಿ ಹೊಸ ಬಡಾವಣೆ, ದುರ್ಗಾಂಬಿಕ ದೇವಸ್ಥಾನ, 60 ಅಡಿ ರಸ್ತೆ ಸುತ್ತಮುತ್ತ. ಹಳೇ ಭಾಗದ ಎಂ.ಬಿ. ಕೇರಿ, ಹೊಂಡದ ಸರ್ಕಲ್ ಸುತ್ತಮುತ್ತ, ಕಾಯಿಪೇಟೆ, ಜಾಲಿನಗರ, ಟೀಚರ್ ಕಾಲೋನಿ, ಶಿವಾಜಿ ನಗರ, ಶಿವಾಜಿ ಸರ್ಕಲ್, ಚಲುವಾದಿ ಕೇರಿ, ಇಡಬ್ಲ್ಯೂಎಸ್ ಕಾಲೋನಿ, ಹಳೇಪೇಟೆ, ಬಾರ್‌ಲೈನ್ ರಸ್ತೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಹಿರಿಯ ಸಾಹಿತಿ ಚನ್ನವೀರ ಕಣವಿ ಅವರ ನಿಧನಕ್ಕೆ ಎಸ್ಸೆಸ್, ಎಸ್ಸೆಸ್ಸೆಂ ಸಂತಾಪ

ದಾವಣಗೆರೆ, ಫೆ.16 - ಹಿರಿಯ ಸಾಹಿತಿ, ನಾಡೋಜ ಡಾ.ಚೆನ್ನವೀರ ಕಣವಿ ಅವರು ವಿಧಿವಶರಾದ ಸುದ್ದಿ ಅತ್ಯಂತ ದುಃಖವನ್ನು ತಂದಿದ್ದು, ಕಣವಿ ಅವರ ನಿಧನಕ್ಕೆ ಶಾಸಕ ಡಾ.ಶಾಮನೂರು ಶಿವಶಂಕರಪ್ಪ , ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ, ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಸಮನ್ವಯ ಕವಿ ಎಂದೇ ಹೆಸರಾಗಿದ್ದ ಕಣವಿಯವರನ್ನು ಕಳೆದುಕೊಂಡು ಕನ್ನಡ ಸಾರಸ್ವತ ಲೋಕ ಅನಾಥವಾಗಿದೆ. ದೇವರು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ, ಅವರ ಕುಟುಂಬ ಹಾಗೂ ಅಸಂಖ್ಯ ಅಭಿಮಾನಿಗಳಿಗೆ ಅಗಲಿಕೆಯ ನೋವನ್ನು ಭರಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸಿದ್ದಾರೆ.

# ದೇವಾಲಯದ ಗಂಟೆಗೆ ಹೊರಡಿಸಿದ್ದ ನೋಟಿಸ್ ವಾಪಸ್

## ತೀವ್ರ ಆಕ್ಷೇಪದ ನಂತರ ಸರ್ಕಾರದ ನಿರ್ಧಾರ

ಬೆಂಗಳೂರು, ಫೆ. 16 - ದೇವಸ್ಥಾನಗಳ ಪೂಜಾ ವಿಧಿಗಳಲ್ಲಿ ಒಂದಾದ ಜಾಗಟೆ, ಗಂಟೆ, ಶಂಖ ಊದುವುದರಿಂದ ಶಬ್ದ ಮಾಲಿನ್ಯ ಉಂಟಾಗುತ್ತದೆ ಎಂಬ ಸುತ್ತೋಲೆಯನ್ನು ಧಾರ್ಮಿಕ ದತ್ತಿ ಇಲಾಖೆಯು ಹಿಂಪಡೆದಿದೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ವಿಧಾನಸಭೆಗೆ ಇಂದು ತಿಳಿಸಿದರು.

ಶೂನ್ಯ ವೇಳೆಯಲ್ಲಿ ಬಿಜೆಪಿ ಶಾಸಕರಾದ ಸಿ.ಟಿ. ರವಿ ಮತ್ತು ರವಿ ಸುಬ್ರಹ್ಮಣ್ಯ ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರಿಸಿದ ಗೃಹ ಸಚಿವರು, ಈಗಾಗಲೇ ಧಾರ್ಮಿಕ ದತ್ತಿ ಇಲಾಖೆ ಹೊರಡಿಸಿದ್ದ ಆದೇಶವನ್ನು ಹಿಂಪಡೆಯಲಾಗಿದೆ. ಈ ಬಗ್ಗೆ ಯಾರಿಗೂ ಗೊಂದಲ ಬೇಡ ಎಂದು ಸ್ಪಷ್ಟಪಡಿಸಿದರು.

ಯಾವ ಧಾರ್ಮಿಕ ಕೇಂದ್ರಗಳಲ್ಲಿ ಮುಂಜಾನೆ ಈ ರೀತಿಯ ಶಬ್ದ ಉಂಟಾಗುತ್ತಿತ್ತೋ ಅಂತಹ ಎಲ್ಲಾ ಧಾರ್ಮಿಕ ಕೇಂದ್ರಗಳಿಗೂ ನೋಟಿಸ್ ನೀಡಲಾಗಿದೆ ಎಂದವರು ಹೇಳಿದ್ದಾರೆ.

ಇದು ಯಾವುದೇ ಒಂದು ಧರ್ಮ ಅಥವಾ ಸಮುದಾಯವನ್ನು ಗುರಿಯಾಗಿಟ್ಟುಕೊಂಡು ನೋಟಿಸ್ ನೀಡಿರಲಿಲ್ಲ. ಇದರಿಂದ ಕೆಲವು ಗೊಂದಲ ಉಂಟಾಗಿದ್ದರಿಂದ ಈಗ ಆದೇಶವನ್ನು ಹಿಂಪಡೆಯಲಾಗಿದೆ ಎಂದರು.

ಇದಕ್ಕೂ ಮುನ್ನ ಸಿ.ಟಿ.ರವಿ ಮಾತನಾಡಿ, ಸಾವಿರಾರು ವರ್ಷಗಳಿಂದ ದೇವಸ್ಥಾನ ಮತ್ತು ಮನೆಗಳಲ್ಲಿ ಪೂಜೆ, ಪುನಸ್ಕಾರ ಮಾಡುವಾಗ ಶಂಖ ಊದುವುದು, ಗಂಟೆ ಬಾರಿಸುವುದು, ಜಾಗಟೆ ಬಾರಿಸುವುದು ನಡೆದುಕೊಂಡು ಬಂದಿರುವ ಸಂಪ್ರದಾಯ.

ಸಾವಿರಾರು ವರ್ಷಗಳಿಂದಲೂ ಈ ಬಗ್ಗೆ ಯಾರೂ ಕೂಡ ತಕರಾರು ತೆಗೆದಿರಲಿಲ್ಲ. ಈಗ ಏಕಾಏಕಿ ಆಕ್ಷೇಪ ಇದೆ? ಇದರ ಹಿಂದೆ ಯಾವುದಾದರೂ ಪಿತೂರಿ ಇದೆಯೇ? ಎಂದು ಪ್ರಶ್ನಿಸಿದ್ದರು.

# ಧರ್ಮದಲ್ಲಿ ರಾಜಕೀಯ ಬೆರೆಸಬಾರದು



## ಶ್ರೀ ವೀರಭದ್ರೇಶ್ವರ ಸ್ವಾಮಿ ಮೂರ್ತಿಯ 22ನೇ ವರ್ಷದ ವಾರ್ಷಿಕ ಮಹೋತ್ಸವದಲ್ಲಿ ಆವರಗೊಳ್ಳದ ಶ್ರೀಗಳ ಕಳಕಳಿ

ದಾವಣಗೆರೆ, ಫೆ.16- ಧರ್ಮದಲ್ಲಿ ರಾಜಕೀಯ ಬೆರೆಸಬಾರದು. ಇದರಿಂದ ಸಮಾಜಕ್ಕೆ ಧಕ್ಕೆಯಾಗುತ್ತದೆ ಎಂದು ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಅಭಿಪ್ರಾಯಪಟ್ಟರು.

ನಗರದ ಹುಬ್ಬಳ್ಳಿ ಚೌಡಪ್ಪನ ಗಲ್ಲಿಯಲ್ಲಿರುವ ಶ್ರೀ ವೀರಭದ್ರೇಶ್ವರ ಸ್ವಾಮಿ ಮೂರ್ತಿಯ 22ನೇ ವರ್ಷದ ವಾರ್ಷಿಕ ಮಹೋತ್ಸವ ಹಾಗೂ ಧರ್ಮಾಧಿಕಾರಿ ಲಿಂ॥ ಶ್ರೀಮತಿ ಗುರುಬಾಯಮ್ಮನವರ 7ನೇ ವರ್ಷದ ಪುಣ್ಯಸ್ಮರಣೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ, ಶ್ರೀಗಳು ಆಶೀರ್ವಚನ ನೀಡಿದರು.

ದೇವರ ಹೆಸರಿನಲ್ಲಿ ಮುಖವಾಡ ಹಾಕಿಕೊಂಡು ಹಣ ಮಾಡುವವರನ್ನು ನೋಡಿದ್ದೇವೆ. ಆದರೆ, ಇಲ್ಲಿ ನಿಷ್ಕಲ್ಮಶ ಮನಸ್ಸಿನಿಂದ ಭಕ್ತರು ತಮ್ಮ ಕೈಲಾದಷ್ಟು ನಿರಾಪೇಕ್ಷೆಯಿಂದ ಶ್ರದ್ಧಾ - ಭಕ್ತಿಯಿಂದ ಶ್ರೀ ಸ್ವಾಮಿಯ ಆರಾಧನೆ ಮೂಲಕ ಸ್ಮರಿಸುತ್ತಿರುವುದು ಶ್ಲಾಘನೀಯ ಎಂದರು.

ಧರ್ಮ ಮಾರ್ಗದಲ್ಲಿ ಮಾನವ ನಡೆಯುವುದರ ಮೂಲಕ ಧರ್ಮದ ಮೌಲ್ಯಗಳನ್ನು ಬೆಳೆಸಿಕೊಂಡು ಧರ್ಮದ ಚೌಕಟ್ಟಿನಲ್ಲಿ ನಡೆದು ಭಗವಂತನಿಗೆ ತಮ್ಮ ಪ್ರಾರ್ಥನೆಯನ್ನು ಸಲ್ಲಿಸಬೇಕೇ ಹೊರತು, ಧರ್ಮವನ್ನು ವೈಭವೀಕರಿಸಬಾರದು. ಮಠ, ಮಂದಿರ, ಮಸೀದಿ, ಚರ್ಚ್‌ಗಳ ಮೂಲಕ ತಮ್ಮ ಧರ್ಮದ ಆಚರಣೆಯನ್ನು ಮನೆಯಲ್ಲಿಟ್ಟುಕೊಂಡು ಸಂಸ್ಕಾರವಂತರಾಗಿ, ಸಾಮಾಜಿಕ ಜೀವನದಲ್ಲಿ ಸರ್ಕಾರದ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ನಡೆಯಬೇಕು ಎಂದು ತಿಳಿಸಿದರು.

ದುಷ್ಟರ ಶಿಕ್ಷಕ, ಶಿಷ್ಟರ ರಕ್ಷಕ ಶ್ರೀ ವೀರಭದ್ರೇಶ್ವರ ಸ್ವಾಮಿ ನಿಜವಾದ ಧರ್ಮ ಆಚರಣೆಯ ರಕ್ಷಕ. ಅವರ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಮನುಷ್ಯ ಜೀವನದಲ್ಲಿ ಯಶಸ್ವಿಯಾಗುತ್ತಾನೆ. ಉಜ್ವಲವಾದ ಭವಿಷ್ಯದಲ್ಲಿ ಒಳ್ಳೆಯ ಫಲಗಳನ್ನು ಪಡೆಯುತ್ತಾರೆ ಎಂದರು.

ಮತ್ತಿಹಳ್ಳಿ ರೈಸ್ ಮಿಲ್ ಮಾಲೀಕ ಮತ್ತಿಹಳ್ಳಿ ಸಂತೋಷ್, ಎಪಿಎಂಸಿ ಮಾಜಿ ಸದಸ್ಯ ಎನ್. ಅಡಿವೆಪ್ಪ, ಐಶ್ವರ್ಯ ಟ್ರೇಡರ್ಸ್ ಕೊಟ್ರೇಶ್, ವೀರಪ್ಪ ಬಿಜ್ಜೂರು, ಲಿಂಗರಾಜ್ ಹೊಳಬಸಯ್ಯ, ಹರಿಹರ ನಗರಸಭೆ ಸಹಾಯಕ ಇಂಜಿನಿಯರ್ ಎಸ್.ಎಸ್.ಬಿರಾದಾರ್, ವೀರಭದ್ರೇಶ್ವರ ಸ್ವಾಮಿ, ಬೇವಿನ ಹಳ್ಳಿ ಹಾಲೇಶ್, ಕದರಮಂಡಲಗಿ ವೀರಪ್ಪಾಜಿ, ಕರಿಬಸಪ್ಪ ಬಿಜ್ಜೂರ, ಮುಂತಾದವರು ಉಪಸ್ಥಿತರಿದ್ದರು.

ಹಿರಿಯ ಪತ್ರಕರ್ತ ವೀರಪ್ಪ ಬಾವಿ ಕಾರ್ಯಕ್ರಮ ನಿರೂಪಿಸಿದರು.

# 'ಅಂಬಲಿ ರಾಶಿಗೆ ಮುತ್ತಿನ ಗಿಣಿ ಸಂಪಾದಿತಲೇ ಪರಾಕ್...



ಹರಪನಹಳ್ಳಿ, ಫೆ. 16- 'ಅಂಬಲಿ ರಾಶಿಗೆ ಮುತ್ತಿನ ಗಿಣಿ ಸಂಪಾದಿತಲೇ ಪರಾಕ್...' ಇದು ಪಟ್ಟಣದ ಹೊಳಲು ರಸ್ತೆಯಲ್ಲಿರುವ ದೊಡ್ಡ ಮೈಲಾರದ ಮೈಲಾರಲಿಂಗೇಶ್ವರ ಸ್ವಾಮಿ ಜಾತ್ರೆಯ ಈ ಬಾರಿಯ ಕಾರಣಿಕದ ಉಕ್ತಿ.

ಬುಧವಾರ ಭರತ ಹುಣ್ಣಿಮೆ ಅಂಗವಾಗಿ ಇಲ್ಲಿನ ಮೈಲಾರ ಲಿಂಗೇಶ್ವರಸ್ವಾಮಿ ಜಾತ್ರೆ ಪ್ರತಿ ವರ್ಷ ವೈಭವವಾಗಿ ನಡೆಯುತ್ತಿದೆ. ಆದರೆ, ಈ ಬಾರಿ ಕೋವಿಡ್-19 ಸಾಂಕ್ರಾಮಿಕ ರೂಪಾಂತರಿ ವೈರಸ್ ಹರಡುವಿಕೆಯ ನಿಯಂತ್ರಣದ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಸರಳ ಹಾಗೂ ಸಾಂಕೇತಿಕ ಆಚರಣೆಗೆ ಅವಕಾಶ ನೀಡಿದ್ದು, ಭಕ್ತರ ಸೇರುವಿಕೆಯ ಮೇಲೆ ನಿರ್ಬಂಧ ವಿಧಿಸಿದೆ.

ಆದರೂ, ಭಕ್ತರು ತಮ್ಮ ಆರಾಧ್ಯ ದೈವನ ದೈವವಾಣಿ ಆಲಿಸುವ ಹಾಗೂ ಮೈಲಾರ ಲಿಂಗೇಶ್ವರ ದರ್ಶನದ ಹಿನ್ನೆಲೆಯಲ್ಲಿ ನಿರ್ಬಂಧದ ನಡುವೆಯೂ ಸಹಸ್ರಾರು ಭಕ್ತರು ನೆರೆದಿದ್ದರು.

## ಹರಪನಹಳ್ಳಿ ದೊಡ್ಡ ಮೈಲಾರ ಕಾರಣಿಕ

ಸಹಸ್ರಾರು ಭಕ್ತಾದಿಗಳ ನಡುವೆ ಬಿಲ್ಲನ್ನೇರಿದ ಮೈಲಾರಲಿಂಗನ ಗೊರವ ಕೋಟೆಪ್ಪ 'ಸದ್ದಲೇ...' ಎನ್ನುತ್ತಿದ್ದಂತೆಯೇ ಎಲ್ಲವೂ ಕ್ಷಣಕಾಲ ನಿಶ್ಯಬ್ಧವಾಯಿತು. ನಂತರ ಕಾರಣಿಕದ ಉಕ್ತಿಯನ್ನು ನುಡಿದ ಗೊರವಪ್ಪ ಕೆಳಗೆ ಬೀಳುವ ದೃಶ್ಯ ಸ್ವಾಮಿಯ ಪವಾಡದಂತೆ ಗೋಚರಿಸಿತು ಎಂಬುದು ಭಕ್ತರ ಉವಾಚ.

ಪಟ್ಟಣಕ್ಕೆ ಹೊಂದಿಕೊಂಡಿರುವ ಎರಡು ಗುಡ್ಡಗಳ ನಡುವೆ ನೆಲೆಸಿರುವ ಮೈಲಾರಲಿಂಗ, ಭರತ ಹುಣ್ಣಿಮೆಯಂದು ನಡೆಯುವ ಜಾತ್ರೆಗೂ ಮುನ್ನ ಮಣಿಯನ್ನು ಸಂಹಾರ ಮಾಡಲು ಬೆನ್ನಟ್ಟಿದ್ದ ಬೆಟ್ಟ ಏರುತ್ತಾನೆ. ದೇವರ ಗದ್ದುಗೆಯ ಪಾದತಲದಲ್ಲಿದ್ದ ಗೊರವರು ಒಂಬತ್ತು ದಿನಗಳ ಕಾಲ ಉಪವಾಸದ ಕಠಿಣ ವ್ರತ ಆಚರಿಸಿ, ಸ್ವಾಮಿಗೆ ಹರಕೆ ಸಲ್ಲಿಸುವ ಸಂಪ್ರದಾಯ ಇಂದಿಗೂ ನಡೆದುಬಂದಿದೆ.

ಕಾರಣಿಕ ಪ್ರಸಕ್ತ ವರ್ಷದ ಮಳೆ, ಬೆಳೆ, ರಾಜಕೀಯ, ಆರ್ಥಿಕ, ಸಾಮಾಜಿಕ ಬದುಕಿನ ಭವಿಷ್ಯದ ಚಿತ್ರಣದ ದಿಕ್ಸೂಚಿ ಎಂಬುದು ಭಕ್ತರ ಅಭಿಮತ.

ಹಾಗೇ ಈ ಬಾರಿಯ ಕಾರಣಿಕವೂ ಸಹ ಒಳ್ಳೆಯ ಶುಭ ಸಂಕೇತವಾಗಿದೆ ಎಂಬುದು ನೆರೆದ ಭಕ್ತರ ಬಾಯಲ್ಲಿ ಹರಿದಾಡಿದ ವಿಶ್ಲೇಷಣೆ.

ಈ ಸಂದರ್ಭದಲ್ಲಿ ದೇವಸ್ಥಾನ ಸಮಿತಿ ಧರ್ಮದರ್ಶಿ ಪಿ. ದತ್ತಾತ್ರೇಯರಾವ್, ವಂಶ ಪಾರಂಪರಿಕ ಧರ್ಮಕರ್ತರಾದ ನಾಗೇಶ್ವರರಾವ್, ಮಾರ್ತಂಡರಾವ್, ಕೋಟೇಶ್ವರರಾವ್, ಪುರಸಭಾ ಸದಸ್ಯ ಕಿರಣ್ ಶ್ಯಾನಬಾಗ್, ಮಾಜಿ ಸದಸ್ಯ ಬೂದಿ ಕೆಂಚಪ್ಪ ಹಾಗೂ ಇತರರು ಇದ್ದರು.

FOR SALE
2 BHK, RM Shetty Enclave
Flat No-007, 1175 Sq ft
B-Block, SS Layout,
Athani College Road
Ph. : 95353 51700

TANISHQ WE ARE HIRING
RETAIL SALES OFFICER (M/F)
Any Graduate with Min 1-2 Years Experience
Walk-in Interview on 17th Feb Thursday
Between 11.00 am to 4.00 pm
Location: K.J. Hyundai, Avaragere,
P.B.Road, Davanagere.
Send Portfolio to hrjewelsdvg@gmail.com or Call
7022001204

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte